25 November 2025 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com
9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 40 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ನಾವು ಒಬ್ಬರಿಗೆ ಸಹಾಯ ಮಾಡಿದರೆ, ಇಬ್ಬರು ನಮಗೆ ಸಹಾಯ ಮಾಡುತ್ತಾರೆ! ಹಾಗೆಯೇ ನಾವು ಸಮಾಜವನ್ನು ಬೆಳೆಸಿದರೆ ಅದೂ ನಮ್ಮನ್ನು ಬೆಳೆಸುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸಾಧನೆಯಿಂದ ಬದುಕಿನಲ್ಲಿ ಸಂತೋಷ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ, ಆದರೆ, ಸಂತೋಷ ತುಂಬಿದ ಮನಸ್ಸು ದೊಡ್ಡ ಸಾಧನೆಗೆ ಮುನ್ನುಡಿ ಅನ್ನೋದಂತೂ ಸತ್ಯ"
ಮೈಲಾರ ಸಾವಿತ್ರಿಬಾಯಿ

# 3ನೇ ಟೀಮ್ ದೆಹಲಿಗೆ ದೌಡು

## ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತಿರುಗಿಬಿದ್ದ ಡಿಕೆಶಿ ಆಪ್ತ ಶಾಸಕರು ನೇರ ಅಖಾಡಕ್ಕೆ

**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದಂತೆಯೇ ಕೆಲವು ದಿನಗಳಿಂದ ಚರ್ಚೆಯಾಗುತ್ತಿದ್ದ ಅಧಿಕಾರ ಹಂಚಿಕೆ ವಿವಾದ ಈ ಭುಗಿಲೆದ್ದಿದೆ. ಮುಖ್ಯಮಂತ್ರಿ ಕುರ್ಚಿಯನ್ನು ಪಡದೇ ಪಡೆಯುವುದಾಗಿ ಹಠಕ್ಕೆ ಬಿದ್ದಿರುವ ಡಿ.ಕೆ. ಶಿವಕುಮಾರ್ ಅವರು ಈಗ ತಮ್ಮ ಆಟ ಶುರು ಮಾಡಿದ್ದಾರೆ. ಡಿಕೆಶಿ ಬಣದ ಶಾಸಕರು ಹಂತ ಹಂತವಾಗಿ ದೆಹಲಿ ಯಾತ್ರೆ ನಡೆಸುತ್ತಿದ್ದಾರೆ. ಈಗ 3ನೇ ಬ್ಯಾಚ್ ದೆಹಲಿ ತಲುಪಿದೆ.

ಶಾಸಕರಾದ ಮಾಗಡಿ ಬಾಲಕೃಷ್ಣ, ಉದಯ್ ಕದಲೂರು, ನಯನ ಮೋಟಮ್ಮ, ಇಕ್ಬಾಲ್ ಹುಸೇನ್ ಹಾಗೂ ಶರತ್ ಬಚ್ಚೇಗೌಡ ಟೀಂ ತಡ ರಾತ್ರಿಯೇ ದೆಹಲಿಗೆ ಆಗಮಿಸಿದೆ. ಹೈಕಮಾಂಡ್ ಭೇಟಿ ಮಾಡಿ ಅಧಿಕಾರ ಹಂಚಿಕೆ ಬಗ್ಗೆ ಮಾತುಕತೆ ನಡೆಸಲು ಮುಂದಾಗಿದ್ದಾರೆ ಎನ್ನಲಾಗಿದೆ.

ಸದ್ಯಕ್ಕೆ ಸಿಎಂ ಗದ್ದುಗೆ ಗುದ್ದಾಟ ತಣ್ಣಗಾಗುವಂತೆ ಕಾಣುತ್ತಿಲ್ಲ. ಹೈಕಮಾಂಡ್ ಎಚ್ಚರಿಕೆಗೂ ಯಾರೂ ಸೊಪ್ಪು ಹಾಕುತ್ತಿಲ್ಲ. ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಆಪ್ತರಾದ ಕೆಲವು ಕಾಂಗ್ರೆಸ್ ಶಾಸಕರ ಮೂರನೇ ಬ್ಯಾಚ್ ಹೈಕಮಾಂಡ್ ಮೇಲೆ ಒತ್ತಡ ಹಾಕಲು ರಾತ್ರೋರಾತ್ರಿ ದೆಹಲಿ ತಲುಪಿದೆ.

ಮುಖ್ಯಮಂತ್ರಿ ಗದ್ದುಗೆ ವಿವಾದ ಬಗೆಹರಿಸಲು ವರಿಷ್ಠರ ಮೇಲೆ ಹೊಸ ಒತ್ತಡ ಹೇರಲು ಎರಡು ಬ್ಯಾಚ್ ಶಾಸಕರು ಕಳೆದ ವಾರ ದೆಹಲಿಗೆ ಪ್ರಯಾಣ ಬೆಳೆಸಿದ್ದರು. ಈಗ ಮೂರನೇ ಬ್ಯಾಚ್



ಕಾಂಗ್ರೆಸ್ ಹೈಕಮಾಂಡ್ ಜೊತೆ ತುರ್ತು ಸಭೆ ನಡೆಸಲು ರಾಷ್ಟ್ರ ರಾಜಧಾನಿಗೆ ತೆರಳಿದೆ. ಡಿಕೆಶಿ ಬಣದ ಎಂಟು ಶಾಸಕರು ನಿನ್ನೆ ತಡರಾತ್ರಿ ರಾಜಧಾನಿಗೆ ಬಂದಿಳಿದಿದ್ದಾರೆ. ಶಾಸಕರು ದೆಹಲಿಗೆ ತೆರಳಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ಡಿ.ಕೆ ಶಿವಕುಮಾರ್ ಹೇಳಿದ್ದಾರೆ.

ಆದರೆ ದೆಹಲಿಗೆ ಪ್ರಯಾಣಿಸುವ ನಿರೀಕ್ಷೆಯಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೆಂಗಳೂರಿನಲ್ಲಿಯೇ ಉಳಿದಿದ್ದಾರೆ. ಖರ್ಗೆ ರಾಜ್ಯ ಸಚಿವರು ಮತ್ತು ಹಿರಿಯ ನಾಯಕರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸುತ್ತಿದ್ದಾರೆ. ಈ ಕ್ಷಿಪ್ರ ಬೆಳವಣಿಗೆಗಳ ನಡುವೆ, ಡಿ.ಕೆ.ಶಿವಕುಮಾರ್ ಅವರು ನಿನ್ನೆ ಸಂಜೆ ಸಿದ್ದರಾಮಯ್ಯ ಅವರ ಆಪ್ತರಾದ ಸಚಿವ ಕೆ.ಜೆ.ಜಾರ್ಜ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಜಾರ್ಜ್ ಈ ಹಿಂದೆ ಸಿದ್ದರಾಮಯ್ಯ ಅವರೊಂದಿಗೆ ರಾಹುಲ್ ಗಾಂಧಿ ಮತ್ತು ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಶಿವಕುಮಾರ್ ಮತ್ತು ಪುಟ 2ಕ್ಕೆ

### ಸಿಎಂ ಹೇಳಿದ್ದೇ ವೇದವಾಕ್ಯ!: ಸಿದ್ದು ಹೇಳಿಕೆಗೆ ಡಿಕೆಶಿ ವ್ಯಂಗ್ಯ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ ಮೇಲೆ ಮುಗಿತು! ಅವರು ಹೇಳಿದ್ದೇ ವೇದವಾಕ್ಯ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಸಿದ್ದರಾಮಯ್ಯ ಹೇಳಿಕೆಗೆ ವ್ಯಂಗ್ಯವಾಡಿದ್ದಾರೆ.

ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಇಂದು ಸಹ ಸಿದ್ದರಾಮಯ್ಯ ಹೇಳಿದ್ದರು. ಈ ಬಗ್ಗೆ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಡಿಕೆಶಿ, ಸಿಎಂ ಹೇಳಿದ ಮೇಲೆ ಮುಗಿತು ಎಂದು ಉತ್ತರಿಸಿದರು. ಈ ವೇಳೆ ಯಾವಾಗ ಸಿಎಂ ಆಗುತ್ತೀರಿ ಎಂದು ಕೇಳಿದ್ದಕ್ಕೆ ಡಿಕೆಶಿ ಯಾವುದೇ ಉತ್ತರ ನೀಡದೇ ತೆರಳಿದರು.

ಕಾಂಗ್ರೆಸ್‌ನವರೇ ಕಾಂಗ್ರೆಸ್ ಶಾಸಕರ ಖರೀದಿಗೆ ಮುಂದಾಗಿದ್ದಾರೆ ಎಂಬ ಅಶೋಕ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ಶಾಸಕರ ಖರೀದಿ ಸಂಸ್ಕೃತಿ ಬಿಜೆಪಿಯಲ್ಲಿ ಇರವುದು. ಮುಖ್ಯಮಂತ್ರಿ ಆಗಬೇಕಾದರೆ ಎಷ್ಟು ಸಾವಿರ ಕೋಟಿ ರೂ. ಕೊಡಬೇಕು ಅಂತ ಬಿಜೆಪಿಯವರೇ ಈ ಹಿಂದೆ ಹೇಳಿದ್ದಾರೆ. ವಿಧಾನಸಭೆಯಲ್ಲೂ ಸಹ ಎಷ್ಟೆಷ್ಟು ಕೋಟಿ ಕೊಟ್ಟು ಶಾಸಕರ ಖರೀದಿ ಬಗ್ಗೆ ದಾಖಲೆಗಳಲ್ಲೇ ಬಂದಿದೆ. ಅವರು ಮಾಡುತ್ತಿದ್ದ ಪ್ರವೃತ್ತಿಯನ್ನು ನೆನಪಿಸಿಕೊಂಡಿದ್ದಾರೆ ಅಷ್ಟೇ ಎಂದು ಟೀಕಿಸಿದರು.

# ಹೈಕಮಾಂಡ್ ನಿರ್ಧಾರಕ್ಕೆ ಬದ್ಧ

**ನಾನು, ಡಿಕೆಶಿ ಇಬ್ಬರೂ ಹೈ ನಿರ್ಧಾರಕ್ಕೆ ಒಪ್ಪಿಕೊಳ್ಳಬೇಕು: ಸಿದ್ದರಾಮಯ್ಯ**

**ಚಿಕ್ಕಬಳ್ಳಾಪುರ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಹೈಕಮಾಂಡ್ ಏನೇ ನಿರ್ಧಾರ ತೆಗೆದುಕೊಂಡರೂ ನಾನು ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ಒಪ್ಪಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸೋಮವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಾನು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಬೇಕೆಂದು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದರೆ ಮುಂದುವರಿಯುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.



ನಾವು ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುತ್ತೇವೆ. ನಾನು ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ಪಕ್ಷದ ವರಿಷ್ಠರು ನಿರ್ಧರಿಸಿದರೆ, ನಾನು ಮುಂದುವರಿಯುತ್ತೇನೆ. ಅಂತಿಮವಾಗಿ, ಹೈಕಮಾಂಡ್ ಏನು ನಿರ್ಧರಿಸುತ್ತದೆಯೋ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಿವಕುಮಾರ್ ಕೂಡ ಅದನ್ನು ಒಪ್ಪಿಕೊಳ್ಳಬೇಕು ಎಂದು ಸಿದ್ದರಾಮಯ್ಯ ತಿಳಿಸಿದರು.

ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆಯೇ ಎಂದು ಕೇಳಿದಾಗ, ಆ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ ಎಂದು ನಾನು ಹೇಳಿದರೂ, ನೀವು ಮತ್ತೆ ಅದೇ ವಿಷಯವನ್ನು ಏಕೆ ಕೇಳುತ್ತಿದ್ದೀರಿ ಎಂದು ಗರಂ ಆಗಿ ಪ್ರತಿಕ್ರಿಯೆ ನೀಡಿದರು. ಎರಡೂವರೆ ವರ್ಷಗಳ ಸರ್ಕಾರದ ನಂತರ ಅಧಿಕಾರ ಹಂಚಿಕೆಯ ಒಪ್ಪಂದವಾಗಿತ್ತೇ ಎಂದು ಕೇಳಿದಾಗ, 'ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುತ್ತೇನೆ' ಎಂದು ಮಾತ್ರ ಹೇಳಿದರು.

ನಾಲ್ಕೈದು ತಿಂಗಳ ಹಿಂದೆ, ಹೈಕಮಾಂಡ್ ಸಂಪುಟ ಪುನರ್ ರಚನೆಗೆ ಒಪ್ಪಿಗೆ ಸೂಚಿಸಿತ್ತು. ಆದರೆ, ಸರ್ಕಾರ ಎರಡೂವರೆ ವರ್ಷಗಳ ಅಧಿಕಾರ ಪೂರ್ಣಗೊಳಿಸಲಿ ಎಂದು ಸೂಚಿಸಿದ್ದರು ಎಂದ ಸಿಎಂ, ಈಗ ನಾವು ಹೈಕಮಾಂಡ್ ಏನು ನಿರ್ಧರಿಸುತ್ತದೆಯೋ ಅದನ್ನು ಅನುಸರಿಸುತ್ತೇವೆ ಎಂದು ಹೇಳಿದರು.

ನವೆಂಬರ್ 20ರಂದು ಕಾಂಗ್ರೆಸ್ ಸರ್ಕಾರ ತನ್ನ ಐದು ವರ್ಷಗಳ ಅವಧಿಯ ಅರ್ಧವನ್ನು ತಲುಪಿದ ನಂತರ, 2023ರಲ್ಲಿ ಸರ್ಕಾರ ರಚನೆಯ ವೇಳೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ 'ಅಧಿಕಾರ ಹಂಚಿಕೆ' ಒಪ್ಪಂದದಂತೆ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯಾಗಲಿದೆ ಎನ್ನುವ ಊಹಾಪೋಹಗಳ ನಡುವೆ ಆಡಳಿತ ಪಕ್ಷದೊಳಗಿನ ಜಟಾಪಟಿ ತೀವ್ರಗೊಂಡಿದೆ. ಸಿದ್ದರಾಮಯ್ಯ ಶನಿವಾರ ಬೆಂಗಳೂರಿನ ಎಐಸಿಸಿ ಅಧ್ಯಕ್ಷ ಖರ್ಗೆ ನಿವಾಸದಲ್ಲಿ ಅವರೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಸಭೆ ನಡೆಸಿದರು.


## ನಿನ್ನನ್ನು ಕಂಬಕ್ಕೆ ಕಟ್ಟಿ ಒದೆಯುವೆ!

**ಕಾಮಗಾರಿ ಆರಂಭಿಸದ ಅಧಿಕಾರಿಗೆ ಸಚಿವ ಬೋಸರಾಜು ತಪಾರಕಿ**

**ರಾಯಚೂರು:** ತಕ್ಷಣವೇ ರಸ್ತೆ ಕಾಮಗಾರಿ ಆರಂಭಿಸದಿದ್ದರೆ ನಿನ್ನನ್ನು ಕಂಬಕ್ಕೆ ಕಟ್ಟಿ ಹಾಕಿ ಒದೆಯುವುದಾಗಿ ಕೆ.ಆರ್.ಐ.ಡಿ.ಎಲ್ ಅಧಿಕಾರಿಗೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಎಚ್ಚರಿಕೆ ನೀಡಿದ್ದಾರೆ.

ರಾಯಚೂರಿನ ಸಿರವಾರ ತಾಲೂಕಿನ ಮರಾಟ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ವೇಳೆ ಸಿರವಾರ ರಸ್ತೆಯ ಕಾಮಗಾರಿ ಆರಂಭ, ಶಾಲಾ ಕಟ್ಟಡ ನಿರ್ಮಾಣ ಕಾರ್ಯ ಬಾಕಿ ಹಿನ್ನೆಲೆ ಅಧಿಕಾರಿಗಳ ವಿರುದ್ಧ ಗರಂ ಆದರು. ಎಇಇ ಅನ್ನೋದನ್ನೂ ನೋಡದೆ ಒದೆಯುವುದಾಗಿ ಎಚ್ಚರಿಕೆ ನೀಡಿದರು.

## ಎಚ್‌ಡಿಕೆ-ವಿಜಯೇಂದ್ರ ಭೇಟಿ: ಕುತೂಹಲ



**ಬೆಂಗಳೂರು:** ರಾಜ್ಯ ರಾಜಕೀಯ ಬೆಳವಣಿಗೆಗಳ ನಡುವೆ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೋಮವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ದೆಹಲಿ ಭೇಟಿ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಜಯೇಂದ್ರ ಪೋಸ್ಟ್ ಹಂಚಿಕೊಂಡಿದ್ದಾರೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನದ ಕುರಿತ ಚರ್ಚೆಗಳು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ

## ಧರ್ಮಸ್ಥಳ ಪ್ರಕರಣ: ಚಿನ್ನಯ್ಯನಿಗೆ ಜಾಮೀನು

**ಮಂಗಳೂರು:** ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿದ್ದ ಆರೋಪಿ ಚಿನ್ನಯ್ಯನಿಗೆ ಸೋಮವಾರ ನ್ಯಾಯಾಲಯ ಜಾಮೀನು ನೀಡಿದೆ.



ವಿಶೇಷ ತನಿಖಾ ತಂಡ ಬೆಳ್ತಂಗಡಿ ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಕೆ ಮಾಡಿದ ಬೆನ್ನಲ್ಲೇ ಚಿನ್ನಯ್ಯ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

## ಹಸೀನಾ ಹಸ್ತಾಂತರಕ್ಕೆ ಭಾರತಕ್ಕೆ ಬಾಂಗ್ಲಾ ಮನವಿ

**ಢಾಕಾ:** ಬಾಂಗ್ಲಾದೇಶದಲ್ಲಿ ನಡೆದ ಹಿಂಸಾಚಾರ ಪ್ರಕರಣದಲ್ಲಿ ಪದಚ್ಯುತ ಪ್ರಧಾನಿ ಶೇಖ್ ಹಸೀನಾಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶಿಸಿದೆ. ಈ ಬೆನ್ನಲ್ಲೇ ಬಾಂಗ್ಲಾದೇಶ ಸರ್ಕಾರ ಹಸೀನಾರನ್ನ ಹಸ್ತಾಂತರಿಸುವಂತೆ ಭಾರತಕ್ಕೆ ಪತ್ರ ಬರೆದು



## ದರೋಡೆ ಪ್ರಕರಣ: ಮತ್ತಿಬ್ಬರ ಬಂಧನ

**ಬೆಂಗಳೂರು:** ಬೆಂಗಳೂರಿನಲ್ಲಿ ಎಟಿಎಂ ವ್ಯಾನ್ ದರೋಡೆ ಪ್ರಕರಣದಲ್ಲಿ ಪೊಲೀಸರು ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಒಟ್ಟಾರೆ ಬಂಧಿತರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ.

ಹಾಡಹಗಲೇ ಆರ್‌ಬಿಐ ಅಧಿಕಾರಿಗಳ ಸೋಗಿನಲ್ಲಿ ಬಂದ ದರೋಡೆಕೋರರು ಸಿಎಂಎಸ್ ಸಂಸ್ಥೆಯ ಎಟಿಎಂ ವ್ಯಾನ್ ಮೇಲೆ ದಾಳಿ ಮಾಡಿ ಅದರೊಳಗಿದ್ದ 7.11 ಕೋಟಿ ರೂ ದರೋಡೆ ಮಾಡಿದ್ದರು.

# ಕೆರೆಯ ಮಧ್ಯೆ ತೆಪ್ಪದಲ್ಲಿ ಸಿಲುಕಿದ್ದ ಮಗು ರಕ್ಷಣೆ

**ಕೋಲಾರ:** ಕೆರೆಯ ಮಧ್ಯೆ ತೆಪ್ಪದಲ್ಲಿ ಸಿಲುಕಿ ತೇಲುತ್ತಿದ್ದ 3 ವರ್ಷದ ಮಗುವನ್ನ ಅಗ್ನಿಶಾಮಕ ದಳ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ.

ಕೋಲಾರ ತಾಲ್ಲೂಕಿನ ಚುಂಚದೇನಹಳ್ಳಿ ಕೆರೆಯ ದಡದಲ್ಲಿ ಆಟವಾಡುತ್ತಿದ್ದ 3 ವರ್ಷದ ಅಮೂಲ್ಯ ತಿಳಿಯದೆ ತೆಪ್ಪ ಹತ್ತಿ ಹೋಗಿ ಕೆರೆಯ ಮಧ್ಯೆ ನೀರಿನಲ್ಲಿ ಸಿಲುಕಿದ್ದಳು. ಬೃಹತ್ ಕೆರೆ ಮಧ್ಯೆ ತೆಪ್ಪದಲ್ಲಿ ಸಿಲುಕಿದ್ದ ಮಗುವನ್ನ ರಕ್ಷಣೆ ಮಾಡುವುದು ಹರಸಾಹಸವೇ ಆಗಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ನಾಗಪ್ಪ ನಂದಿ 300 ಮೀ ಕೆರೆಯಲ್ಲಿ ಈಜುವ ಮೂಲಕ ಮಗುವನ್ನ ರಕ್ಷಣೆ ಮಾಡಿದ್ದಾರೆ.

ಚಿತ್ರದುರ್ಗದ ರಂಗಸ್ವಾಮಿ ಹಾಗೂ ಅಂಜಲಿ ದಂಪತಿಯ 3 ವರ್ಷದ ಮಗುವನ್ನು ರಕ್ಷಣೆ ಮಾಡಲಾಗಿದೆ. ಕೆರೆಯಲ್ಲಿ ಮೀನು ಹಿಡಿಯಲು ಬಂದಿದ್ದ ವೇಳೆ ಕೆರೆಯ ದಡದಲ್ಲಿ ಆಟವಾಡುತ್ತಿದ್ದ ಮಗು ಆಕಸ್ಮಿಕವಾಗಿ ತೆಪ್ಪದಲ್ಲಿ ಮಧ್ಯ ಭಾಗಕ್ಕೆ ಹೋಗಿ ಸಿಲುಕಿತ್ತು. ಪ್ರಾಣಾಪಾಯದಲ್ಲಿದ್ದ ಮಗುವನ್ನು ಕಾಪಾಡಿದ ಅಗ್ನಿಶಾಮಕ ಸಿಬ್ಬಂದಿಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



# ಡಿಕೆಶಿಗೆ ನಾಗಸಾಧುಗಳ ಆಶೀರ್ವಾದ

## ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗ್ತಾರೆಂದು ಭವಿಷ್ಯ

**ಬೆಂಗಳೂರು:** ರಾಜ್ಯದಲ್ಲಿ ಸಿಎಂ ಕುರ್ಚಿ ಕದನ ಜೋರಾಗಿರುವ ನಡುವೆಯೇ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬೆಂಬಲಿಗರ ಪಟ್ಟು ಸಿಎಂ ಪಟ್ಟಕ್ಕೆ ಮುಂದುವರೆದಿದೆ. ಈ ಸಂದರ್ಭದಲ್ಲಿಯೇ ಕಾಶಿಯಿಂದ ಆಗಮಿಸಿದ್ದ ನಾಗಸಾಧುಗಳ ಆಶೀರ್ವಾದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ದೊರೆತಿದೆ.

ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಸೋಮವಾರ ಆಗಮಿಸಿದ್ದ ನಾಗ ಸಾಧುಗಳು ಡಿಕೆಶಿ ತಲೆ ಮೇಲೆ ಕೈಇಟ್ಟು ಆಶೀರ್ವಾದ ಮಾಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಾಧುಗಳು, ಶಿವಕುಮಾರ್ ಸಿಎಂ ಆಗಲೆಂದು ಆಶೀರ್ವಾದ ಮಾಡಿದ್ದೇವೆ. ಅವರು ಮುಂದಿನ ಸಿಎಂ ಆಗ್ತಾರೆ ಎಂದು ಹೇಳಿದರು.

**ಜೋಗತಿ ಭೈಲಮ್ಮ ಭವಿಷ್ಯ:** ಮತ್ತೊಂದೆಡೆ ಡಿ.ಕೆ ಶಿವಕುಮಾರ್ ಅವರೇ ಮುಂದಿನ ಸಿಎಂ ಆಗಲಿದ್ದಾರೆ ಎಂದು ಗದಗದ ರಾಜೋಟೇಶ್ವರ ನಗರದ ನಿವಾಸಿ, ಹುಲಿಗೆಮ್ಮ ದೇವಿಯ ಜೋಗತಿ ಭೈಲಮ್ಮ ಬಾಳಮಣ್ಣ ಭವಿಷ್ಯ ನುಡಿದಿದ್ದಾರೆ. ಗದ್ದುಗೆ ಹಾಕಿ ದೇವಿ ಕೊಡ ಎತ್ತುವ



ಮೂಲಕ ಜೋಗತಿ ಅಮ್ಮ ಭವಿಷ್ಯ ನುಡಿದಿದ್ದಾರೆ. ಹುಲಿಗೆಮ್ಮ ದೇವಿ ನೀಡಿರುವ ಭವಿಷ್ಯ ಸುಳ್ಳಾಗುವುದಿಲ್ಲ ಎಂದು ಜೋಗತಿ ಹೇಳಿದ್ದಾರೆ. ಡಿ.ಕೆ ಶಿವಕುಮಾರ್ ಅವರೇ ನೀವು ಚಿಂತೆ ಮಾಡಬೇಡಿ ಸಿಎಂ ಆಗುತ್ತೀರಿ. ಎರಡೂವರೆ ತಿಂಗಳ ಒಳಗಾಗಿ ಸಿಎಂ ಆಗ್ತಾರೆ. ಆದರೆ, ಹುಲಿಗೆಮ್ಮ ದೇವಿ ನೆನೆಪಿಸಿಕೊಂಡು ಮುಂದಿನ ಹೆಜ್ಜೆ ಇಡಬೇಕು. ಖುಷಿಯಿಂದ ಸಿದ್ದರಾಮಯ್ಯ ಸಿಎಂ

## ಸುಪ್ರೀಂ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರಮಾಣ ವಚನ

**ನವದೆಹಲಿ:** ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ವಾಪಸ್ ಪಡೆಯುವ 370ನೇ ವಿಧಿಯನ್ನು ರದ್ದುಪಡಿಸುವುದು ಸೇರಿದಂತೆ ಹಲವು ಮಹತ್ವದ ತೀರ್ಪುಗಳ ಭಾಗವಾಗಿದ್ದ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಭಾರತದ ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.



ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರು ನವೆಂಬರ್ 23ರಂದು ನಿವೃತ್ತರಾದರು. ಅವರ ನಂತರ ಸೂರ್ಯಕಾಂತ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಸೂರ್ಯಕಾಂತ್ ಪುಟ 2ಕ್ಕೆ

## ಫ್ಲೈಓವರ್ ನಿಂದ ಕಾರು ಉರುಳಿ ನಾಲ್ವರು ಅಯ್ಯಪ್ಪ ಭಕ್ತರು ಸಾವು

**ಕೋಲಾರ:** ಮಾಲೂರು ತಾಲೂಕಿನ ಅಬ್ಬೇನಹಳ್ಳಿ ಗ್ರಾಮದಲ್ಲಿ ಅತಿವೇಗದಿಂದ ಬಂದ ಕಾರೊಂದು ಫ್ಲೈಓವರ್ ಪಕ್ಕದ ತಡೆಗೋಡೆಗೆ ಡಿಕ್ಕಿ ಹೊಡೆದು ಅಂಡರ್‌ಪಾಸ್‌ಗೆ ಉರುಳಿ ಬಿದ್ದ ಪರಿಣಾಮ ಶಬರಿಮಲೆಗೆ ತೆರಳುತ್ತಿದ್ದ ನಾಲ್ವರು ಯಾತ್ರಿಕರು ಸಾವಿಗೀಡಾಗಿದ್ದಾರೆ.

ಮೃತರನ್ನು ಗೋಪಿ (38), ಗೌತಮ್ ರಮೇಶ್ (28), ಹರಿಹರನ್ (27) ಮತ್ತು ಜಯಂಕರ್ (30) ಎಂದು ಗುರುತಿಸಲಾಗಿದೆ. ಮೃತರೆಲ್ಲರೂ ಚೆನ್ನೈ ಮೂಲದವರು. ಸೋಮವಾರ ಬೆಳಗಿನ ಜಾವ 2.15 ರಿಂದ 2.30ರ ನಡುವೆ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಸಾವಿಗೀಡಾದವರೆಲ್ಲರೂ ಸ್ನೇಹಿತರಾಗಿದ್ದಾರೆ. ಕೇರಳದ ಶಬರಿಮಲೆಗೆ ಕಾರಿನಲ್ಲಿ ತೆರಳುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಚಾಲಕ ಅತಿ ವೇಗವಾಗಿ ಚಾಲನೆ ಪುಟ 2ಕ್ಕೆ



## ಹಾಸನ: ಕಾಲುಜಾರಿ ನಾಲೆಗೆ ಬಿದ್ದು ನೀರು ಪಾಲಾದ ದಂಪತಿ

**ಹಾಸನ:** ನಾಲೆಯಲ್ಲಿ ಬಟ್ಟೆ ತೊಳೆಯಲು ಹೋಗಿದ್ದ ದಂಪತಿ ನೀರುಪಾಲಾದ ಘಟನೆ ಚನ್ನರಾಯಪಟ್ಟಣ ತಾಲೂಕಿನ ನಂಬಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಗೋಪಾಲ್ (27), ದೀಪು (24) ಮೃತ ದಂಪತಿ.



ಹೇಮಾವತಿ ನಾಲೆಯಲ್ಲಿ ಬಟ್ಟೆ ತೊಳೆಯುವಾಗ ದೀಪು ಕಾಲು ಜಾರಿ ನಾಲೆಗೆ ಬಿದ್ದಿದ್ದರು. ಪತ್ನಿಯನ್ನು ರಕ್ಷಿಸಲು ಪತಿ ಗೋಪಾಲ್ ನಾಲೆಗೆ ಇಳಿದಿದ್ದಾರೆ. ನಾಲೆಯಲ್ಲಿ ಭಾರೀ ಪ್ರಮಾಣದ ನೀರು ಹರಿಯುತ್ತಿದ್ದರಿಂದ ನೀರಿನಲ್ಲಿ ಮುಳುಗಿ ದಂಪತಿ ಸಾವನ್ನಪ್ಪಿದ್ದಾರೆ. ದಂಪತಿ ಮನೆಗೆ ಬಾರದಿದ್ದರಿಂದ ಕುಟುಂಬಸ್ಥರು ಎಲ್ಲೆಡೆ ಹುಡುಕಾಟ ನಡೆಸಿದ್ದಾರೆ. ನಂತರ ನಾಲೆ ಬಳಿ ಪುಟ 2ಕ್ಕೆ


# ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣ

## ಇಂದು ಪ್ರಧಾನಿ ಮೋದಿಯಿಂದ ಧಾರ್ಮಿಕ ಧ್ವಜಾರೋಹಣ

**ಲಕ್ನೋ:** ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ನಾಳೆ ಮಂಗಳವಾರ ಧಾರ್ಮಿಕ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಧ್ವಜಾರೋಹಣ ಮಾಡಲಿದ್ದಾರೆ.

ನ.25ರಂದು ಮಂಗಳವಾರ ಮಧ್ಯಾಹ್ನ ಸುಮಾರು 11:52ರಿಂದ 12:35ರ ಶುಭ ಮುಹೂರ್ತದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. 191 ಅಡಿ ಎತ್ತರದ ರಾಮ ಮಂದಿರದ ಮೇಲ್ಭಾಗದಲ್ಲಿ 11 ಅಡಿ ಅಗಲ ಮತ್ತು 22 ಅಡಿ ಉದ್ದದ ತ್ರಿಕೋನಾಕಾರದ ಕೇಸರಿ ಧ್ವಜವನ್ನು ಹಾರಿಸಲಾಗುತ್ತಿದೆ. ಧ್ವಜದ ಮೇಲೆ ಸೂರ್ಯವಂಶಿ ಮತ್ತು ತ್ರೇತಾಯುಗದ ಚಿಹ್ನೆಗಳನ್ನು ಇರಿಸಲಾಗಿದೆ.

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಭಾರತದ ವಿವಿಧೆಡೆಯ ಆರು ಸಾವಿರ ಪ್ರಮುಖ ಗಣ್ಯರು ಭಾಗವಹಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಆಗಮನಕ್ಕೆ ಭಾರಿ ಸಿದ್ಧತೆ ನಡೆದಿದೆ.





### ಧ್ವಜದ ವಿಶೇಷತೆಗಳೇನು

ರಾಮಮಂದಿರದ ಮೇಲೆ ಹಾರಲಿರುವ ಧ್ವಜ ತುಂಬಾ ವಿಶೇಷವಾಗಿದ್ದು, ದೈವಿಕ ಧ್ವಜವನ್ನು ಗುಜರಾತ್‌ನ ಅಹಮದಾಬಾದ್‌ನಲ್ಲಿ ತಯಾರಿಸಲಾಗಿದೆ. ಅಯೋಧ್ಯೆ ರಾಮ ಪುಟ 2ಕ್ಕೆ

# ಬಾಲಿವುಡ್ ನಟ ಧರ್ಮೇಂದ್ರ ವಿಧಿವಶ

**ಮುಂಬೈ:** ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಸೋಮವಾರ ಕೊನೆಯುಸಿರೆಳೆದರು. ನಿಧನರಾಗಿದ್ದಾರೆ. ಅವರಿಗೆ 89 ವರ್ಷ ವಯಸ್ಸಾಗಿತ್ತು. ಬಾಲಿವುಡ್ 'ಹೀಮ್ಯಾನ್' ಎಂದೇ ಖ್ಯಾತರಾಗಿದ್ದ ಧರ್ಮೇಂದ್ರ ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಬಾಲಿವುಡ್ ಅನ್ನು ಚಕ್ರವರ್ತಿಯಂತೆ ಆಳಿದ್ದರು.



ನವೆಂಬರ್ ಆರಂಭದಲ್ಲಿ ತೀವ್ರ ಅನಾರೋಗ್ಯದಿಂದಾಗಿ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಸೇರಿಸಲಾಗಿತ್ತು. ನಂತರ ಡಿಸ್ಚಾರ್ಜ್ ಆಗಿ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಇಂದು ಅವರು ಕೊನೆಯುಸಿರೆಳೆದರು.

1960ರಲ್ಲಿ 'ದಿಲ್ ಭಿ ತೇರಾ ಹಮ್ ಭಿ ತೇರೆ' ಚಿತ್ರದ ಮೂಲಕ ಪಾದಾರ್ಪಣೆ ಮಾಡಿದ ಧರ್ಮೇಂದ್ರ 1960ರ ದಶಕದಲ್ಲಿ ಅನ್ಪದ್, ಬಂದಿನಿ, ಅನುಪಮಾ ಮತ್ತು ಆಯಾ ಸಾವನ್ ಝೂಮ್ ಕೆ ಮುಂತಾದ ಚಿತ್ರಗಳಲ್ಲಿ ಸಾಮಾನ್ಯ ಪಾತ್ರಗಳ ಮೂಲಕ ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ ಅವರು ಶೋಲೆ, ಧರಮ್ ವೀರ್, ಚುಪ್ಕೆ ಚುಪ್ಕೆ, ಮೇರಾ ಗಾಂವ್ ಮೇರಾ ದೇಶ್ ಮತ್ತು ಡ್ರೀಮ್ ಗರ್ಲ್ ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಖ್ಯಾತಿಗಳಿಸಿದರು.





ಶಾಹಿದ್ ಕಪೂರ್ ಮತ್ತು ಕೃತಿ ಸನೋನ್ ನಟಿಸಿದ 'ತೇರಿ ಬಾಟನ್ ಮೇ ಐಸಾ ಉಲ್ಝಾ ಜಿಯಾ'ದಲ್ಲಿ ಧರ್ಮೇಂದ್ರ ಕೊನೆಯದಾಗಿ ಕಾಣಿಸಿಕೊಂಡಿದ್ದರು. ಅಮಿತಾಭ್ ಬಚ್ಚನ್ ಅವರ ಮೊಮ್ಮಗ ಅಗಸ್ತ್ಯ ನಂದಾ ನಾಯಕ ನಟನಾಗಿರುವ ಅವರ ಮುಂದಿನ ಚಿತ್ರ ಡಿಸೆಂಬರ್ 25ರಂದು ಬಿಡುಗಡೆಗೆ ಸಜ್ಜಾಗಿದೆ. ಧರ್ಮೇಂದ್ರ ಅವರು ಇಬ್ಬರು ಪತ್ನಿಯರಾದ ಪ್ರಕಾಶ್ ಕೌರ್ ಮತ್ತು ಪುಟ 2ಕ್ಕೆ

### ಬಿಜೆಪಿಯಿಂದ ಸಂಸದ

ನಟ ಧರ್ಮೇಂದ್ರ ಅವರು 2004ರಲ್ಲಿ ಬಿಜೆಪಿಯಿಂದ ರಾಜಸ್ಥಾನದ ಬಿಕಾನೇರ್‌ನಿಂದ ಲೋಕಸಭೆಗೆ ಆಯ್ಕೆಯಾಗಿ ಸಂಸದರಾಗಿ ಕಾರ್ಯನಿರ್ವಹಿಸಿದ್ದರು. ಧರ್ಮೇಂದ್ರ ಅವರು ಶೋಲೆ (1975) ಮತ್ತು ಚುಪ್ಕೆ ಚುಪ್ಕೆ (1975) ಸೇರಿದಂತೆ ಅನೇಕ ಸೂಪರ್-ಹಿಟ್ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಫೂಲ್ ಔರ್ ಪತ್ತರ್ (1966), ಸೀತಾ ಔರ್ ಗೀತಾ (1972), ಧರಮ್ ವೀರ್ (1977), ಮತ್ತು ಮೇರಾ ಗಾಂವ್ ಮೇರಾ ದೇಶ್ (1971). ಅವರು ಪ್ರತಿಗ್ಯಾ (1975), ಆಂಖೇನ್ (1968), ಮತ್ತು ಬಾಂದಿನಿ (1963) ನಂತಹ ಸಿನಿಮಾಗಳಿಂದಲೂ ಅವರು ಹೆಸರುವಾಸಿಯಾಗಿದ್ದರು.

**ಮೊದಲ ಪುಟದಿಂದ**

## 3ನೇ ಟೀಮ್ ದೆಹಲಿಗೆ ದೌಡು

ಕೆಜೆ ಜಾರ್ಜ್ ಸದ್ಯ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ ಎನ್ನಲಾಗಿದೆ. 2023ರ ಮೇ ತಿಂಗಳಲ್ಲಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದಾಗ, ಎರಡೂವರೆ ವರ್ಷಗಳ ನಂತರ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ಹಸ್ತಾಂತರಿಸುವುದಾಗಿ ಹೈಕಮಾಂಡ್ ಭರವಸೆ ನೀಡಿತ್ತು ಎಂದು ಡಿ.ಕೆ.ಶಿವಕುಮಾರ್ ಅವರ ಆಪ್ತ ಕಾಂಗ್ರೆಸ್ ನಾಯಕರು ವಾದಿಸುತ್ತಿದ್ದಾರೆ. ಅಧಿಕಾರ ಹಂಚಿಕೆ ಸೂತ್ರದ ಭರವಸೆಯನ್ನು ಗೌರವಿಸುವಂತೆ ಶಿವಕುಮಾರ್ ಪರ ಶಾಸಕರು ಈಗ ಹೈಕಮಾಂಡ್ ಅನ್ನು ಒತ್ತಾಯಿಸುತ್ತಿದ್ದಾರೆ.

## ನಾಗಸಾಧುಗಳ ಆಶೀರ್ವಾದ

ಸ್ಥಾನ ಬಿಟ್ಟುಕೊಡುತ್ತಾರೆ ಎಂದು ಜೋಗತಿ ಭವಿಷ್ಯ ಹೇಳಿದ್ದಾರೆ. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಯ್ಯಪ್ಪ ಮಾಲಾಧಾರಿಗಳು ಡಿ.ಕೆ ಶಿವಕುಮಾರ್ ಸಿಎಂ ಆಗಲಿ ಎಂದು ವಿಶೇಷ ಪೂಜೆ ಸಲ್ಲಿಸಿದ್ದಾರೆ.

## ನಿನ್ನನ್ನು ಕಂಬಕ್ಕೆ ಕಟ್ಟಿ ಒದೆಯುವೆ!

ಸಚಿವರು ಕೆ.ಆರ್.ಐ.ಡಿ.ಎಲ್ ಎಇಇ ಹನುಮಂತಪ್ಪಗೆ ಮನಸೋ ಇಚ್ಛೆ ಕ್ಲಾಸ್ ತೆಗೆದುಕೊಂಡಿದ್ದಾರೆ. ಕಾಮಗಾರಿ ಪೂಜೆ ಮಾಡಿ ಎಷ್ಟು ದಿನವಾಯ್ತು ರಸ್ತೆ ಕಾಮಗಾರಿ ಆರಂಭಿಸದೆ ಕತ್ತೆ ಕಾಯುತ್ತಿದ್ದಿರಾ? ಜನರಿಗೆ ತೊಂದರೆಯಾಗುತ್ತಿದೆ. ಜನರಿಂದ ಸರ್ಕಾರಕ್ಕೆ ಬಯ್ಯಿಸುವ ಕೆಲಸ ಮಾಡುತ್ತಿದ್ದೀರಾ? ಕೂಡಲೇ ಆರಂಭಿಸದಿದ್ದರೆ ಅಮಾನತ್ತು ಮಾತ್ರವಲ್ಲ, ಕಟ್ಟಿ ಹಾಕಿ ಒದೆಯುತ್ತೇನೆ ಎಂದಿದ್ದಾರೆ.

## ಬಾಲಿವುಡ್ ನಟ ಧರ್ಮೇಂದ್ರ ವಿಧಿವಶ

ಹೇಮಾ ಮಾಲಿನಿ, ಆರು ಮಕ್ಕಳಾದ ಸನ್ನಿ ಡಿಯೋಲ್, ಬಾಬಿ ಡಿಯೋಲ್, ವಿಜೇತ ಡಿಯೋಲ್, ಅಜೀತಾ ಡಿಯೋಲ್, ಇಶಾ ಡಿಯೋಲ್ ಮತ್ತು ಅಹಾನಾ ಡಿಯೋಲ್ ಅವರನ್ನು ಅಗಲಿದ್ದಾರೆ.

ಧರ್ಮೇಂದ್ರ ಅಂತಿಮ ದರ್ಶನಕ್ಕೆ ಬಾಲಿವುಡ್ ನಟರು, ಸ್ನೇಹಿತರು, ಚಿತ್ರರಂಗದ ಗಣ್ಯರು ಆಗಮಿಸುತ್ತಿದ್ದಾರೆ. ಬಾಲಿವುಡ್ ಹಿರಿಯ ನಟರಾದ ಅಮಿತಾಬ್ ಬಚ್ಚನ್, ಅಮೀರ್ ಖಾನ್ ಸೇರಿದಂತೆ ಚಿತ್ರರಂಗದ ಹಲವು ಗಣ್ಯರು ದರ್ಶನ ಪಡೆದರು.

## ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣ

ಮಂದಿರದ ಧಾರ್ಮಿಕ ಧ್ವಜದಲ್ಲಿರುವ ಚಿಹ್ನೆಗಳಿಗೆ ಪ್ರತಿಯೊಂದಕ್ಕೂ ವಿಶೇಷ ಅರ್ಥವಿದೆ. ಕೇಸರಿ ಬಣ್ಣದ ಧ್ವಜ, ಸೂರ್ಯ ದೇವರು ಮತ್ತು ಓಂ ಚಿಹ್ನೆ ಹೊಂದಿದೆ. ಧಾರ್ಮಿಕ ಮಹತ್ವವುಳ್ಳ ವಿಶಿಷ್ಟವಾದ ಮರದ ಚಿತ್ರವನ್ನು ಸಹ ಧ್ವಜದ ಮೇಲೆ ಚಿತ್ರಿಸಲಾಗಿದೆ. ಮೂರು ಪದರಗಳ ಬಟ್ಟೆಯಿಂದ ತಯಾರಿಸಲಾಗಿದೆ. ಅಂಚುಗಳನ್ನು ಗೋಲ್ಡನ್ ರೇಷ್ಮೆಯಿಂದ ಮಾಡಲಾಗಿದೆ. ಎಲ್ಲಾ ಚಿಹ್ನೆಗಳನ್ನು ಕೈಯಿಂದ ಮಾಡಲಾಗಿದೆ.

## ಎಚ್‌ಡಿಕೆ–ವಿಜಯೇಂದ್ರ ಭೇಟಿ: ಕುತೂಹಲ

ಬದಲಾವಣೆ ಸಂಬಂಧಿಸಿದ ಹೇಳಿಕೆಗಳ ನಡುವೆ ವಿಜಯೇಂದ್ರ ಮತ್ತು ಕುಮಾರಸ್ವಾಮಿ ಭೇಟಿ ಕುತೂಹಲ ಮೂಡಿಸಿದೆ.

ರಾಜ್ಯದಲ್ಲಿ ಎನ್‌ಡಿಎ ಮೈತ್ರಿಯನ್ನು ಮತ್ತಷ್ಟು ಬಲಪಡಿಸಿ, ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟದ ಕಾರ್ಯತಂತ್ರಗಳ ಕುರಿತು ಚರ್ಚಿಸಲಾಯಿತು ಎಂದು ವಿಜಯೇಂದ್ರ ತಿಳಿಸಿದ್ದಾರೆ.

## ಧರ್ಮಸ್ಥಳ ಪ್ರಕರಣ: ಚಿನ್ನಯ್ಯನಿಗೆ ಜಾಮೀನು

ಮಂಗಳೂರಿನ ಜಿಲ್ಲಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಆಗಸ್ಟ್ 23ರಂದು ಸುಧೀರ್ಘ ವಿಚಾರಣೆ ಬಳಿಕ ಬುರುಡೆ ಕೇಸ್ ನಲ್ಲಿ ಅನಾಮಿಕ ದೂರುದಾರ ಚಿನ್ನಯ್ಯ ಬಂಧನವಾಗಿತ್ತು. ಸೆಪ್ಟೆಂಬರ್ 6ರಂದು ಕೋರ್ಟ್ ನ್ಯಾಯಾಂಗ ಬಂಧನ ವಿಧಿಸಿದ್ದರಿಂದ ಶಿವಮೊಗ್ಗ ಜೈಲಿಗೆ ಚಿನ್ನಯ್ಯನನ್ನು ಕರೆತರಲಾಗಿತ್ತು. 1 ಲಕ್ಷ ರೂ. ಬಾಂಡ್ ಸೇರಿ 12 ಷರತ್ತು ವಿಧಿಸಿ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

## ಪ್ರಮಾಣ ವಚನ ಸ್ವೀಕಾರ

ಅವರಿಗೆ ಪ್ರಮಾಣ ವಚನ ಬೋಧಿಸಿದರು. ದೇವರ ಹೆಸರಿನಲ್ಲಿ ಅವರು ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಸಮಾರಂಭದಲ್ಲಿ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದ್ದರು.

ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿಯಾಗಿ ಅಕ್ಟೋಬರ್ 30ರಂದು ನೇಮಕ ಮಾಡಲಾಯಿತು. ಅವರು ಸುಮಾರು 15 ತಿಂಗಳು ಈ ಹುದ್ದೆಯಲ್ಲಿ ಇರುತ್ತಾರೆ. ಅವರಿಗೆ ಫೆಬ್ರುವರಿ 9, 2027ರಂದು 65 ವರ್ಷ ತುಂಬುವ ಹಿನ್ನೆಲೆಯಲ್ಲಿ ಅಧಿಕಾರದಿಂದ ನಿವೃತ್ತರಾಗುತ್ತಾರೆ.

## ಫ್ಲೈಓವರ್ ನಿಂದ ಕಾರು ಉರುಳಿ ನಾಲ್ವರು ಅಯ್ಯಪ್ಪ ಭಕ್ತರು ಸಾವು

ಮಾಡುತ್ತಿದ್ದರಿಂದ ಅಪಘಾತ ಸಂಭವಿಸಿದೆ. ಕಾರು ಫ್ಲೈಓವರ್‌ನ ತಡೆಗೋಡೆಗೆ ಡಿಕ್ಕಿ ಹೊಡೆದಿದೆ ಮತ್ತು ಕೆಳಗೆ ಬಿದ್ದಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಇದರ ಪರಿಣಾಮ ಎಷ್ಟು ತೀವ್ರವಾಗಿತ್ತೆಂದರೆ, ಕಾರು ಮತ್ತು ಅದರಲ್ಲಿದ್ದವರು ಸುಮಾರು 100 ಮೀಟರ್ ಆಳದ ಅಂಡರ್‌ಪಾಸ್‌ಗೆ ಬಿದ್ದು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಮರಣೋತ್ತರ ಪರೀಕ್ಷೆಯ ನಂತರ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

## ಕಾಲುಜಾರಿ ನಾಲೆಗೆ ಬಿದ್ದು ನೀರು ಪಾಲಾದ ದಂಪತಿ

ನೋಡಿದಾಗ ಬಟ್ಟೆಗಳು ದಡದಲ್ಲಿತ್ತು. ಈ ಹಿನ್ನೆಲೆ ಕುಟುಂಬಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕದಳ ಸಿಬ್ಬಂದಿ ಸೋಮವಾರ ನಾಲೆಯಲ್ಲಿ ಶೋಧಕಾರ್ಯ ನಡೆಸಿದ ವೇಳೆ ಪತಿ ಗೋಪಾಲ್ ಮೃತದೇಹ ಪತ್ತೆಯಾಗಿದೆ. ಪತ್ನಿ ದೀಪು ಮೃತದೇಹಕ್ಕಾಗಿ ಶೋಧಕಾರ್ಯ ಮುಂದುವರಿದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ದರೋಡೆ ಪ್ರಕರಣ: ಮತ್ತಿಬ್ಬರ ಬಂಧನ

ಪೊಲೀಸರು ಪ್ರಕರಣದ ಪ್ರಮುಖ ಆರೋಪಿಗಳಾದ ರವಿ, ಕಾನ್ಸ್ಟೆಬಲ್ ಅಣ್ಣಪ್ಪ ನಾಯ್ಕ ಮತ್ತು ಕ್ಸೇವಿಯರ್ ಸೇರಿದಂತೆ 7 ಮಂದಿಯನ್ನು ಬಂಧಿಸಿದ್ದರು. ಈಗ ಮತ್ತಿಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಅದರೊಂದಿಗೆ ಪ್ರಕರಣದ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿದೆ.

## ಹಸೀನಾ ಹಸ್ತಾಂತರಕ್ಕೆ ಭಾರತಕ್ಕೆ ಬಾಂಗ್ಲಾ ಮನವಿ

ಮನವಿ ಮಾಡಿದೆ. ವಿಶೇಷ ನ್ಯಾಯಲಯದಿಂದ ಹೊರಬಂದ ಆದೇಶದ ಹಿನ್ನಲೆಯಲ್ಲಿ ಭಾರತಕ್ಕೆ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಹಸೀನಾರನ್ನ ಹಸ್ತಾಂತರಿಸುವಂತೆ ಕೋರಿ ಭಾರತೀಯ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಕಳುಹಿಸಿದೆ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಲಹೆಗಾರ ತೌಹಿದ್ ಹೊಸ್ಸೈನ್ ತಿಳಿಸಿದ್ದಾರೆ.

# ಜನಪರ ಕೆಲಸಗಳನ್ನು ಮಾಡುತ್ತಿರುವ ಧರ್ಮಸ್ಥಳ ಸಂಸ್ಥೆ

ಎಚ್.ಡಿ.ಕೋಟೆ: ಧರ್ಮಸ್ಥಳ ಸಂಘ ಬರಿ ಸಾಲ ಕೊಡುವುದಲ್ಲ. ಜನರಿಗೆ ತಿಳುವಳಿಕೆ ಕೊಡುವ ಸಂಘ. ಈ ಸಂಸ್ಥೆಯ ವಿರುದ್ಧ ದಾಖಲೆಯಿಲ್ಲದೆ ಆರೋಪ ಮಾಡುತ್ತಿದ್ದಾರೆ ಈಗಾಗಲೇ ಸತ್ಯ ಏನು ಎಂದು ಎಲ್ಲರಿಗೂ ತಿಳಿದಿದೆ ಎಂದು ಜಿಲ್ಲಾ ನಿರ್ದೇಶಕ ವಿಜಯ ಕುಮಾರ್ ನಾಗನಳ ತಿಳಿಸಿದರು

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹ್ಯಾಂಡ್ ಪೋಸ್ಟ್ ನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಂತರಸಂತೆ ಮತ್ತು ಬೀಚನಹಳ್ಳಿ ವಲಯ ಮಟ್ಟದ ಒಕ್ಕೂಟದ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಗಾರ ದಲ್ಲಿ ಮಾತನಾಡಿದರು. ತಾಲೂಕಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಸುಮಾರು 2.600ಕ್ಕೂ ಹೆಚ್ಚು ಮಹಿಳಾ ಸಂಘಗಳು ನಡೆಯುತ್ತಿವೆ. ಈ ಸಂಘದ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಹೊಂದುತ್ತಾ ಸಾಗುತ್ತಿದ್ದಾರೆ. ಸಂಘವು ಮುಖ್ಯವಾಗಿ ಸಾಲ ಸೌಲಭ್ಯವಲ್ಲದೇ ಸಾಮಾಜಿಕವಾಗಿ ಮತ್ತು ಮೂಲ ಸೌಕರ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ಅವರಿಗೆ ತಿಳುವಳಿಕೆ ನೀಡುತ್ತಿದ್ದೇವೆ. ಸಂಘದ ಸದಸ್ಯರಿಗೆ ಸಾಲ ಸೌಲಭ್ಯ, ವಿಮೆ ಹಾಗೂ



ಜೀವನ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದರ ಜೊತೆಗೆ ಸಂಘದ ಸದಸ್ಯರ ಕುಟುಂಬದವರು ಮರಣ ಹೊಂದಿದರೆ ಅವರ ಸಾಲವನ್ನ ಸಂಪೂರ್ಣ ಮನ್ನ ಮಾಡುತ್ತಿದ್ದೇವೆ ಎಂದರು.

ಸಾಲ ಪಡೆದವರಿಗೆ ವಿಮೆ ಸೌಲಭ್ಯ ಮಾಡಿಸುತ್ತಿದೆ, ವರ್ಷದಲ್ಲಿ ಬೋನಸ್ ಕೂಡಕೊಡುತ್ತಿದ್ದೇವೆ. ಅದಲ್ಲದೇ ಮಧ್ಯವರ್ಜಿನೆ ಶಿಬಿರ, ಕೆರೆ ಹೂಳೆತ್ತುವ ಕೆಲಸ, ದೇವಸ್ಥಾನ ಅಭಿವೃದ್ಧಿ, ವಿದ್ಯಾರ್ಥಿ ವೇತನ, ವಿಕಲಾಂಗರಿಗೆ ಸಹಾಯ, ಮತ್ತಿತರ ಹತ್ತು ಹಲವು ಕೆಲಸಗಳನ್ನು ಮಾಡಿಕೊಂಡು ಧರ್ಮಸ್ಥಳ ಸಂಸ್ಥೆ ಬಂದಿದೆ. ಇದರಿಂದ ನಮ್ಮ ಪ್ರಾದೇಶಿಕ ವಲಯದಲ್ಲಿ ಮೈಸೂರು ವಲಯದ ಎಚ್.ಡಿ. ಕೋಟೆ ಉತ್ತಮ ಸ್ಥಾನದಲ್ಲಿದೆ ತಾಲೂಕಿನಲ್ಲಿ 816 ಜನರಿಗೆ ಆರು ಕೋಟಿಗೂ ಹೆಚ್ಚು ಸಾಲಮನ್ನ ಆಗಿದೆ ಎಂದರು.

ಪ್ರಾಸ್ತಾವಿಕವಾಗಿ ತಾಲೋಕು ಯೋಜನಾಧಿಕಾರಿ ವಿ.ಭಾಸ್ಕರ್ ಮಾತಾನಾಡಿ, ನಮ್ಮ ಗ್ರಾಮಾಭಿವೃದ್ಧಿ ಸಂಘವು ಹಳ್ಳಿಗಾಡಿನ ಬಡವರು, ಕೂಲಿಕಾರ್ಮಿಕರನ್ನ ಗುರಿಯಾಗಿಸಿಕೊಂಡು ಅವರ ಏಳ್ಗೆಗಾಗಿ ಕೆಲಸ ಮಾಡುತ್ತಾ ಬರುತ್ತಿದೆ. ಆದರೆ, ಇಂತಹ ಸಂಸ್ಥೆಯ ವಿರುದ್ಧ ಕೆಲವರು ಅಪಪ್ರಚಾರ ಮಾಡಿ ಕೆಟ್ಟಹೆಸರು ತರುವ ಪ್ರಯತ್ನ ಮಾಡುತ್ತಿದ್ದಾರೆ. ಈ ಅಪಪ್ರಚಾರಕ್ಕೆ ಜನರೆ ಉತ್ತರ ನೀಡಬೇಕು ಎಂದು ನಾವೆಲ್ಲ ತಿಳಿದು ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಮೂರು ಮನೆಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದೇವೆ ಎಂದರು. ಸಂಸ್ಥೆ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ 50 ಲಕ್ಷ ತಾಲೂಕಿಗೆ ನೀಡಿದ್ದಾರೆ. 200 ದೇವಸ್ಥಾನಗಳ ಅಭಿವೃದ್ಧಿಗೆ ಹಾಗೂ ಸಮುದಾಯ ಭವನಕ್ಕೆ ಅನುದಾನ ನೀಡಿದ್ದಾರೆ. ಇನ್ನು ಅನೇಕ ಕಾರ್ಯಕ್ರಮ ಮಾಡುವುದರ ಮೂಲಕ ನಮ್ಮ ಸಂಸ್ಥೆ ತಾಲೂಕಿನಲ್ಲಿ ಕೆಲಸ ಮಾಡುತ್ತಿದೆ ಎಂದರು. ಪುರಸಭೆ ಮಾಜಿ ಸದಸ್ಯ ಪ್ರೇಮ್ ಸಾಗರ್ ಮಾತಾನಾಡಿ, ಈ ಸಂಸ್ಥೆ ನಮ್ಮ ತಾಲೂಕಿನಲ್ಲಿ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದು, ಜನರಿಗೆ ಸಾಕಷ್ಟು ಅನುಕೂಲ ಮಾಡುತ್ತಿದೆ. ಮಹಿಳೆಯರು ಸಾಲ ಸೌಲಭ್ಯ ಪಡೆದು ಮುಂದೆ ಬರುತ್ತಿದ್ದಾರೆ. ಅದ್ದರಿಂದ, ನಾನು ಕೂಡ ಈ ಸಂಘದ ಎಲ್ಲ ಕಾರ್ಯಕ್ರಮಗಳಲ್ಲಿ ಸಹಕಾರ ನೀಡುತ್ತಿದ್ದೇನೆ ಎಂದರು. ಮೂಕಾಂಬಿಕಾ ಜ್ಞಾನವಿಕಾಸ ಸಮನ್ವಯ ಅಧಿಕಾರಿ, ಕೃಷ್ಣಮೂರ್ತಿ, ಮೇಲ್ವಿಚಾರಕ, ಶಾಂತ ಮೇಲ್ವಿಚಾರಕಿ, ರಾಜು, ಕೃಷಿ ಅಧಿಕಾರಿ ಮತ್ತು ಒಕ್ಕೂಟದ ಪದಾಧಿಕಾರಿಗಳು ಮಹಿಳಾ ಮುಖಂಡರು ಇದ್ದರು.

# ಡಿಕೆಶಿ ಸಿಎಂ ಆಗಲೆಂದು ವಿಶೇಷ ಪೂಜೆ

ರಾಮನಗರ: ಕನಕಪುರ ಶಾಸಕ, ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕು ಕಾಂಗ್ರೆಸ್ ಕಾರ್ಯಕರ್ತರು ದೇವರ ಮೊರೆ ಹೋಗಿದ್ದಾರೆ.

ಇಲ್ಲಿಗೆ ಸಮೀಪದ ಶ್ರೀ ಜಲಸಿದ್ದೇಶ್ವರಸ್ವಾಮಿ ದೇವಾಲಯದಲ್ಲಿ ಕಾಂಗ್ರೆಸ್ ಯುವ ಮುಖಂಡರಾದ ಎಟಿಎಂ ಸುನಿಲ್ ಮತ್ತು ಸಂತೋಷ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲಿ ಎಂದು ದೇವರ ಬಳಿ ಆಶೀರ್ವಾದಕ್ಕೆ ಮೊರೆ ಇಟ್ಟರು.

ತದ ನಂತರ ಮಾತನಾಡಿದ ಎಟಿಎಂ ಸುನೀಲ್ ಮತ್ತು ಸಂತೋಷ್, ಯತಿಮುನಿಗಳು ತಪಸ್ಸು ಮಾಡಿದ ಪುಣ್ಯಸ್ಥಳದಲ್ಲಿ ನೆಲೆಸಿರುವ ಶ್ರೀ ಜಲಸಿದ್ದೇಶ್ವರಸ್ವಾಮಿಯ ಸನ್ನಿಧಿಯಲ್ಲಿ ಡಿ. ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಸಂಕಲ್ಪ ಮಾಡಿ ಪೂಜೆ ಸಲ್ಲಿಸಿದ್ದೇವೆ. ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ ಆಗಿ, ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಯುವಕರಿಗೆ ಸ್ಫೂರ್ತಿಯಾಗಿದ್ದು, ಅವರಿಗೆ ಸಿಎಂ ಸ್ಥಾನ ನೀಡಿದರೆ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಶಕ್ತಿ ಬರುವ ಜೊತೆಗೆ ಸಂಘಟನೆ ಹೆಚ್ಚಲಿದೆ ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಹಿರಿಯ ನಾಯಕರು, ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮತ್ತೊಂದು ಇತಿಹಾಸವನ್ನು ಸೃಷ್ಟಿಸಬೇಕು. ಕಾಂಗ್ರೆಸ್ ಪಕ್ಷಕ್ಕಾಗಿ ಹೋರಾಟ ಮಾಡಿರುವ ಅವರ ಕೊಡುಗೆ ಅನನ್ಯವಾದದ್ದು. ಅವರಲ್ಲಿರುವ ಪಕ್ಷ



ನಿಷ್ಠೆಯನ್ನು ಗುರುತಿಸಿ ಹೈಕಮಾಂಡ್ ಸೂಕ್ತ ನಿರ್ಧಾರ ಮಾಡಬೇಕು. ಒಂದು ವೇಳೆ ತಪ್ಪು ನಿರ್ಧಾರ ಕೈಗೊಂಡರೆ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ನಷ್ಟ ಉಂಟಾಗುತ್ತದೆ.

### ಡಿಕೆಶಿ ಶ್ರಮವನ್ನು ಹೈಕಮಾಂಡ್ ಗುರುತಿಸಲಿ – ಎ.ಬಿ.ಚೇತನ್ ಕುಮಾರ್

ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಮಾತನಾಡಿ, ಡಿ. ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಕಷ್ಟು ಶ್ರಮ ವಹಿಸಿದ್ದಾರೆ. ಪಕ್ಷಕ್ಕಾಗಿ ತನು, ಮನ, ಧನವನ್ನು ತ್ಯಾಗ ಮಾಡಿರುವುದನ್ನು ವರಿಷ್ಠರು ಮರೆಯಬಾರದು. ಮುಖ್ಯಮಂತ್ರಿ ಹುದ್ದೆ ವಿಚಾರವಾಗಿ ಎದ್ದಿರುವ ಎಲ್ಲ ಗೊಂದಲಗಳಿಗೆ ವರಿಷ್ಠರು ತೆರೆ ಎಳೆಯಬೇಕು. ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ಮೂಲಕ ಅವರ ಶ್ರಮಕ್ಕೆ ಕೂಲಿ ಕೊಡಬೇಕೆಂದು ಮನವಿ ಮಾಡಿದರು. ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಗುರುಪ್ರಸಾದ್, ನಗರಸಭೆ ಉಪಾಧ್ಯಕ್ಷೆ ಆಯಿಷಾಬಾನು, ತಾಪಂ ಮಾಜಿ ಅಧ್ಯಕ್ಷ ಸಿದ್ದಲಿಂಗೇಗೌಡ, ಹಿರಿಯ ಮುಖಂಡ ರಾಜೇಂದ್ರ, ನಗರಸಭೆ ಸದಸ್ಯೆ ಗಿರಿಜಮ್ಮ ಮಾತನಾಡಿ, ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಮೈಗೂಡಿಸಿಕೊಂಡಿರುವ ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದಾರೆ. ಅವರಿಗೆ ಅನ್ಯಾಯವಾಗುವುದನ್ನು ನಾವು ಸಹಿಸುವುದಿಲ್ಲ, ಅವರ ಜೊತೆ ನಾವೆಲ್ಲರೂ ಇದ್ದೇವೆ. ಹೈಕಮಾಂಡ್ ಕೊಟ್ಟ ಮಾತಿನಂತೆ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತಾರೆ ಎಂಬ ವಿಶ್ವಾಸವಿದೆ. ಉಳಿದಿರುವ ಎರಡೂವರೆ ವರ್ಷಗಳಿಗೆ ಡಿಕೆಶಿ ಅವರನ್ನು ಮುಖ್ಯಮಂತ್ರಿ ಮಾಡಲೇಬೇಕೆಂದು ಕಾಂಗ್ರೆಸ್ ಹೈಕಮಾಂಡನ್ನು ಒತ್ತಾಯಿಸಿದರು.

ನಗರಸಭೆ ಮಾಜಿ ಉಪಾಧ್ಯಕ್ಷ ಮುತ್ತುರಾಜು, ಹಿಂದುಳಿದ ಸಮುದಾಯಗಳ ಜಿಲ್ಲಾಧ್ಯಕ್ಷ ರೈಡ್ನಾಗರಾಜು, ಬಿಳಗುಂಬ ಗ್ರಾಪಂ ಅಧ್ಯಕ್ಷ ನವೀನ್, ಮಾಜಿ ಅಧ್ಯಕ್ಷ ಪುಟ್ಟಸಿದ್ದೇಗೌಡ, ಬಿಡದಿ ಬ್ಲಾಕ್ ಅಧ್ಯಕ್ಷ ಗಂಗಾಧರ್ಗೌಡ, ಅಥ್ಲೆಟಿಕ್ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಉಮೇಶ್ಬಾಬು, ಮುಖಂಡರಾದ ಉಮಾಶಂರ್ಕ, ರಾಜೇಂದ್ರ, ಕೆಂಚೇಗೌಡ, ರೇವಣ್ಣ, ಬಿ.ಟಿ.ರಾಜೇಂದ್ರ, ಶಫಿ, ಮೋಹನ, ದೇವರಾಜು, ರಘು, ಸುನಿಲ್, ಗುರುವೇಗೌಡ, ಕೃಷ್ಣ, ವಡೇರಹಳ್ಳಿಚಂದ್ರು, ತಿಬ್ಬಣ್ಣ ಮತ್ತಿತರರು ಹಾಜರಿದ್ದರು.

# ಜಿಆರ್‌ಎಸ್ ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ

ಮೈಸೂರು: ಜಿಆರ್‌ಎಸ್ ಪ್ಯಾಂಟಸಿ ಪಾರ್ಕ್‌ನಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದೆ ನೌಕರರೊಬ್ಬರು ಕಾಲು ಬೆರಳು ಕಳೆದುಕೊಂಡಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ನಲ್ಲಿ ಅ.1ರಂದು ಮನರಂಜನಾ ಚಟುವಟಿಕೆಯ ರೈಡ್‌ನ ಅಸಮರ್ಪಕ ಕಾರ್ಯಾಚರಣೆ, ಗಂಭೀರ ಸುರಕ್ಷತಾ ಲೋಪಗಳ ಪರಿಣಾಮವಾಗಿ ಸಂಭವಿಸಿದ ದುರ್ಘಟನೆಯಲ್ಲಿ ವಿಶಾಂತ್ ಯಾದವ್ ಅವರು ಕಾಲು ಬೆರಳುಗಳನ್ನು ಕಳೆದುಕೊಂಡು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಸುರಕ್ಷತಾ ಕ್ರಮಗಳನ್ನು ಅನುಸರಿಸದಿರುವುದು.




ಮನರಂಜನಾ ಚಟುವಟಿಕೆಯ ರೈಡ್‌ಗಳ ಸುರಕ್ಷತಾ ಮಾನದಂಡಗಳನ್ನು ಪಾಲಿಸುತ್ತಿಲ್ಲ. ಸಮರ್ಪಕ ಮೇಲ್ವಿಚಾರಣೆ, ನಿರ್ವಹಣೆಯ ಕೊರತೆ ಇದೆ. ತರಬೇತಿ ಪಡೆದ ಮತ್ತು ಪ್ರಮಾಣೀಕೃತ ರೈಡ್ ಆಪರೇಟರ್‌ಗಳ ಅಭಾವದಿಂದಾಗಿ ಇಂತಹ ಘಟನೆ ಸಂಭವಿಸಿದರೆ ಎಂದು ದೂರಿದರು.

ಮನರಂಜನೆಗಾಗಿ ಭೇಟಿ ನೀಡುವ ಜನರ ಸುರಕ್ಷತೆಯ ಮೇಲ್ವಿಚಾರಣೆ ಅಸಮರ್ಪಕವಾಗಿದೆ. ಸೂಕ್ತ ಪ್ರಥಮ ಚಿಕಿತ್ಸೆ ಮತ್ತು ತುರ್ತು ಪ್ರತಿಕ್ರಿಯಾ ವ್ಯವಸ್ಥೆಗಳ ಕೊರತೆಯೂ ಇದೆ. ಇಲ್ಲಿಗೆ ಭೇಟಿ ನೀಡುವ ಸಾವಿರಾರು ಜನ, ವಿಶೇಷವಾಗಿ ಮಕ್ಕಳ ಸುರಕ್ಷತೆಗೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸು ತ್ತಿಲ್ಲ. ಇಂತಹ ಲೋಪಗಳು ಮುಂದುವರಿದಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ಗೆ ಆಗಮಿಸುವ ಪ್ರತಿಯೊಬ್ಬ ವ್ಯಕ್ತಿಯೂ ಇದೇ ರೀತಿಯ ಅಪಾಯಕಾರಿ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಹೀಗಾಗಿ ಮನರಂಜನಾ ಚಟುವಟಿಕೆಗಳ ರೈಡ್ ನಿರ್ವಹಣಾ ದಾಖಲೆಗಳು, ಸುರಕ್ಷತಾ ಲೆಕ್ಕ ಪರಿಶೋಧನೆ, ಅಪರೇಟರ್ ತರಬೇತಿ ಕುರಿತು ತಕ್ಷಣದ ವಿಚಾರಣೆಗೆ ಆದೇಶಿಸಬೇಕು. ವಿಚಾರಣೆ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕವಾಗಿ ಮುಚ್ಚಬೇಕು. ಸುರಕ್ಷತಾ ಮಾನದಂಡಗಳ ಉಲ್ಲಂಘನೆ, ನಿರ್ಲಕ್ಷ್ಯ, ತಕ್ಷಣದ ವೈದ್ಯಕೀಯ ನೆರವು ಒದಗಿಸಲು ವಿಫಲವಾದ ಆಡಳಿತ ಮಂಡಳಿಯ ನಿರ್ವಹಣೆಯ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗೋಪಿ, ಬೋಗಾದಿ ಸಿದ್ದೇಗೌಡ,ಪ್ಯಾಲೆಸ್ ಬಾಬು ಸೇರಿ ಹಲವರು ಭಾಗವಹಿಸಿದ್ದರು.

# ಒಳಮೀಸಲಾತಿ ವ್ಯತ್ಯಾಸ ಸರಿಪಡಿಸಿ


## ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿಕೆ | ಸದಸ್ಯತ್ವ ನೋಂದಣಿ ಆಂದೋಲನ

ಮೈಸೂರು: ಒಳ ಮೀಸಲಾತಿ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸುವಂತೆ ವಿವಿಧ ಸಂಘಟನೆಗಳು ಒತ್ತಾಯಿಸುತ್ತಿವೆ. ಈ ಬಗ್ಗೆ ಸರ್ಕಾರಕ್ಕೆ ಗಮನಹರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ನಗರದ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೋಮವಾರ ನಡೆದ ಸಾಮಾಜಿಕ ನ್ಯಾಯ, ಒಳ ಮೀಸಲಾತಿ ಪರಿಕಲ್ಪನೆ ರಾಜ್ಯ ಮಟ್ಟದ ವಿಚಾರ ಗೋಷ್ಠಿ ಮತ್ತು ಸಮಿತಿಯ ಸದಸ್ಯತ್ವ ನೋಂದಣಿ ಆಂದೋಲನ ಮತ್ತು ಮೈಸೂರು ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಒಳ ಮೀಸಲಾತಿಗೆ ನೂರು ವರ್ಷಗಳ ಹೋರಾಟ ಇದೆ. ಕಳೆದ 3 ದಶಕಗಳಿಂದ ಹೋರಾಟ ತೀವ್ರಗೊಂಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಬದ್ಧತೆಯಿಂದ ದಲಿತರ ಬೇಡಿಕೆಯನ್ನು ಈಡೇರಿಸಿದರು. ಹೊಲಯ, ಮಾದಿಗರಿಗೆ ಶೇ.6ರಷ್ಟು ಹಂಚಿಕೆ ಮಾಡಲಾಗಿದೆ. ಉಳಿದ 98 ಸಮುದಾಯಗಳಲ್ಲಿ ಜಾತಿಗಳಲ್ಲಿ 68 ಸಮುದಾಯಗಳಿಗೆ ಕುಡಿಯಲು ನೀರಿಲ್ಲ, ಇರಲು ಸೂರಿಲ್ಲ. ಕನಿಷ್ಠ ಮೂಲಸೌಕರ್ಯವೂ ಇಲ್ಲದೇ ಜೀವನ ನಡೆಸುತ್ತಿದ್ದಾರೆ. ಈ ಅಸಹಾಯಕ ಸಮುದಾಯಗಳಿಗೆ ದಲಿತ ಸಂಘರ್ಷ ಸಮಿತಿ ಧ್ವನಿಯಾಗಬೇಕು ಎಂದು ಹೇಳಿದರು.

ಧ್ವನಿ ಕೊಟ್ಟ ಧಣಿ ಎಂದರೆ ಅದು ಅರಸು. ಮೀಸಲಾತಿಯಿಂದ ಹೊರಗುಳಿದಿದ್ದ ಹಲವು ಸಮುದಾಯಗಳಿಗೆ ಮೀಸಲಾತಿಯನ್ನು ಕಲ್ಪಿಸಿಕೊಟ್ಟವರು ದೇವರಾಜು ಅರಸು. ದೇವರಾಜು ಅರಸು



ನಂತರ ದಲಿತ ಸಮುದಾಯಕ್ಕೆ ಒಳ್ಳೆಯ ಕೆಲಸ ಮಾಡಿದ್ದಾರೆ. ಅದು ಮುಖ್ಯಮಂತ್ರಿ ಸಿದ್ದರಾಮಯ್ಯ. ಗುತ್ತಿಗೆ ಪೌರಕಾರ್ಮಿಕರನ್ನು ನೇರ ನೇಮಕ ಮಾಡಿದರು. 30 ಸಾವಿರ ಜನರನ್ನು ಖಾಯಂ ಮಾಡಿದರು. ಈ ಕೆಲಸವನ್ನು ಬಿಜೆಪಿ ಮಾಡಲಿಲ್ಲ. ಗುತ್ತಿಗೆ ಆಧಾರದ ಮೇಲೆ ಪರಿಶಿಷ್ಟ ಗುತ್ತಿಗೆದಾರರಿಗೆ ಕಾಮಗಾರಿ ಹಣವನ್ನು ಹೆಚ್ಚಿಸಿದರು ಎಂದರು.

ಒಳ ಮೀಸಲಾತಿ ಜಾರಿ ಮಾಡಿದ್ದು ಸಿದ್ದರಾಮಯ್ಯ ಅವರೆ. ಇಡೀ ರಾಷ್ಟ್ರದಲ್ಲಿ ರಾಜ್ಯದ ಹಣಕಾಸಿನ ಬಜೆಟ್ ನಲ್ಲಿ ಶೇ.24 ರಷ್ಟು ಹಣವನ್ನು ದಲಿತರಿಗಾಗಿ ಮೀಸಲಿಟ್ಟರು. ವಸತಿ ನಿಲಯಗಳಿಗೆ ವಿದ್ಯಾರ್ಥಿಗಳಿಗೆ ಸೀಟು ಇಲ್ಲ ಎಂದು ಕಳುಹಿಸಬಾರದು. ಇವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ದಲಿತ ಸಂಘರ್ಷ ಸಮಿತಿಯ ಒಬ್ಬರಿಗೂ ಎಡ–ಬಲ ಎನ್ನದೆ ಒಗ್ಗಟಾಗಿರಬೇಕು. ನನ್ನ ತಾಯಿ ಊರು ಕೆ.ಆರ್.ನಗರದ ಬಿಳಿಗೆರೆ ಗ್ರಾಮದಲ್ಲಿ ಮಾದಿಗ ಸಮುದಾಯದ ಮೇಲೆ ಸವರ್ಣೀಯರ ದಬ್ಬಾಳಿಕೆ ಒತ್ತು. ಅದನ್ನು ನಿಲ್ಲಿಸಿದ್ದು ಹೋರಾಟಗಾರ ನಿಂಗರಾಜು ಮಲ್ಲಾಡಿ ಎಂದು ಹೇಳಿದರು. 1970ರಲ್ಲಿ ದಲಿತ ಸಂಘರ್ಷ ಸಮಿತಿ ಆರಂಭಗೊಂಡಿತು. ಬಿ.ಕೃಷ್ಣಪ್ಪ ಅವರು ದಸಂಸದಿಂದ ಕೊಟ್ಟ ಶಕ್ತಿ ಇಂದು ನಾಯಕರನ್ನು ಸೃಷ್ಟಿ ಮಾಡಿದೆ. ಅವರು ನೆಟ್ಟ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ. ದಲಿತರ ಅನೇಕ ಸಮಸ್ಯೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರ ಗಮನಕ್ಕೆ ತಂದು ಪರಿಹರಿಸುತ್ತೇನೆ ಎಂದು ಭರವಸೆ ನೀಡಿದರು.

ಚಿಕ್ಕಮಗಳೂರಿನ ಭವಾನಿ ಮಾತನಾಡಿ, ದಲಿತರು ತಮ್ಮ ಮಕ್ಕಳಿಗೆ ಊಟ ಇಲ್ಲದಿದ್ದರೂ ಪರವಾಗಿಲ್ಲ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲೇಬೇಕು. ಅಲೆಮಾರಿ ಸಮುದಾಯಗಳು ಹೊಟ್ಟೆಪಾಡಿಗಾಗಿ ಊರೂರು ಅಲೆಯುತ್ತಿರುವುದರಿಂದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತವಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖಂಡ ರಾಜಶೇಖರ್ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಪರಿಕಲ್ಪನೆ ವಿಷಯ ಕುರಿತು ಮಾತನಾಡಿ, ಪರಿಶಿಷ್ಟ ಜಾತಿ?ಂ ಕೊನೆ?ಂಲ್ಲಿರುವ ಜಾತಿಗಳ ಜನರಿಗೆ ಅವಕಾಶ ಸಿಗುತ್ತಿಲ್ಲ. ಒಳ ಮೀಸಲಾತಿ ಹಂಚಿಕೊಂಡು ಕೆಲ ಜಾತಿಗಳಿಗೆ ಸೀಮಿತವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಬೇಕು ಎಂದು ತಿಳಿಸಿದರು.

ಒಳ ಮೀಸಲಾತಿ ಶೀಘ್ರವೇ ವೈಜ್ಞಾನಿಕವಾಗಿ ಜಾರಿಯಾಗಬೇಕು. ಹಂದಿ ಜೋಗಿ, ಶಿಳ್ಳೆಕ್ಯಾತ, ಕೋಲೆ ಬಸವ, ಕೊರಮ, ಸುಡುಗಾಡು ಸಿದ್ದ, ಚೆನ್ನದಾಸ, ಬೈರ, ನಾಗ, ದೊಂಬರ ಜಾತಿಗಳು ಪರಿಶಿಷ್ಟ ಜಾತಿಗಳ ನಡುವೆ ಪೈಪೋಟಿ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಒಳ ಮೀಸಲಾತಿಯಲ್ಲಿ ಶೇ.2ರಷ್ಟು ಮೀಸಲಾತಿ ನೀಡಬೇಕು.

ದಲಿತ ಸಂಘರ್ಷ ಸಮಿತಿಯ ಮುಖಂಡ ನಿಂಗರಾಜು ಮಲ್ಲಾಡಿ ಹಕ್ಕೊತ್ತಯಗಳನ್ನು ಮಂಡಿಸಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕರಾದ ತರೀಕೆರೆ ಎನ್. ವೆಂಕಟೇಶ್, ಕೆ.ನಂಜಪ್ಪ ಬಸವನಗುಡಿ, ಆದಿ ನಾರಾಯಣಪ್ಪ, ವಿಜಯಪುರದ ತಮ್ಮಣ್ಣ ಕಾನಾಗಡ್ಡಿ, ಬೆಳಗಾವಿಯ ಬಿ.ಆರ್.ಡೊಡ್ಡಮನಿ, ಶಿವಮೊಗ್ಗದ ಸಿ.ವಿಜಯಲಕ್ಷ್ಮೀ ಗೋಪಾಲ್, ಪ್ರವೀಣ್ ಕುಮಾರ್ ಇನ್ನಿತರರು ಹಾಜರಿದ್ದರು.

# ಇತ್ತೀಚೆಗೆ ಕನ್ನಡದ ಪ್ರಜ್ಞೆ ಹೆಚ್ಚಾಗಿದೆ



ಮೈಸೂರು: ಇತ್ತೀಚೆಗೆ ಜನರಲ್ಲಿ ಕನ್ನಡದ ಬಗ್ಗೆ ಪ್ರಜ್ಞೆ ಹೆಚ್ಚಾಗಿದೆ ಎಂದು ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ್ ವಿ. ಬೈರಿ ಹೇಳಿದರು.

ಕುವೆಂಪುನಗರದ ಶ್ರೀಕೃಷ್ಣದೇವರಾಯ ಅಲೆಯನ್ಸ್ ಕ್ಲಬ್ ವತಿಯಿಂದ ಸೋಮವಾರ ವಿಜಯನಗರ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಉದಯವಾದ ದಿನವನ್ನು ನವೆಂಬರ್ ತಿಂಗಳು ಪೂರ್ಣ ಅತ್ಯಂತ ಸಡಗರ, ಸಂಭ್ರಮ,ಉತ್ಸಾಹದಿಂದ ಆಚರಿಸುತ್ತಿರುವುದೇ ಇದಕ್ಕೆ ನಿದರ್ಶನ ಎಂದರು. ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿಕೊಂಡಾಗ ರಾಜ್ಯ ಉದಯವಾದ ದಿನವನ್ನು ಹೆಚ್ಚಾಗಿ ಆಚರಿಸುತ್ತಿರುವುದು ಕರ್ನಾಟಕದಲ್ಲಿ ಮಾತ್ರ. ಏಕೆಂದರೆ ಕನ್ನಡಕ್ಕೆ ಅಷ್ಟೊಂದು ಸಂಸ್ಕೃತಿ, ಪರಂಪರೆ, ಇತಿಹಾಸ ಇದೆ ಎಂದರು.

ಅಖಂಡ ಕರ್ನಾಟಕದ ಬಗ್ಗೆ ಯಾರಿಂದಲೂ ಅಪಸ್ವರ ಸಲ್ಲದು. ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಅಲೆಯನ್ಸ್ ಕ್ಲಬ್ ಜಿಲ್ಲಾ ಗೌರ್ನರ್ ಎಸ್. ವೆಂಕಟೇಶ್, ಒಂದನೇ ಉಪ ರಾಜ್ಯಪಾಲ ಮಹಾಬಲೇಶ್ವರ ಬೈರಿ ಮುಖ್ಯ ಅತಿಥಿಗಳಾಗಿದ್ದರು. ಇಂದಿರಾ ವೆಂಕಟೇಶ್, ಪ್ರಾಂತೀಯ ಅಧ್ಯಕ್ಷ ರಾಜು ಕುವೆಂಪು ನಗರ ಕ್ಲಬ್ ಅಧ್ಯಕ್ಷ ಶ್ರೀನಿವಾಸ್ ರಮೇಶ್, ಖಜಾಂಚಿ ರಾಕೇಶ್ ಅರಸ್ ಇದ್ದರು. ಪಲ್ಲವಿ ಕಾರ್ಯಕ್ರಮ ನಿರೂಪಿಸಿದರು. ರಾಘು ಪ್ರಾರ್ಥಿಸಿದರು. ರಾಜ್ಯೋತ್ಸವ ಅಂಗವಾಗಿ ಮೈಸೂರಿನ ಶಿಕ್ಷಕಿ ಕೃಪಾಲಿನಿ ಎಸ್. ರಾಜ್, ವೈದ್ಯೆ ಡಾ.ಸಹನಾ ಕೃಷ್ಣ, ವಿಜಯನಗರ ಎಸಿಪಿ ಕಚೇರಿಯ ಎಎಸ್ಐ ಮಲ್ಲಿಕಾರ್ಜುನಪ್ಪ, ಪಾಲಿಬೆಟ್ಟ ಪ್ರಾಂಶುಪಾಲೆ ಟಿ.ಸಿ. ಗೀತಾ ನಾಯ್ಡು ರನ್ನು ಸನ್ಮಾನಿಸಲಾಯಿತು

# ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಚಾಮರಾಜನಗರ, ತಾಲೂಕಿನ ಅಮಚವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿ.ಬಿ. ಬಸವರಾಜು ಹಾಗೂ ಉಪಾಧ್ಯಕ್ಷರಾಗಿ ಕೆಂಪರಾಜೇ ಅರಸ್ ಅವರು ಅವಿರೋಧವಾಗಿ ಆಯ್ಕೆಯಾದರು.

ಸಂಘ ಅಧ್ಯಕ್ಷರಾಗಿದ್ದ ನಾಗಸುಂದರ ಹಾಗೂ ಉಪಾಧ್ಯಕ್ಷ ಎ.ಎಂ. ಮಣಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗ್ರಾಮದ ಸಹಕಾರ ಸಂಘದ ಕಚೇರಿ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ–ಉಪಾಧ?ಯಕ್ಷರ ಆಯ್ಕೆ ಚುನಾವಣೆಯಲ್ಲಿ ಟಿ.ಬಿ. ಬಸವರಾಜು, ಕೆಂಪರಾಜೇ ಅರಸ್ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ನಾಗೇಶ್ ಅವರು ಅಧಿಕೃತವಾಗಿ ಘೋಷಣೆ ಮಾಡಿದರು.

**ಸಂಘದ ಅಭಿವೃದ್ಧಿ ಹೆಚ್ಚಿನ ಒತ್ತು:** ನೂತನ ಅಧ್ಯಕ್ಷ ಟಿ.ಬಿ. ಬಸವರಾಜು ಅಧಿಕಾರಿ ವಹಿಸಿ ಕೊಂಡು ಮಾತನಾಡಿ, ಸಂಘದ ಎಲ್ಲಾ ನಿರ್ದೇ ಶಕರು ಅವಿರೋಧವಾಗಿ ನಮ್ಮನ್ನು ಆಯ್ಕೆ ಮಾಡಿರುವುದಕ್ಕೆ ಅಭಾರಿಯಾಗಿದ್ದೇವೆ. ಮುಂದಿನ ದಿನಗಳಲ್ಲಿ ಸಂಘ ಸದಸ್ಯರಿಗೆ ಹೆಚ್ಚಿನ ಸಾಲ ಸೌಲಭ್ಯವನ್ನು ಕಲ್ಪಿಸಲು ಶ್ರಮಿಸುವುದಾಗಿ ತಿಳಿಸಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಕೆಂಪರಾಜೇ ಅರಸ್, ಮಾಜಿ ಅಧ್ಯಕ್ಷ ನಾಗಸುಂದರ, ಮಾಜಿ ಉಪಾಧ್ಯಕ್ಷ ಎ.ಎಂ. ಮಣಿ , ನಿರ್ದೇಶಕರಾದ ಎ.ಎನ್. ಸತೀಶ್, ಕತ್ತಿನಾಯಕ, ದೊಡ್ಡಶೆಟ್ಟಿ, ಇಂದ್ರೇಶ್‌ಕುಮಾರ್, ಸೋಮಶೇಖರಮೂರ್ತಿ, ನಂಜುಂಡಸ್ವಾಮಿ, ಮಲ್ಲಾಜಮ್ಮ,ಮುಖಂಡರಾದ ಚನ್ನಪ್ಪನಪುರ ಪ್ರಸಾದ್, ಸಿದ್ದಪ್ಪಾಜಿ, ಹರದನಹಳ್ಳಿ ಸಂಘದ ಅಧ್ಯಕ್ಷ ಮಹದೇವಶೆಟ್ಟಿ, ಚಿಕ್ಕರಾಜು, ವರದರಾಜು, ಗ್ಯಾರಂಟಿ ಸಮಿತಿ ಸದಸ್ಯ ರಾಜು, ಲಿಂಗರಾಜು, ಪ್ರಕಾಶ್, ದೇವರಾಜೇ ಅರಸ್, ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್ ಎಚ್. ಜೋಷಿ, ನೌಕರರಾದ ನಾಗರಾಜು, ಎ.ಎಸ್. ನಾಗೇಶ್, ಎ.ಜಿ. ಕುಮಾರಸ್ವಾಮಿ, ಎಸ್. ರವಿಕುಮಾರ್ ಇತರರು ಹಾಜರಿದ್ದರು.

# ಜ್ಯೋತಿಗೌಡನಪುರ ಪ್ರಕರಣ ಜಾತಿ ಬಣ್ಣ ಪಡೆಯುವುದು ಸರಿಯಲ್ಲ

ಚಾಮರಾಜನಗರ, ಜ್ಯೋತಿಗೌಡನಪುರ ಪ್ರಕರಣದ ಮೂಲಕ ಶೋಷಿತರನ್ನು ಧಂಗೆ ಏಳಿಸುವ ಹುನ್ನಾರ ನಡೆಸಲಾಗುತ್ತಿದೆ ಎಂದು ವಕೀಲ ಪ್ರಸನ್ನಕುಮಾರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಎಸ್ ಸಿ, ಎಸ್ ಟಿ ಸಮುದಾಯಗಳು ಶೋಷಿತ ಸಮುದಾಯಗಳಾಗಿವೆ. ಈ ಪ್ರಕರಣ ಜಾತಿ ಬಣ್ಣ ಪಡೆ ಯುತ್ತಿರುವುದು ವಿಪರ್ಯಾಸ, ನಮ್ಮ ಹೋರಾಟ ನಾಯಕ ಸಮುದಾಯದ ವಿರುದ್ಧವಲ್ಲ ಎಂದು ಹೇಳಿದರು. ಶೋಷಿತರೇ ಶೋಷಿತರ ವಿರುದ್ಧ ಹೋರಾಟ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಆ ಮೂಲಕ ಎರಡು ಸಮುದಾಯಗಳನ್ನು ಎತ್ತಿ ಕಟ್ಟುವ ಕೆಲಸವಾಗುತ್ತಿದೆ. ಎಲ್ಲ ಜನಾಂಗದವರು ಸಾಮರಸ್ಯದಿಂದ ಜೀವನ ಸಾಗಿಸಬೇಕು ಎಂದರು. ಅಂಬೇಡ್ಕರ್ ಅವರು ಒಂದು ಜಾತಿಯ ಪರ ಹೋರಾಡಿದವರಲ್ಲ, ಶೋಷಿತರ ಪರ ಹೋರಾಡಿದ ಅಂಬೇಡ್ಕರ್ ಒಂದು ಜಾತಿಗೆ ಸೀಮಿತವಲ್ಲ. ಪೊಲೀಸ್ ತನಿಖೆ ಪ್ರಗತಿಯಲ್ಲಿದ್ದು ಎಲ್ಲರೂ ಸಹಕರಿಸಬೇಕು. ಅಂಬೇಡ್ಕರ್ ಫ್ಲೆಕ್ಸ್ ಹಾಗೂ ಬುದ್ಧನ ಮೂರ್ತಿ ವಿರೂಪಗೊಳಿಸಿರುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ವಕೀಲ ಮಹೇಂದ್ರ ಮಾತನಾಡಿ, ಇದೊಂದು ಸೂಕ್ಷ್ಮ ವಿಚಾರವಾಗಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆ ಕೊಡುವಾಗ ಎಚ್ಚರಿಕೆ ವಹಿಸುವುದು ಅಗತ್ಯ ಪ್ರಚೋದನಕಾರಿ ಹೇಳಿಕೆ ಸಮಾಜಕ್ಕೆ ಒಳ್ಳೆಯದಲ್ಲ. ಈ ಪ್ರಕರಣದಲ್ಲಿ ಪೊಲೀಸರು ಸಾಕ್ಷಿಗಳನ್ನು ಕ್ರೂಢೀಕರಿಸಿ ಆರೋಪಿಯನ್ನು ಬಂಧಿಸಿದ್ದಾರೆ ಎಂದರು. ಮುಖಂಡ ಮೋಹನ್ ನಗು ಮಾತನಾಡಿ, ದಲಿತ ನಾಯಕರ ವಿರುದ್ಧ ಕೆಲವರು ಅವಹೇಳನಕಾರಿಯಾಗಿ ಮಾತನಾಡುತ್ತಿರುವುದು ಸರಿಯಲ್ಲ. ನಾವು ಯಾವುದೇ ಸಮುದಾಯದ ವಿರೋಧಿಗಳಲ್ಲ. ಜ್ಯೋತಿಗೌಡನಪುರ ಪ್ರಕರಣ ಹಿಂದೆ ಹಲವರ ಕೈವಾಡವಿದೆ. ಈ ಪ್ರಕರಣ ಸಂಬಂಧ ನಿಜವಾದ ಆರೋಪಿಗಳನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಜ್ಯೋತಿಗೌಡನಪುರ ನಾಗರಾಜು, ಆನಂತ್, ಸತೀಶ್ ಅಪ್ಪು, ಇತರರು ಹಾಜರಿದ್ದರು.



# ಗ್ರಾಮ ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ

ಎಚ್.ಡಿ.ಕೋಟೆ: ತಾಲೂಕಿನ ಚಕ್ಕೋಡನಹಳ್ಳಿ ಗ್ರಾ.ಪಂ ಆವರಣದಲ್ಲಿ ಹಮ್ಮಿಕೊಂಡಿದ್ದ ಗ್ರಾಮ ಸಭೆಯಲ್ಲಿ ಹಲವು ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದು, ಸಾರ್ವಜನಿಕರು ಹಾಗೂ ಗ್ರಾ.ಪಂ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

ಗೈರು ಹಾಜರಾದ ಎಲ್ಲ ಅಧಿಕಾರಿಗಳಿಗೆ ನೋಟೀಸ್ ನೀಡಿ ಮೇಲಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೆ ಮುಂದಿನ ಸಭೆಯಲ್ಲೂ ಅಧಿಕಾರಿಗಳು ಗೈರಾದರೆ ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು ಧರಣಿ ಕೈಗೊಳ್ಳುವುದಾಗಿ ಖಡಕ್ ಎಚ್ಚರಿಕೆ ನೀಡಲಾಯಿತು.

ಸೋಮವಾರ ಬೆಳಗ್ಗೆ 10.30ಕ್ಕೆ ಗ್ರಾಮ ಸಭೆ ನಿಗದಿಪಡಿಸಲಾಗಿತ್ತು. ಆದರೆ ಮಧ್ಯಾಹ್ನ ಒಂದು ಗಂಟೆಯಾದರೂ ಪ್ರಮುಖ ಇಲಾಖೆ ಅಧಿಕಾರಿಗಳ ಸುಳಿವೇ ಇರಲಿಲ್ಲ. ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ, ಕಂದಾಯ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ , ಅಬಕಾರಿ ಇಲಾಖೆ, ಪೊಲೀಸ್ ಇಲಾಖೆ ಮುಜರಾಯಿ ಇಲಾಖೆ ಅಧಿಕಾರಿಗಳು ಬರಲಿಲ್ಲ. ಕಾಟಾಚಾರಕ್ಕೆ ಎಂಬಂತೆ ಕೆಲ ಇಲಾಖಾಧಿಕಾರಿಗಳು ಕೆಳಹಂತದ ಸಿಬ್ಬಂದಿ ಕಳುಹಿಸಿದ್ದು, ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಯಿತು.

ನಮ್ಮ ಗ್ರಾಮದಲ್ಲಿ ಅನೇಕ ಸಮಸ್ಯೆಗಳಿವೆ. ಕಾಡು ಪ್ರಾಣಿಗಳ ಉಪಟಳ ಹೆಚ್ಚಾಗಿದೆ. ಅಲ್ಲಲ್ಲಿ ಹುಲಿ, ಚಿರತೆಗಳು ಕಾಣಿಸಿಕೊಳ್ಳುತ್ತಿದ್ದು, ರೈತರು ಭಯಭೀತರಾಗಿದ್ದಾರೆ. ಮೊನ್ನೆಯಷ್ಟೇ ಮೇಟಿಕುಪ್ಪೆ ಸಮೀಪ ಹುಲಿ ದಾಳಿಗೆ ಮೇಕೆ ಬಲಿಯಾಗಿದೆ. ಬಸವನಗಿರಿ ಹಾಡಿಯಲ್ಲಿ ಹಾಡಹಗಲೇ ಒಂಟಿಸಲಗ ರಾಜಾರೋಷವಾಗಿ ಓಡಾಡಿದೆ. ಬಹುತೇಕ ಸರ್ಕಾರಿ ಶಾಲೆಗಳು ಮೂಲಸೌಕರ್ಯದಿಂದ ವಂಚಿತವಾಗಿವೆ ಸಮಸ್ಯೆ ಬಗೆಹರಿಸಬೇಕಾದ ಅಧಿಕಾರಿಗಳೇ ಗೈರಾದರೆ ನಮ್ಮ ಸಮಸ್ಯೆ ಬಗೆಹರಿಸೋದು ಯಾರು ಎಂದು ಸಾರ್ವಜನಿಕರು, ಸಭೆಯಲ್ಲಿ ತಮ್ಮ ಸಿಟ್ಟು ಹೊರಹಾಕಿದರು. ಅಧಿಕಾರಿಗಳು ಬರದಿದ್ದರೆ ಗ್ರಾಮ ಪಂಚಾಯಿತಿಗೆ ಬೀಗ ಜಡಿಯುವುದಾಗಿ ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕರ ತಾಳ್ಮೆ ಮಿತಿಮೀರುತ್ತಿರುವುದನ್ನ ಕಂಡ ನೋಡೆಲ್ ಅಧಿಕಾರಿ ಮುತ್ತುರಾಜ್ ಮೇಲೆ ಸಿಟ್ಟಿಗೆದ್ದ ಸಾರ್ವಜನಿಕರು, ತರಾಟೆಗೆ ತೆಗೆದುಕೊಂಡರು. ಅಧಿಕಾರಿಗಳೇ ಬರದಿದ್ದ ಮೇಲೆ ಯಾವ ಪುರುಷಾರ್ಥಕ್ಕೆ ಗ್ರಾಮ ಸಭೆ ಆಯೋಜಿಸಿದ್ದೀರಾ..? ಟೀ ಕುಡಿದು, ಬಿಸ್ಕೆಟ್ ತಿನ್ನೋದಕ್ಕೆ ನಾವು ಸಭೆಗೆ ಬರಬೇಕಾ? 6 ತಿಂಗಳ ಹಿಂದೆ ನಡೆದ ಸಭೆಗೂ ಅಧಿಕಾರಿಗಳು ತಡವಾಗಿ ಬಂದಿದ್ದರು. ಪದೇ ಪದೇ ಅಧಿಕಾರಿಗಳು ಗೈರಾಗುವ ಮೂಲಕ ಅಸಡ್ಡೆ ತೋರುತ್ತಿದ್ದಾರೆ. ಗೈರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರಗಿಸಲು ಶಿಫಾರಸ್ಸು ಮಾಡಬೇಕು. ಜಿಲ್ಲಾಧಿಕಾರಿಗೆ ಪತ್ರ ಬರೆಯಬೇಕು ಎಂದು ಒತ್ತಾಯಿಸಿದರು.

ಗ್ರಾ.ಪಂ.ಉಪಾಧ್ಯಕ್ಷ ನಿಜಗುಣನಾಯಕ, ಮಾಜಿ ಅಧ್ಯಕ್ಷ ಸಂತೋಷ್, ಸ್ಥಾಯಿ ಸಮಿತಿ ಅಧ್ಯಕ್ಷೆ ಸುನೀತಾ ಶಿವರಾಜ್, ಸದಸ್ಯರಾದ ಮಹದೇವ್, ಲಕ್ಷ್ಮಣನಾಯಕ್, ಗಿರೀಶ್, ಕುಮಾರಮ್ಮ, ದಾಸ, ಪಿಡಿಒ ಸೋಲಮನ್ ರಾಜ್, ಕಾರ್ಯದರ್ಶಿ ಪ್ರಕಾಶ್, ಬಿಲ್ ಕಲೆಕ್ಟರ್ ಸುರೇಶ್, ಮುಖಂಡರಾದ ಜಿ.ಎಂ.ಹಳ್ಳಿ ಶಂಕರ್, ರವಿಕುಮಾರ್, ಸಿದ್ದು, ಎಟಿ ನಾಗರಾಜ್, ಬೂದನೂರು ಮಂಜುನಾಥ್, ರಾಜೇಶ್, ಕಲ್ಲಟ್ಟಿ ನಾಗೇಶ್, ಚಕ್ಕೋಡನಹಳ್ಳಿ ಶಿವರಾಜ್ ಸೇರಿದಂತೆ ಗ್ರಾಮಸ್ಥರು ಇದ್ದರು.



## ಗ್ರಾಮ ಸಭೆ ಮುಂದೂಡಿದ ಅಧ್ಯಕ್ಷೆ

**ಸಭೆ ಆರಂಭವಾಗಿ 3 ಗಂಟೆ ಕಳೆದರು ಪ್ರಮುಖ ಇಲಾಖೆ ಅಧಿಕಾರಿಗಳು ಆಗಮಿಸದ ಕಾರಣ ಗ್ರಾ. ಪಂ. ಅಧ್ಯಕ್ಷೆ ರಾಜೇಶ್ವರಿ ಶ್ರೀನಿವಾಸ್ ಗ್ರಾಮ ಸಭೆ ಮುಂದೂಡಿದರು. ಈ ವ್ಯಾಪ್ತಿಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಹುಲಿ, ಚಿರತೆಗಳು ಆಗ್ಗಾಗೆ ಕಾಣಿಸಿಕೊಂಡು, ರೈತರ ಸಾಕು ಪ್ರಾಣಿಗಳನ್ನು ಬಲಿ ಪಡೆಯುತ್ತಿವೆ. ಈ ಬಗ್ಗೆ ಗಮನಹರಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಚಕ್ಕೋಡನಹಳ್ಳಿ ಗ್ರಾಮ ಪಂಚಾಯಿತಿ ವಿಚಾರದಲ್ಲಿ ಅಧಿಕಾರಿಗಳು ಬೇಜವಾಬ್ದಾರಿ ತೋರುತ್ತಿದ್ದು, ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ಬಗ್ಗೆ ಜಿಲ್ಲಾಧಿಕಾರಿಗೆ ಪತ್ರ ಬರೆಯುವುದಾಗಿ ರಾಜೇಶ್ವರಿ ಶ್ರೀನಿವಾಸ್ ಹೇಳಿದರು.**

> **ತಾ.ಪಂ ನಲ್ಲಿ ಸಾಮಾನ್ಯ ಸಭೆಯಿದ್ದ ಹಿನ್ನೆಲೆ ಕೆಲ ಇಲಾಖೆಗಳ ಅಧಿಕಾರಿಗಳು ಗ್ರಾಮ ಸಭೆಗೆ ಬಂದಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಸೂಚನೆಯಂತೆ ಗ್ರಾಮ ಸಭೆಯನ್ನು ಮುಂದೂಡಲಾಗಿದೆ. ಒಂದು ವೇಳೆ ಮುಂದಿನ ದಿನಗಳಲ್ಲಿ ನಡೆಸುವ ಗ್ರಾಮ ಸಭೆಗೂ ಗೈರಾದರೆ ಶಿಸ್ತು ಕ್ರಮ ಕೈಗೊಳ್ಳುವಂತೆ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತೇನೆ.**
> **–ಮುತ್ತುರಾಜು** ತಾಲೂಕು ನೋಡೆಲ್ ಅಧಿಕಾರಿ

# ಅಥ್ಲೆಟಿಕ್ ಸ್ಪರ್ಧೆಯಲ್ಲಿಬಹುಮಾನ: ವಿದ್ಯಾರ್ಥಿನಿಗೆ ಶಾಲೆಯಿಂದ ಅಭಿನಂದನೆ

ಚಾಮರಾಜನಗರ, ನಗರದ ಸೇವಾ ಭಾರತಿ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿನಿ ಮಾನ್ಯಳಿಗೆ ಶಾಲೆಯಿಂದ ಅಭಿನಂದಿಸಿದರು.



ಶಾಲೆಯ ವಿದ್ಯಾರ್ಥಿನಿ ಮಾನ್ಯ ತಾಲೂಕು ಮಟ್ಟದಲ್ಲಿ ನಡೆದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಮೂರು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡು ತಾಲೂಕಿಗೆ ಚಾಂಪಿಯನ್ ಆಗಿದ್ದಾರೆ. ಹಾಗೂ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲೂ ಸಹ ಭಾಗವಹಿಸಿ 400 ಮೀಟರ್ ನಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆ ಆಗಿರುತ್ತಾಳೆ, ವಿದ್ಯಾರ್ಥಿನಿಯ ಸಾಧನೆಯನ್ನು ಗೌರವಿಸಿ

ಸೇವಾ ಭಾರತಿ ಶಿಕ್ಷಣ ಸಂಸ್ಥೆ ಸೇವಾ ಭಾರತಿ ಕನ್ನಡ ಮಾಧ್ಯಮ ಪ್ರೌಢಶಾಲೆ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸೇವಾ ಭಾರತೀ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ವಾಸುದೇವ ಗುರೂಜಿ, ಮುಖ್ಯ ಶಿಕ್ಷಕರಾದ ಶ್ರೀನಿವಾಸ್ ಗುರೂಜಿ, ಶಿಕ್ಷಕ ವೃಂದ ಶಾಲಾ ವೃಂದದಿಂದ ಅಭಿನಂದಿಸಿದರು.

# ಇಂದು ಕನ್ನಡ ಕಣ್ಮಣಿ ಪ್ರಶಸ್ತಿ ಪ್ರಧಾನ ಸಮಾರಂಭ

ಮೈಸೂರು: ಮಹಿಳಾ ರಕ್ಷಣಾ ಪಡೆ ಆಶ್ರಯದಲ್ಲಿ ನ. 25 ರ ಬೆಳಗ್ಗೆ 10.30ಕ್ಕೆ ನಗರದ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿರ?ಸ್ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ರಾಜ್ಯಾಧ್ಯಕ್ಷರಾದ ಲತಾ ಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯ ಪ್ರಶಸ್ತಿ ವಿಜೇತ ರವೀಶ್ ಶಾಸ್ತ್ರಿ ಉದ್ಘಾಟಿಸುವರು, ಶಾಸಕರಾದ ಹರೀಶ್‌ಗೌಡ, ಅನಿಲ್ ಚಿಕ್ಕಮಾದು,, ಭಾಗ್ಯ ಮಾದೇಶ್, ಬಸವರಾಜ ಮಾಲಗತ್ತಿ, ಎಸ್. ಯೋಗ ಶ್ರೀನಿವಾಸ್ ಇನ್ನಿತರರು ಅತಿಥಿಗಳಾಗಿರುವರು ಎಂದರು.

ಮೇಘನಾ ಗೌಡ, ಚುಟುಕುಸಿರಿ ರತ್ನ ಹಾಲಪ್ಪಗೌಡ, ಬಬಿತಾ, ಸುಶೀಲಾ, ಮಹದೇವಮ್ಮ, ನಾಗೇಶ್, ಪ್ರದೀಪ್‌ಕುಮಾರ್ ಎಂ.ಯು. ಶೈಲಜ, ಲಿಂಗರಾಜು, ತೇಜಸ್ವಿನಿ, ಮಹೇಶ್‌ಕುಮಾರ್, ಬಾಲಕೃಷ್ಣ ಹಾಗೂ ಎಚ್.ವಿ. ಪುಟ್ಟಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಕೊಪ್ಪಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ಬ್ಯಾಗ್, ಕನ್ನಡ ಸ್ವಾಭಿಮಾನ ಮೆರೆಸುವ ಆಟೋ ಚಾಲಕರು, ಪೌರ ಕಾರ್ಮಿಕರಿಗೆ ಸನ್ಮಾನ ಸಹಾ ಇರಲಿದೆ ಎಂದು ತಿಳಿಸಿದರು. ಕಮಲ ನಟರಾಜು, ಮೇಘನಾ ಗೌಡ, ಅಶ್ವಿನಿಗೌಡ, ಸೌಮ್ಯ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಾಯಕತ್ವ ಅಭಿಯಾನ ಕಾರ್ಯಾಗಾರ



ಗುಂಡ್ಲುಪೇಟೆ: ತಾಲೂಕಿನ ಚನ್ನಮಲ್ಲಿಪುರ ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆ ಹಾಗೂ ಸಮೃದ್ಧಿ ಅಂತರ್ಧ್ವನಿ ಮಹಿಳಾ ಒಕ್ಕೂಟದ ನೇತೃತ್ವ ದಲ್ಲಿ ಅಂತರ್ಧ್ವನಿ

ನಾಯಕತ್ವ ಅಭಿಯಾನ ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು

ಆರ್ಥಿಕ ಪರಿಸ್ಥಿತಿ ಸುಧಾರಿಸದ ಹೊರತು ಜೀವನ ಮಟ್ಟ ಉತ್ತಮ ವಾಗುವುದಿಲ್ಲ ಅದಕ್ಕಾಗಿ ನಾವು ನಮ್ಮ ಪೂರಕ ಯೋಜನೆ ಗಳನ್ನು ಅನುಷ್ಠಾನಗೊಳಿಸಬೇಕು ಹಾಗೂ ಇದಕ್ಕೆ ಮುಖ್ಯವಾಗಿ ನಾವು ನಮ್ಮ ಚಿಂತನೆ ಗಳನ್ನು ವೃದ್ಧಿಸಿಕೊಳ್ಳ ಬೇಕು ಈ ಚಿಂತನೆ ಗಳಿಗೆ ಬೇಕಾದ ವೇದಿಕೆ ಯೆ ಅಂತರ್ಧ್ವನಿ, ಹಾಗಾಗಿ ಎಲ್ಲರೂ ತಮ್ಮ ಒಳಗಿನ ಭಾವನೆ ಯನ್ನು ಹೊರ ಹಾಕುವ ಹಾಗೂ ಆತ್ಮ ಸ್ಥೈರ್ಯ ಬೆಳೆಸಿಕೊಳ್ಳುವ, ಈ ಮೂಲಕ ನಮ್ಮ ಹಕ್ಕನ್ನು ಚಲಾಯಿಸುವ ಕಡೆ ಜಾಗೃತಿ ಯಾಗಬೇಕು,ಇದಕ್ಕಾಗಿ ಮಹಿಳೆಯರು, ಯುವಕ ಯುವತಿ ಯರು ಹಾಗೂ ರೈತರನ್ನು ಮುನ್ನೆಲೆಗೆ ತರುವ ಮೂಲಕ ಜನರನ್ನು ಆರ್ಥಿಕವಾಗಿ ಸಬಲೀಕರಣ ಗೊಳಿಸುವುದೇ ಈ ಕಾರ್ಯಕ್ರಮ ದ ಉದ್ದೇಶ ವಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮ ದಲ್ಲಿ ಯೋಜನಾ ಮುಖ್ಯಸ್ಥರಾದ ಮಧು ಎನ್, ಅಂತರ್ಧ್ವನಿ ಯೋಜನೆ ಯ ನಿರ್ವಾಹಕಿ ಸೀತಾ ಲಕ್ಷ್ಮಿ, ಹಾಗೂ ರಾಹುಲ್ ನಂದನ್ ಹಾಗೂ ಒಕ್ಕೂಟದ ಸದಸ್ಯರು, ರೈತರು ಭಾಗವಹಿಸಿದ್ದರು ಕಾರ್ಯಾ ಗಾರದ ಪ್ರಯುಕ್ತ ಉಚಿತ ಅರೋಗ್ಯ ತಪಾಸಣೆ ಹಾಗೂ ದಾಸೋಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

# ಕೃಷಿಕ್ಷೇತ್ರ ಅಭಿವೃದ್ದಿಗೆ ಹೆಚ್ಚಿನ ಪ್ರೋತ್ಸಾಹ



ಚಾಮರಾಜನಗರ, ರಾಜ್ಯಸರಕಾರ ಕೃಷಿಕ್ಷೇತ್ರವನ್ನು ಉತ್ತೇಜಿಸುವ ಸಲುವಾಗಿ ಕೃಷಿಯಂತ್ರೋಪ ಕರಣಗಳನ್ನು ರೈತರಿಗೆ ಸಬ್ಸಿಡಿರೂಪದಲ್ಲಿ ಒದಗಿಸುತ್ತಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಕೃಷಿಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಆವರಣದಲ್ಲಿ ಕೃಷಿಇಲಾಖೆ ಕೃಷಿಯಾಂತ್ರೀಕರಣ ಯೋಜನೆಯಡಿ ತಾಲೂಕಿನ ಹರದನಹಳ್ಳಿ, ಚಂದಕವಾಡಿ ಹಾಗೂ ಕಸಬಾ ಹೋಬಳಿ ವ್ಯಾಪ್ತಿಯ ಗ್ರಾಮಗಳ 43 ಮಂದಿ ರೈತಫಲಾ ನುಭವಿಗಳಿಗೆ ಪವರ್‌ಟಿಲ್ಲರ್, ಪವರ್‌ವೀಡರ್, ಚಾಪ್ ಕಟ್ಟರ್, ಬ್ರಷ್ ಕಟ್ಟರ್, ಸ್ಪಿಂಕ್ಲರ್‌ಸೆಟ್ ಸೇರಿದಂತೆ ವಿವಿಧ ಕೃಷಿಯಂತ್ರಗಳನ್ನು ವಿತರಣೆ ಮಾಡಲಾ ಗುತ್ತಿದೆ ತುಂತುರು ನೀರಾವರಿ ಉಪಕರಣಗಳನ್ನು ವಿತರಣೆ ಮಾಡಿ ಮಾತನಾಡಿದರು. ಪರಿಕರ ಪಡೆದವರು ಕೃಷಿಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಹಾಗೆಯೇ ನಿಗಮದ ಅಧಿಕಾರಿ, ಸಿಬ್ಬಂದಿ ನಿಗಮದಿಂದ ದೊರೆಯುವ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಬೇಕು, ಗುಣಮಟ್ಟದ ಪರಿಕರ ಒದಗಿಸಲು ಕ್ರಮವಹಿಸಬೇಕು ಎಂದರು ಎಪಿಎಂಸಿ ಅಧ್ಯಕ್ಷ ಎಂ.ಬಿ.ಗುರುಸ್ವಾಮಿ, ನಗರಸಭೆ ಮಾಜಿಸದಸ್ಯ ಸ್ವಾಮಿ, ಕೃಷಿಇಲಾಖೆ ಸಹಾಯಕ ನಿರ್ದೇಶಕಿ ರೂಪಾ, ಕೃಷಿಅಧಿಕಾರಿ ಜಯಶಂಕರ್ ಸಿಬ್ಬಂದಿ, ರೈತಫಲಾನುಭವಿಗಳು ಹಾಜರಿದ್ದರು.

# ಫೆನ್ಸಿಂಗ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದ ಕೃತಿಕಾಗೆ ಸನ್ಮಾನ

ಚಾಮರಾಜನಗರ, ರಾಜ್ಯಮಟ್ಟದ ಫೆನ್ಸಿಂಗ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದ ಕೃತಿಕಾಗೆ ಇಲ್ಲಿನ ಲೋಟಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಪ್ರಸ್ತುತ ಶಾಲೆಯಲ್ಲಿ 9 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕೃತಿಕಾಗೆ ಶಾಲಾ ಆಡಳಿತ ಮಂಡಳಿ ವತಿಯಿಂದ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಲಾಯಿತು. ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ಕೃತಿಕಾ ಉತ್ತಮ ಪ್ರದರ್ಶನ ನೀಡಿ ಗೆಲುವು ಸಾಧಿಸಲಿ ಎಂದು ಶಾಲೆಯ ಶಿಕ್ಷಕ ವರ್ಗ ಹಾರೈಸಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲ ವಿರೂಪಾಕ್ಷ, ಮುಖ್ಯ ಶಿಕ್ಷಕ ಶಿವಕುಮಾರ್, ದೈಹಿಕ ಶಿಕ್ಷಣ ಶಿಕ್ಷಕ ಸೋಮಶೇಖರ್, ತರಬೇತುದಾರ ಪವನಕುಮಾರ್ ಸೇರಿದಂತೆ ಶಿಕ್ಷಕರು, ಕೃತಿಕಾಳ ಪೋಷಕರು ಹಾಜರಿದ್ದರು.




## ವರ್ತಕರ ಸೌಹಾರ್ದ ಸಹಕಾರಿ ಸಂಘಕ್ಕೆ ಗೌರವ

# ಸಂಘಕ್ಕೆ ಉತ್ತಮ ಸಹಕಾರಿ ಸಂಘ ಪ್ರಶಸ್ತಿ ಗರಿ

ಚಾಮರಾಜನಗರ, ಉತ್ತಮ ವಹಿವಾಟು ನಡೆಸುವ ಮೂಲಕ ವರ್ತಕರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘಕ್ಕೆ ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆಯ ಉತ್ತಮ ಸಹಕಾರ ಸಂಘ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ನಗರ ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಇಂದು ನಡೆ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗಣ್ಯರು ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಪದ್ಮ ಪ್ರಸಾದ್ ಅವರಿಗೆ ಉತ್ತಮ ಸಹಕಾರ ಸಂಘ ಪ್ರಶಸ್ತಿ ಫಲಕ, ಪ್ರಮಾಣ ಪತ್ರ ನೀಡಿ, ಶಾಲು , ಹಾರ ಹಾಕಿ ವೇದಿಕೆಯಲ್ಲಿ ಅಭಿನಂದಿದರು.

**ಸಂಘದಲ್ಲಿ ಸಂಭ್ರಮಾಚರಣೆ**

ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘಕ್ಕೆ ಉತ್ತಮ ಸಹಕಾರಿ ಸಂಘ ಪ್ರಶಸ್ತಿ ನೀಡಿ ಗೌರವಿಸಿದ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಲಿಯ ನಿರ್ದೇಶಕರು ಸಂಘದ ಕಚೇರಿ ಅವರಣದಲ್ಲಿ ಸಂಭ್ರಮಾಚರಣೆ ಮಾಡಿ, ಪರಸ್ಪರ ಸಿಹಿ ಹಂಚಿಕೆ ಮಾಡಿ ಹರ್ಷ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬಿ.ವಿ. ವೆಂಕಟನಾಗಪ್ಪ ಶೆಟ್ಟಿ, ಮುಖ್ಯನಿರ್ದೇಶಕರಾದ ಸಿ ಎಸ್ ಮಹೇಶ್ ಕುಮಾರ್, ನಿರ್ದೇಶಕರುಗಳು ಚಿದಾನಂದ ಗಣೇಶ್, ಹೆಚ್.ಬಿ. ರಾಜಶೇಖರ್, ಸಿ ಎ ನಾರಾಯಣ, ಕಮಲರಾಜ್, ಶ್ರೀಕಂಠ ಮೂರ್ತಿ,ಎಂ ರಾಜಣ್ಣ,ಸಿ ವಿ ಶ್ರೀನಿವಾಸ, ಸಿ ಎಸ್ ಮಹೇಶ್ ಕುಮಾರ್, ಪಿ ರಾಮಚಂದ್ರ, ರೇಖಾ ಶ್ರೀಧರ್, ಪುಷ್ಪ ಶ್ರೀನಿವಾಸನ್, ಎಸ್ ವಿ ಗಣೇಶ್, ಸಿ ಪಿ ಮಧುಸೂಧನ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ ಜಿ ಸಂಕೀರ್ತನ, ಕಚೇರಿ ಸಿಬ್ಬಂದಿ ಭಾವನಾ, ಸ್ಫೂರ್ತಿ, ಪ್ರಭು ಹಾಜರಿದ್ದರು.

## ಜಿಲ್ಲಾಡಳಿತ, ಸಹಕಾರ ಇಲಾಖೆ ಗುರುತಿಸುವುದು ಹೆಮ್ಮೆ ವಿಚಾರ

**ಸಂಘದ ಅಧ್ಯಕ್ಷ ಪದ್ಮ ಪ್ರಸಾದ್ ಮಾತನಾಡಿ, ಜಿಲ್ಲಾ ಕೇಂದ್ರ ದಲ್ಲಿರುವ ವರ್ತಕರ ಸೌಹಾರ್ದ ಸಹಕಾರ ಸಂಘವನ್ನು ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆ ಗುರುತಿಸಿ, ಉತ್ತಮ ಸಹಕಾರ ಸಂಘ ಪ್ರಶಸ್ತಿ ನೀಡಿರುವುದು ಹೆಮ್ಮೆ ಎನ್ನಿಸಿದೆ. ಈ ಪ್ರಶಸ್ತಿಯು ನಮ್ಮೆಲ್ಲರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿ, ಇನ್ನು ಉತ್ತಮ ರೀತಿಯ ಸೇವೆಯನ್ನು ನಮ್ಮ ವರ್ತಕರ ಬಂಧುಗಳಿಗೆ ನೀಡಲು ಮುಂದಾಗೋಣ ಎಂದು ತಿಳಿಸಿದರು.**

## ಜಿಲ್ಲಾ ಮಟ್ಟದ ಉತ್ತಮ ಸಹಕಾರ

**ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್. ಬಾಲಸುಬ್ರಮಣ್ಯ ಮಾತನಾಡಿ, ಸಂಘದ ಎಲ್ಲಾ ಸದಸ್ಯರ ಸಹಕಾರ ಹಾಗೂ ಆಡಳಿತ ಮಂಡಳಿ ಮತ್ತು ಸಂಘ ನೌಕರರ ಶ್ರಮದಿಂದ ಜಿಲ್ಲಾ ಮಟ್ಟದ ಉತ್ತಮ ಸಹಕಾರ ಸಂಘ ಪ್ರಶಸ್ತಿ ಲಭಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.**

## ಅನುಮತಿ ಪಡೆಯದೆ ಫ್ಲೆಕ್ಸ್ ಅಳವಡಿಸಿದರೆ ಕಠಿಣ ಕ್ರಮ

ರಾಮನಗರ: ನಗರಸಭೆಯ ಅನುಮತಿ ಪಡೆಯದೆ ನಗರದಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿದರೆ ಕಠಿಣ ಕ್ರಮ ಜರುಗಿಸುವುದಾಗಿ ನಗರಸಭೆಯ ಅಧ್ಯಕ್ಷ ಕೆ.ಶೇಷಾದ್ರಿ ಮಗದೊಮ್ಮೆ ಎಚ್ಚರಿಸಿದ್ದಾರೆ.

ನಗರಸಭೆಯ ಸಭಾಂಗಣದಲ್ಲಿ ಇ–ಖಾತಾ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಫ್ಲೆಕ್ಸ್ ಅಳವಡಿಕೆಯ ಬಗ್ಗೆ ಈಗಾಗಲೆ ಎಚ್ಚರಿಕೆ ನೀಡಲಾಗಿದೆ. ಯಾವುದೇ ಪಕ್ಷ, ಸಂಘಟನೆಯಾಗಲಿ ಅನುಮತಿ ಪಡೆಯುವುದು ಕಡ್ಡಾಯ. ಅನುಮತಿ ಇಲ್ಲದ ಫ್ಲೆಕ್ಸ್‌ಗಳನ್ನು ತೆಗೆದುಹಾಕುವುದಲ್ಲದೆ, ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಜರುಗಿಸುವುದಾಗಿ ತಿಳಿಸಿದರು. ಫ್ಲೆಕ್ಸ್‌ಗಳನ್ನು ಮುದ್ರಣ ಮಾಡುವವರಿಗೂ ಎಚ್ಚರಿಕೆ ನೀಡಿದ ಅವರು ನಗರಸಭೆಯ ಅನುಮತಿ ಪಡೆದಿರುವುದನ್ನು ದೃಢೀಕರಿಸಿ ಕೊಳ್ಳಬೇಕು ತದನಂತರವಷ್ಟೇ ಫ್ಲೆಕ್ಸ್ ಮುದ್ರಿಸಬೇಕು, ಇಲ್ಲದಿದ್ದರೆ ಮುದ್ರಣದಾರರ ವಿರುದ್ಧವೂ ಕ್ರಮ ಜರುಗಿಸುವುದಾಗಿ ತಿಳಿಸಿದರು.

ತಾಂತ್ರಿಕ ಸಮಸ್ಯೆಯಿಂದ ಇ–ಖಾತಾಗಳ ಸೃಜನೆಗೆ ಸಮಸ್ಯೆಯಾಗಿದ್ದರೂ ಇಲ್ಲಿಯವರೆಗೆ ಎಂಟು ಸಾವಿರ ಇ–ಖಾತಾಗಳನ್ನು ಸೃಜಿಸಲಾಗಿದೆ. ಸರ್ವರ್ ಸಮಸ್ಯೆ ನಿವಾರಿಸುವಂತೆ ತಾವು ಪೌರಾಡಳಿತ ನಿರ್ದೇಶನಾಯಲದ ಅಧಿಕಾರಿಗಳ ಗಮನಕ್ಕೂ ಸೆಳೆಯಲಾಗಿದೆ ಎಂದರು. ಇ–ಖಾತ ವಿಳಂಭವಾಗುತ್ತಿರುವುದಕ್ಕೆ ಆಸ್ತಿ ಮಾಲೀಕರು ಸಹಕರಿಸುತ್ತಿದ್ದಾರೆ. ತಾಂತ್ರಿಕ ಸಮಸ್ಯೆ ನಿವಾರಣೆಯಾಗುವವರೆಗೂ ಇವರ ಸಹಕಾರ ಬೇಕು ಎಂದರು. ಕೆಲವು ಪ್ರಜ್ಞಾವಂತರು, ವಿದ್ಯಾವಂತರೇ ತ್ಯಾಜ್ಯವನ್ನು ರಸ್ತೆ ಬದಿ ಸೇರಿದಂತೆ ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ಎಲ್ಲರೂ ತ್ಯಾಜ್ಯವನ್ನು ನಗರಸಭೆಯ ಕಸ ಸಂಗ್ರಹಣಾ ವಾಹನಗಳಿಗೆ ಕೊಡಬೇಕು. ನಗರಸಭೆಯ ಮೂಲಕ ಈ ವಿಚಾರದಲ್ಲಿ ದಿನನಿತ್ಯ ಜಾಗೃತಿ ಮೂಡಿಸಲಾಗುತ್ತಿದೆ. ಈ ನಿಯಮಗಳನ್ನು ಉಲ್ಲಂಘಿಸಿದರೆ ದಂಡ ಸೇರಿದಂತೆ ಕಾನೂನು ಕ್ರಮ ಅನಿವಾರ್ಯವಾಗುತ್ತದೆ ಎಂದರು.

ನಗರಸಭೆಯ ಉಪಾಧ್ಯಕ್ಷೆ ಆಯಿಷಾ ಬಾನು, ಸ್ಥಾಯಿ ಸಮಿತಿ ಅಧ್ಯಕ್ಷ ಪೈರೋಜ್ ಪಾಷ, ಸದಸ್ಯರುಗಳಾದ ಅಜ್ಮತ್, ಗಿರಿಜಮ್ಮ, ವಿಜಯಕುಮಾರಿ, ನಾಗಮ್ಮ, ನಗರಸಭೆಯ ಆಯುಕ್ತ ಡಾ.ಜಯಣ್ಣ ಮುಂತಾದವರು ಹಾಜರಿದ್ದರು.

## ಬಂಡೀಪುರ ಸಫಾರಿ ಆರಂಭಿಸಿದರೇ ರೈತಸಂಘದಿಂದ ಹೋರಾಟ



ಗುಂಡ್ಲುಪೇಟೆ.: ರೈತರ ಮೇಲೆ ಮಾರಣಾಂತಿಕ ದಾಳಿ ನಡೆಸುತ್ತಿದ್ದ ಕಾಡು ಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವ ಉದ್ದೇಶದಿಂದ ಬಂದ್ ಮಾಡಿದ್ದ ಸಫಾರಿಯನ್ನು ಪುನಃ ಆರಂಬಿಸಲು ಹೊರಟಿರುವ ಅರಣ್ಯ ಇಲಾಖೆಯ ಕ್ರಮ ಖಂಡನೀಯ ಹಾಗೇನಾದರೂ ಸಫಾರಿಯನ್ನು ಆರಂಬಿಸಿದರೆ ರೈತಸಂಘದಿಂದ ವಿವಿಧ ಹಂತದ ಉಗ್ರ ಹೋರಾಟವನ್ನು ಮಾಡಲಾಗುವುದು ಎಂದು ರೈತಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪನವರು ಎಚ್ಚರಿಕೆ ನೀಡಿದರು.

ಪಟ್ಟಣದ ಹೊಸ ಪ್ರವಾಸಿಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳು ಮಾನವ ಸಂಘರ್ಷ ವಿಪರೀತವಾಗಿದ್ದು ಇದರಿಂದ ಹಲವು ರೈತರು ಪ್ರಾಣ ಕಳೆದುಕೊಂಡಿದ್ದು ಹಲವಾರು ರೈತರು ಗಾಯಗೊಂಡಿದ್ದಾರೆ. ಇಂತಹ ಕಾಡುಪ್ರಾಣಿಗಳ ಹಾವಳಿಗೆ ಕಾರಣ ಬಂಡೀಪುರದ ರೆಸಾರ್ಟ್ ಗಳಿಗೆ ಬರುವ ಶ್ರೀಮಂತ ಮಂದಿ ತಮ್ಮ ಐಷರಾಮಿ ಜೀವನಶೈಲಿಯ ನಿಮಿತ್ತ ಕಾಡಿನ ಒಳಗೆ ಸಫಾರಿ ಮತ್ತಿತ್ತರ ಉದ್ದೇಶದಿಂದ ಕಾಡಿನೊಳಗಿನ ಅತಿಕ್ರಮ ಪ್ರವೇಶದಿಂದ ಕಾಡುಪ್ರಾಣಿಗಳು ಕಾಡು ಬಿಟ್ಟು ರೈತರ ಜಮೀನಿನತ್ತ ಬರುವುದರ ಮೂಲಕ ರೈತರಿಗೆ ಸಂಕಷ್ಟ ಒದಗಿದೆ. ಇಂತಹ ಘಟನೆಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಈಗ ಸಫಾರಿಯನ್ನು ಬಂದ್ ಮಾಡಲಾಗಿದೆ. ಆದರೆ ಅರಣ್ಯ ಇಲಾಖೆಯ ಅಧಿಕಾರಗಳ ಕುಮ್ಮಕ್ಕಿನಿಂದ ಸಫಾರಿಯನ್ನು ಪುನಃ ಆರಂಬಿಸಲು ಸಂಚು ರೂಪಿಸಲಾಗಿದೆ. ಇದಕ್ಕೆ ಅವರು ಕೊಡುವ ಕಾರಣ ಇದನ್ನ ನಂಬಿಕೊಂಡಿರುವ ಕಾರ್ಮಿಕರ ಹಿತದೃಷ್ಟಿಯಿಂದ ಎನ್ನುವುದು. ಆದರೆ ಈ ಕಾರ್ಮಿಕರಲ್ಲಿ ಸ್ಥಳೀಯರ ಸಂಖ್ಯೆಯೇ ಕಡಿಮೆಯಿದ್ದು ಹೊರಗಡೆಯಿಂದ ಮತ್ತು ಬೇರೆ ರಾಜ್ಯದ ಕಾರ್ಮಿಕರೇ ಅಧಿಕ ಸಂಖ್ಯೆಯಲ್ಲಿರುವ ಮಾಹಿತಿ ಇದೆ. ಸಫಾರಿಯಿಂದ ಬರುವ ಲಕ್ಷಾಂತರ ರೂ ಗಳಿಗೆ ಯಾವುದೇ ಲೆಕ್ಕವಿರುವುದಿಲ್ಲ. ಒಂದು ವೇಳೆ ಮತ್ತೆ ಸಫಾರಿ ಆರಂಬಿಸಲು ಹೊರಟರೇ ನಮ್ಮ ಸಂಘಟನೆಯ ವತಿಯಿಂದ ಉಗ್ರವಾದ ಹೋರಾಟವನ್ನು ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು ರೈತಸಂಘದ ತಾಲ್ಲೋಕು ಅಧ್ಯಕ್ಷ ಹಂಗಳ ದಿಲೀಪ್. ಮಾತನಾಡಿ ಸಫಾರಿಯನ್ನು ಪ್ರಾರಂಭಿಸಿದರೆ ವಿರೋಧಿಸಿ ರೈತಸಂಘದ ವತಿ ಯಿಂದ ಡಿಸೆಂಬರ್ 1 ರಂದು ತಾಲ್ಲೋಕು ಕಛೇರಿಯಿಂದ ಸಫಾರಿ ಕೇಂದ್ರದವರೆಗೆ ಪಾದೆಯಾತ್ರೆ ಹಮ್ಮಿಕೊಳ್ಳಲಾಗುವುದು ಎಚ್ಚರಿಕೆ ನೀಡಿದರು . ಪತ್ರಿಕಾಗೋಷ್ಠಿಯಲ್ಲಿ ಶಿವಣ್ಣ ಮಲ್ಲಯ್ಯನಪುರ, ನಾಗರಾಜು, ಮುಂತಾದವರು ಭಾಗವಹಿಸಿದ್ದರು.

## 28ಕ್ಕೆ ಸ್ನೇಹ ಸಂತೆ ಕಾರ್ಯಕ್ರಮ

ಮೈಸೂರು: ಇನ್ನರ್ ವ್ಹೀಲ್ ಮೈಸೂರು ಗೋಲ್ಡ್ ಕ್ಲಬ್ ವತಿಯಿಂದ ನ. 28ರಂದು ಕೆಡಿ ರಸ್ತೆಯ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಅನಾರೋಗ್ಯ ಪೀಡಿತ ನಾಲ್ವರಿಗೆ ನೆರವು ನೀಡುವ ದೃಷ್ಟಿಯಿಂದ ಸ್ನೇಹ ಸಂತೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ರಶ್ಮಿ ಬಸವರಾಜು ತಿಳಿಸಿದರು. ಇಲ್ಲಿ 20 ಸ್ಟಾಲ್‌ಗಳು ಇರಲಿದ್ದು, ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ತೆರೆದಿರಲಿದೆ. ಸೀರೆ, ಬಟ್ಟೆ, ಆಭರಣ ಮೊದಲಾದ ಮಳಿಗೆಗಳು ಇರಲಿವೆ. ಇದು ದೇಣಿಗೆ ಸಂಗ್ರಹದ ಸಮಾಜಮುಖಿ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು. ಇನ್ನಿತರ ಪದಾಧಿಕಾರಿಗಳಾದ ಮಾಯಾ ತಲ್ರೇಜಾ, ಆರ್. ಪ್ರತಿಭಾ, ಆರ್. ಶಾಲಿನಿ, ಡಾ. ಅನ್ನು ಅರ?ವಾಲ್, ಪೂರ್ಣಿಮಾ ಇದ್ದರು.

## ಡಿಕೆಶಿ ಸಿಎಂ ಆಗಲೆಂದು ಪ್ರಾರ್ಥನೆ



ಮೈಸೂರು: ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಈ ಬಾರಿ ಮುಖ್ಯಮಂತ್ರಿ ಆಗಲೆಂದು ಆಶಿಸಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ತೇಜೇಶ್ ಲೋಕೇಶ್ ಗೌಡ ನೇತೃತ್ವದಲ್ಲಿ 101 ತೆಂಗಿನ ಕಾಯಿ ಈಡುಗಾಯಿ ಒಡೆದು ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿ, ಡಿ.ಕೆ.ಶಿವಕುಮಾರ್ ಪಕ್ಷಕ್ಕಾಗಿ ತಮ್ಮ ತನು, ಮನ, ಧನವನ್ನು ಅರ್ಪಿಸಿದ್ದಾರೆ. ಪಕ್ಷದ ಶಿಸ್ತಿನ ಸಿಪಾಯಿ ಆಗಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವುದರಲ್ಲಿ ಬಹಳ ಶ್ರಮ ವಹಿಸಿದ್ದಾರೆ. ಆದ್ದರಿಂದ ಹೈಕಮಾಂಡ್ ಇವರನ್ನು ಮುಖ್ಯಮಂತ್ರಿ ಹುದ್ದೆಗೆ ಈ ಕೂಡಲೇ ಪರಿಗಣಿಸಬೇಕು. ಸಿದ್ದರಾಮಯ್ಯ ವಲಸಿಗರಾಗಿ ಕಾಂಗ್ರೆಸ್ ಗೆ ಬಂದು ಡಿ.ಕೆ.ಶಿವಕುಮಾರ್ ಬೆಂಬಲದಿಂದಲೇ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಈಗ ಡಿಕೆ ಶಿವಕುಮಾರ್ ರಿಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಟ್ಟು ತಮ್ಮ ಗೌರವವನ್ನು ಉಳಿಸಿಕೊಳ್ಳಬೇಕೆಂದರು. ಈ ಸಂದರ್ಭದಲ್ಲಿ ಬೋಗಾದಿ ಸಿದ್ದೇಗೌಡ, ಸಿಂದುವಳ್ಳಿ ಶಿವಕುಮಾರ್, ವರಕೂಡು ಕೃಷ್ಣೇಗೌಡ, ಪ್ರಭಾಕರ್, ಗಿರೀಶ್, ಹನುಮಂತಯ್ಯ, ನೇಹಾ, ಎಳನೀರು ರಾಮಣ್ಣ, ಹೊನ್ನೇಗೌಡ, ಜೋತಿ, ಮಂಜುಳಾ, ಸುಜಾತಾ, ಶಿವರಾಂ, ಕೃಷ್ಣಪ್ಪ, ಸುಬ್ಬೇಗೌಡ, ದರ್ಶನ್ ಗೌಡ, ಶಿವರಾಜ್, ಕುಮಾರ್, ರವೀಶ್, ಗಣೇಶ್ ಪ್ರಸಾದ್, ನಾಗರಾಜ್ ಉಪಸ್ಥಿತರಿದ್ದರು.

## ಡಿಕೆಶಿಗಾಗಿ ಸಿದ್ದು ತವರಲ್ಲೂ ಪ್ರಾರ್ಥನೆ

ಮೈಸೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಅಭಿಮಾನಿಗಳು ಸಿಎಂ ಸಿದ್ದರಾಮಯ್ಯ ತವರು ಜಿಲ್ಲೆಯ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.

ಮಾಲಾಧಾರಿಗಳಾಗಿ ಶಬರಿಮಲೆ ಯಾತ್ರೆಗೆ ಸಿದ್ಧರಾಗಿರುವ ಭಕ್ತರು ಡಿ.ಕೆ. ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಜಪ, ಭಜನ ಮತ್ತು ಶ್ಲೋಕ ಪಠಣ ನಡೆಸಿ ಅವರ ರಾಜಕೀಯ ಜೀವನ ಸುಗಮವಾಗಲಿ, ಅಡೆ ತಡೆಗಳು ದೂರವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

"ಮಂಡಲ ಪೂಜೆ ಪೂರ್ಣಗೊಂಡ ನಂತರ ಶಬರಿಮಲೆ ಯಾತ್ರೆಯಲ್ಲಿ ಕೂಡ ಡಿ.ಕೆ.ಶಿವಕುಮಾರ್ ಸಿಎಂ ಆಗಲೆಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು. ಈ ವಿಶೇಷ ಪ್ರಾರ್ಥನೆಯಲ್ಲಿ ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಜಿ. ರಾಘವೇಂದ್ರ, ಹರೀಶ್ ಗೌಡ, ಎಸ್ ಎನ್ ರಾಜೇಶ್, ಅಯ್ಯಪ್ಪ ಮಾಲಧಾರಿಗಳಾದ ಯೋಗೇಶ್, ಮಂಜುನಾಥ್, ರಾಮಣ್ಣ, ಪುಟ್ಟಾಚಾರ್, ಪ್ರಮೋದ್, ರಾಹುಲ್, ವಿಜಯಕುಮಾರ್, ಪ್ರಶಾಂತ್, ಮಹದೇವಸ್ವಾಮಿ ಇತರ ಭಕ್ತರು ಭಾಗವಹಿಸಿದ್ದರು.



# ಸೈಬರ್ ವಂಚನೆಗೆ ಯುವಕರು ಬಲಿ


## ಎಸ್.ಡಿ.ಪಿ.ಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಬೇಸರ

ಮೈಸೂರು: ಸೈಬರ್ ಆರ್ಥಿಕ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಅಮಾಯಕ ಯುವಕರು ಬಲಿಪಶುಗಳಾಗುತ್ತಿದ್ದು, ಮೈಸೂರು ನಗರ ಪೊಲೀಸ್ ಗುಪ್ತಚರ ವ್ಯವಸ್ಥೆ ಬಲಗೊಳ್ಳಬೇಕು ಜೊತೆಗೆ ಇದರ ಏಜೆಂಟ್ ಗಳನ್ನು ಪತ್ತೆ ಹಚ್ಚಬೇಕು ಎಂದು ಎಸ್.ಡಿ.ಪಿ.ಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಳೆದ ಕೆಲವು ದಿನಗಳಿಂದ ವಿವಿಧ ರಾಜ್ಯಗಳ ಪೊಲೀಸರು, ಸೈಬರ್ ಆರ್ಥಿಕ ಅಪರಾಧದ ಹಿನ್ನೆಲೆಯಲ್ಲಿ ಮೈಸೂರಿನ ವಿದ್ಯಾರ್ಥಿಗಳನ್ನು ಮತ್ತು ಯುವಕರನ್ನು ಬಂಧಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸೈಬರ್ ಆರ್ಥಿಕ ಅಪರಾಧದ ಕಬಂಧ ಬಾಹುಗಳು, ಮೈಸೂರು ನಗರವನ್ನು ಗುರಿಪಡಿಸಿಕೊಂಡಿರುವುದು, ಅದರಲ್ಲೂ ವಿದ್ಯಾರ್ಥಿಗಳನ್ನು ಮತ್ತು ಯುವಕರನ್ನು ಸಣ್ಣ ಮೊತ್ತದ ಆಸೆ ಅಮಿಷ ತೋರಿಸಿ, ತಮ್ಮ ಬಲೆಗೆ ಕೆಡವಿ, ಆರ್ಥಿಕ ಅಪರಾಧ ಮಾಡಿಸಿ, ಆ ಮೂಲಕ ಯುವಕರು ಜೈಲು ಪಾಲಾಗುತ್ತಿದ್ದಾರೆ. ಈ ವಿದ್ಯಾರ್ಥಿಗಳ ಮತ್ತು ಯುವಕರ ಪೋಷಕರು ಈ ಘಟನೆಗಳಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ವಿದೇಶದಲ್ಲೊ, ಉತ್ತರ ಭಾರತದಲ್ಲೊ ಕುಳಿತುಕೊಂಡಿರುವ ಸೈಬರ್ ಅಪರಾಧಿಗಳು, ನಿವೃತ್ತ ಅಧಿಕಾರಿಗಳನ್ನು ಮತ್ತು ವಯಸ್ಸಾದವರನ್ನು ಗುರಿಪಡಿಸಿ, ದೆಹಲಿ ಪೊಲೀಸ್, ಇಡಿ, ಖಖಿ ಮತ್ತು ಸಿಬಿಐ ಹೆಸರಿನಲ್ಲಿ, ವಾಟ್ಸಪ್ ಕರೆ ಮತ್ತು ವಿಡಿಯೋ ಕರೆ ಮಾಡಿ ಹೆದರಿಸಿ ಸೈಬರ್ ವಂಚನೆ ಮಾಡಿ ಅವರ ಖಾತೆಯಲ್ಲಿರುವ ಹಣವನ್ನು ತಮ್ಮ ಖಾತಗೆ ವರ್ಗಾಯಿಸಿಕೊಳ್ಳುತ್ತಾರೆ. ನಂತರ ಅಮಾಯಕರನ್ನು ಹುಡುಕಿ ಹಣವನ್ನು ನಗದು ಮಾಡಿಕೊಳ್ಳುತ್ತಿದ್ದಾರೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆ ಸೆನ್ ಕ್ರೈಂ ಪೊಲೀಸ್



ಠಾಣೆಯ, ಕ್ರೈಮ್ ನಂಬರ್ 90/ 2025 ರ ಸೆ. 24 ರಂದು ಬಂಟ್ವಾಳದ 75 ವರ್ಷದ ಪ್ರಾಯದ ಗ್ರೇಗೋರಿ ಮೊಂತೆರೊ ಎಂಬ ಮಹಿಳೆಯನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದಾಗಿ ಹೆದರಿಸಿ ಅವರ ಖಾತೆಯಲ್ಲಿದ್ದ ಒಂದು ಕೋಟಿ 16 ಲಕ್ಷ ರೂಪಾಯಿಯನ್ನು, ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ. ಎರಡನೇ ಪ್ರಕರಣ ಸೆ.24ರಂದು ಪೂನಾದ ಪಿಂಪ್ರಿ ಚಿಂಛ್ವಾಡ್ ಸೈಬರ್ ಪೊಲೀಸ್ ಸ್ಟೇಷನ್ನಲ್ಲಿ ಎಫ್.ಐ.ಆರ್ ಸಂಖ್ಯೆ 40/2025 ಅಡಿಯಲ್ಲಿ ದಾಖಲಾಗಿದ್ದು, ಈ ಪ್ರಕರಣದಲ್ಲಿ ಸುಮಾರು 73 ವರ್ಷ ಪ್ರಾಯದ ಗಣಪತಿ ಬಾಲಾಜಿ ಕಾಕಡೆ ಎಂಬ ನಿವೃತ್ತ ಬ್ಯಾಂಕ್ ಅಧಿಕಾರಿಯನ್ನು ಈ ಮೇಲಿನ ಪ್ರಕರಣದಲ್ಲಿ ತಿಳಿಸಿದಂತೆ ಹೆದರಿಸಿ ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ ಎಂದು ಹೆದರಿಸಿ, ಒಟ್ಟು ಒಂದು ಕೋಟಿ ಎಂಬತ್ತು ಲಕ್ಷದ ಮೂವತ್ತೇಳು ಸಾವಿರ ರೂಪಾಯಿಯನ್ನು ದೋಚಿರುತ್ತಾರೆ, ಈ ಪ್ರಕರಣದಲ್ಲೂ, ಮೈಸೂರಿನ ಕೆಲವು ವಿದ್ಯಾರ್ಥಿಗಳನ್ನು ಬಳಸಿ, ಸುಮಾರು 18 ಲಕ್ಷ ರೂಪಾಯಿಗಳನ್ನು, ಬ್ಯಾಂಕಿನಿಂದ ನಗದೀಕರಣ ಮಾಡಲಾಗಿದೆ. ಈ ಪ್ರಕರಣದಲ್ಲಿ ಮೈಸೂರಿನ ಇಬ್ಬರು ವಿದ್ಯಾರ್ಥಿಗಳನ್ನ ಪೊಲೀಸರು ಬಂಧಿಸಿ ಪೂನಾದ ಜೈಲಿಗಟ್ಟಿದ್ದಾರೆ.

ಮೂರನೇ ಪ್ರಕರಣ ಚೆನ್ನೈ ಉತ್ತರ, ಸೈಬರ್ ಕ್ರೈಂ ಪೊಲೀಸ್ ಸ್ಟೇಷನ್ನಲ್ಲಿ ಎಫ್ ಐ ಆರ್ ಸಂಖ್ಯೆ 46/2025, ಸೆ.25ಅಡಿಯಲ್ಲಿ ದಾಖಲಾಗಿದ್ದು, 70 ವರ್ಷ ಪ್ರಾಯದ ಡಾ. ಚಿತ್ರಲೇಖ, ಎಂಬುವರಿಗೆ ಕರೆ ಮಾಡಿದ ದುಷ್ಕರ್ಮಿಗಳು, ನಿಮ್ಮ ಆಧಾರ್ ಕಾರ್ಡನ್ನು ಬಳಸಿ, ಯಾರೋ ಹ್ಯೂಮನ್ ಟ್ರಾಫಿಕಿಂಗ್ ಮಾಡಿದ್ದಾರೆ ಎಂದು ಹೆದರಿಸಿ, ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ ಎಂದು ಹೆದರಿಸಿ, ಮೇಲಿನ ಪ್ರಕರಣದಲ್ಲಿ ತಿಳಿಸಿದಂತೆ, ಸುಮಾರು 24 ಲಕ್ಷ ರೂಪಾಯಿ, ಇವರ ಖಾತೆಯಿಂದ ಬಲವಂತವಾಗಿ ವರ್ಗಾವಣೆ ಮಾಡಿಕೊಂಡಿರುತ್ತಾರೆ, ಈ ಪ್ರಕರಣದಲ್ಲೂ, ಈ ಹಣ ನಗದೀಕರಣ ಗೊಂಡಿರುವುದು ಮೈಸೂರಿನ ಯುವಕರನ್ನು ಬಳಸಿಕೊಂಡು, ಈ ಪ್ರಕರಣದಲ್ಲಿ ಚೆನ್ನೈ ಪೋಲೀಸರು , ಮೈಸೂರಿನ ಮೂರು ಜನ ಯುವಕರನ್ನು ಬಂಧಿಸಿ ಚೆನ್ನೈ ಸೆಂಟ್ರಲ್ ಜೈಲಿಗೆ ಅಟ್ಟಿದ್ದಾರೆ ಎಂದು ಹೇಳಿದರು.

ಮೈಸೂರಿನಲ್ಲಿ ಡಿಜಿಟಲ್ ಅರೆಸ್ಟ್ ಆದ ಹಣವನ್ನು ನಗದೀಕರಣ ಮಾಡಲು ಕೆಲವು ಅಮಾಯಕ ಯುವಕರು, ವಿದ್ಯಾರ್ಥಿಗಳನ್ನು ಬಳಕೆಮಾಡಿಕೊಳ್ಳಲು ಕೆಲವು ಏಜೆಂಟ್ ಗಳು ಹುಟ್ಟುಕೊಂಡಿದ್ದು, ಮೊದಲು ಅಂತಹ ಏಜೆಂಟ್ ಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಡಿ.ಪಿ.ಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ರಾಜ್ಯಾ ಕೋಶಾಧಿಕಾರಿ ಅಮ್ಜದ್ ಖಾನ್, ಮೈಸೂರು ಜಿಲ್ಲಾಧ್ಯಕ್ಷ ರಫತ್ ಖಾನ್, ಉಪಾಧ್ಯಕ್ಷ ಎಸ್.ಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮದ್ ಫಿರ್ದೌಸ್ ಉಪಸ್ಥಿತರಿದ್ದರು.

## ಅಂತಾರಾಷ್ಟ್ರೀಯ ಶ್ರೀವಿದ್ಯಾ ಸಮ್ಮೇಳನ

ಮೈಸೂರು: ಜಯಲಕ್ಷ್ಮಿಪುರಂನಲ್ಲಿನ ತ್ರಯಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ವತಿಯಿಂದ ನ. 24 ಮತ್ತು 25 ರಂದು ನಗರದ ಮಾನಸ ಗಂಗೋತ್ರಿ ಸೆನೆಟ್ ಭವನದಲ್ಲಿ ಅಂತಾರಾಷ್ಟ್ರೀಯ ಶ್ರೀವಿದ್ಯಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಗುರುಗಳಾದ ಎಚ್.ಎಸ್. ತ್ಯಾಗರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಯೋಗದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಶ್ರೀವಿದ್ಯಾ ಉಪಾಸಕರು, ಆಸಕ್ತರು ಪಾಲ್ಗೊಳ್ಳಲಿದ್ದಾರೆ. ಈ ಕುರಿತು ಇರುವ ಅನುಮಾನ ಬಗೆಹರಿಸಲಾಗುವುದು. ಇದೇ ವೇಳೆ ಶ್ರೀವಿದ್ಯಾ ಸ್ಮರಣ ಸಂಚಿಕೆ ಸಹಾ ಬಿಡುಗಡೆಯಾಗಲಿದೆ. ನ.24 ರ ಬೆಳಗ್ಗೆ 9.30ಕ್ಕೆ ಗಣ್ಯರು ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ವೈ.ಎಸ್. ಲಕ್ಷ ?ಮಣ್, ಅಚ್ಯುತ್, ಪ್ರಸಾದ್, ಶಂಕರ್ ದೇಶಪಾಂಡೆ ಇದ್ದರು.

## ಇಂದಿನಿಂದ ಎರಡು ದಿನಗಳ ವಸ್ತು ಪ್ರದರ್ಶನ

ಮೈಸೂರು: ಹೈಲೈಫ್ ಸಂಸ್ಥೆ ವತಿಯಿಂದ ನ. 25 ಮತ್ತು 26 ರಂದು ಎರಡೂ ದಿನ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಹೈಲೈಫ್ ವಸ್ತು ಪ್ರದರ್ಶನವನ್ನು ನಗರದ ರ?ಯಾಡಿಸನ್ ಬ್ಲುಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಆಯೋಜಕರಾದ ಶೋಮಿಕಾ ಎಸ್. ರಾವ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರಲ್ಲಿ ಲೆಹೆಂಗಾ, ಸೀರೆ, ಡಿಸೈನರ್ ಗೌನ್, ಆಭರಣಗಳು ಮಾರಾಟಕ್ಕೆ ಇರಲಿವೆ. ವಿವಾಹ ಸಮಾರಂಭ, ಹಬ್ಬಾಚರಣೆಗಳಿಗೆ ಅಗತ್ಯವಾದ ಇಂತಹ ವಸ್ತುಗಳು ಕಡಿಮೆ ಬೆಲೆಗೆ ನಾವೀನ್ಯತೆಯಿಂದ ಕೂಡಿದ ರೀತಿಯಲ್ಲಿ ಖರೀದಿಗೆ ಲಭ್ಯವಿವೆ ಎಂದು ಮಾಹಿತಿ ನೀಡಿದರು. ಸಂಯೋಜಕ ಎಸ್. ಶ್ರೀಕಾಂತ್ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಗಿಡ ನೆಟ್ಟು ತಿಮ್ಮಕ್ಕರಿಗೆ ಶ್ರದ್ಧಾಂಜಲಿ



ಮೈಸೂರು: ಜೆ.ಪಿ.ನಗರದ ಮಹೇಂದ್ರ ಎನ್ಕ್ಲೇವ್ ಬಡಾವಣೆಯ ಉದ್ಯಾನವನದಲ್ಲಿ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಗಿಡ ನೆಡುವ ಮೂಲಕ ಶತಾಯುಷಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರತಿಯೊಬ್ಬರು ಒಂದೊಂದು ಗಿಡ ನೆಟ್ಟರೆ ಲಕ್ಷಾಂತಾರ ಗಿಡಗಳು ಸಮೃದ್ಧ ಪರಿಸರವಾಗಿ ಜೀವಿಸಲು ಉತ್ತಮ ಪರಿಸರ ವೃದ್ಧಿಸುತ್ತದೆ ಪರಿಸರವಾದಿ ಭಾನುಮೋಹನ್ ತಿಳಿಸಿದರು. ದಿವ್ಯ ಯತೀಶ್, ಮೊನ್ವಿತ, ಪ್ರದೀಪ್, ಶಿವಶಂಕರ್, ಮಹೇಂದ್ರ ಎನ್ಕ್ಲೇವ್‌ನ ಅಧ್ಯಕ್ಷ ಪುಟ್ಟರಾಜು, ಪಿ.ಪರಂಜ್ಯೋತಿ, ಬಿ.ಲಿಂಗರಾಜು, ಯಾಧವರಾವ್, ಟೀಮ್ ಗ್ರೀನ್ ಸುಬ್ರಮಣ್ಣಿ. ವಿನಯ, ಪೃಥ್ವಿ ಮಾದೇವ ಇದ್ದಾರೆ.

## ಬಸವನಪುರ ಡೇರಿಗೆ ನಿರ್ದೇಶಕರ ಆಯ್ಕೆ

ಚಾಮರಾಜನಗರ, ತಾಲೂಕಿನ ಬಸವನಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಸಂಘದ 5 ವರ್ಷದ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿ.ಎಂ.ಕುಮಾರ, ಮಹದೇವಸ್ವಾಮಿ, ಬಿ.ಸಿ.ಮಹದೇವಸ್ವಾಮಿ, ಮಂಜುನಾಥಸ್ವಾಮಿ, ಎಸ್.ಶಿವಮೂರ್ತಿ, ಬಿ.ಎಸ್.ಮಹದೇವಸ್ವಾಮಿ, ಕುಮಾರಿ, ಶಿವಮ್ಮ, ರಾಜಮ್ಮ, ರಾಜು, ಸದಾಶಿವಮೂರ್ತಿ, ಎಲ್.ಮಹದೇವಸ್ವಾಮಿ, ರಾಜಮ್ಮ ಅವರು ನಾಮಪತ್ರ ಸಲ್ಲಿಸಿದರು. ಇವರನ್ನು ಬಿಟ್ಟು ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ನೂತನ ನಿರ್ದೇಶಕರ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಅಧೀಕ್ಷಕ ಎಸ್.ನಾಗೇಶ್ ಘೋಷಿಸಿದರು. ಸಭೆಯಲ್ಲಿ ಕಾರ್ಯದರ್ಶಿ ಮಹಾದೇವಸ್ವಾಮಿ ಭಾಗವಹಿಸಿದ್ದರು.



**ಸನ್ಮಾನ**

ಸಂಘದ ನೂತನ ನಿರ್ದೇಶಕರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು. ಸಂಸ್ಥಾಪಕ ಅಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಗ್ರಾಮಸ್ಥರ ಒಗ್ಗಟ್ಟಿನ ಮೂಲಕ ಹಾಗೂ ಚಾಮುಲು ನಿರ್ದೇಶಕರಾದ ಸದಾಶಿವಮೂರ್ತಿ ಅವರ ಪರಿಶ್ರಮ ಫಲವಾಗಿ ಸಂಘಕ್ಕೆ ನೂತನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುವುದು ತುಂಬಾ ಖುಷಿ ತಂದಿದೆ. ಎಲ್ಲ ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯ ಚೆನ್ನಸ್ವಾಮಿ, ಮಾಜಿ ಸದಸ್ಯ ಪುಟ್ಟಮಾದಯ್ಯ, ಮಾಜಿ ಅಧ್ಯಕ್ಷರಾದ ರವಿಕುಮಾರ್, ಸಿದ್ದರಾಜು, ಸ್ವಾಮಿ, ಪುಟ್ಟಣ್ಣ, ಪ್ರಭುಸ್ವಾಮಿ, ನಾಗರಾಜು ಹಾಜರಿದ್ದರು

## ಡಿಕೆಶಿ ಸಿಎಂ ಆಗಲೆಂದು ವಿಶೇಷ ಪೂಜೆ



ಚಾಮರಾಜನಗರ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲೆಂದು ಟೌನ್ ಒಕ್ಕಲಿಗರ ಸಂಘ, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ವತಿಯಿಂದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ದೇವಸ್ಥಾನದಲ್ಲಿ ಡಿ.ಕೆ.ಶಿವಕುಮಾರ್ ಭಾವಚಿತ್ರ ಇಟ್ಟು ಅಭಿಷೇಕ ಮಾಡಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಹೊರಗಡೆ ಬಂದು ಈಡುಗಾಯಿ ಒಡೆದು ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ಘೋಷಣೆ ಕೂಗಿದರು. ನೇತೃತ್ವ ವಹಿಸಿದ್ದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ,ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಶೀಘ್ರವೇ ಮುಖ್ಯಮಂತ್ರಿ ಆಗಲೆಂದು ಟೌನ್ ಒಕ್ಕಲಿಗರ ಸಂಘ, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ವತಿಯಿಂದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು ಎಂದರು..

ಈ ಸಂದರ್ಭದಲ್ಲಿ ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಮಹೇಶ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರ, ಪಣ್ಯದಹುಂಡಿ ರಾಜು, ಮಹೇಶ್ ಗೌಡ, ಸುರೇಶ್ ಗೌಡ, ಅರುಣ್ ಕುಮಾರ್ ಗೌಡ, ಚೆನ್ನಸ್ವಾಮಿ, ಜಯಪ್ರಕಾಶ್, ನಾಗರಾಜು, ಜೆರಾಕ್ಸ್ ಮಾದೇಶ್, ಲೋಕೇಶ್, ನಾಗೇಂದ್ರ, ಮಂಜುಗೌಡ, ಕುಮಾರಗೌಡ ಕಾಮಗೆರೆ, ಹನೂರು ಸ್ವಾಮಿ, ರಾಜೇಶ್, ಗೋವಿಂದೇಗೌಡ, , ಲೋಕೇಶ್, ಸತೀಶ್, ಪ್ರಕಾಶ್,ಟೈಲರ್ ಮಹದೇವು, ರಘುಗೌಡ ಇತರರು ಹಾಜರಿದ್ದರು.

### ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಸಾಧನ ಸಮಾವೇಶ

## ಸತ್ಯನಾರಾಯಣ ಸ್ವಾಮಿ ಪೂಜಾ ಕಾರ್ಯಕ್ರಮ

ಕೆ ಆರ್ ಪೇಟೆ,ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ಕಿಕ್ಕೇರಿ. ಕಸಬಾ ವಲಯದ ಕಾಪನಹಳ್ಳಿಯ ಗವಿಮಠದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಸಾಧನ ಸಮಾವೇಶ ಮತ್ತು ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಾರ್ಯಕ್ರಮವನ್ನು ತಾಲೂಕಿನ ಶಾಸಕರಾದ ಹೆಚ್. ಟಿ. ಮಂಜುರವರ ಧರ್ಮಪತ್ನಿ ರಮಾ ಮಂಜುರವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು,

ರಮಾ ಮಂಜು ಮಾತನಾಡಿ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯಿಂದ ಸಾಮಾಜಿಕವಾಗಿ ಮಹಿಳೆಯರು ಸಬಲರಾಗುತ್ತಿದ್ದಾರೆ,ಎಲ್ಲಾ ವರ್ಗದ ಜನರಿಗೂ ಯೋಜನೆಯಿಂದ ಸೌಲಭ್ಯ ಗಳು ದೊರೆಯುತ್ತಿವೆ ಎಂದು ತಿಳಿಸಿದರು. ದಿವ್ಯ ಸಾನಿಧ್ಯ ಆಶೀರ್ವಚನ ನೀಡಿದ ಮ.ನಿ.ಪ್ರ.ಸ್ವತಂತ್ರ ಚನ್ನವೀರ ಸ್ವಾಮಿಗಳು ಸರ್ಕಾರ ಮಾಡದ ಕೆಲಸಗಳನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಖಾಂತರ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಸಮಾಜಮುಖಿ ಕಾರ್ಯಗಳನ್ನು ಎಲ್ಲಾ



ವರ್ಗದ ಜನಗಳಿಗೆ ತಲುಪುವಂತೆ ಮಾಡುತ್ತಿದ್ದಾರೆ ಇದರ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು.ಜಿಲ್ಲಾ ನಿರ್ದೇಶಕರಾದ ಯೋಗೀಶ್ ರವರು ಮಾತನಾಡಿ ಯೋಜನೆಯು ಕೃಷ್ಣರಾಜಪೇಟೆ ತಾಲೂಕಿನಲ್ಲಿ ಸುಮಾರು 14 ವರ್ಷದಿಂದ ಪ್ರಾರಂಭಗೊಂಡು ಉತ್ತಮ ಸಮಾಜ ಸೇವೆ ಯನ್ನು ಮಾಡುತ್ತಿದೆ, ಕಸಬಾ ವಲಯದಲ್ಲಿ 314 ತಂಡಗಳಿದ್ದು ಎಲ್ಲವೂ ಎ ಶ್ರೇಣಿ ಯಲ್ಲಿ ಇರುತ್ತದೆ.ಸುಜ್ಞಾನ ನಿಧಿ ಶಿಷ್ಯ ವೇತನ, ಟ್ಯೂಷನ್ ಕ್ಲಾಸ್, ಶ್ರದ್ದಾ ಕೇಂದ್ರದ ಸ್ವಚ್ಛತಾ ಕಾರ್ಯಕ್ರಮ, ಮದ್ಯವರ್ಜನಾ ಶಿಬಿರ, ಅರೋಗ್ಯ ಶಿಬಿರ, ಸಮುದಾಯ ಅಭಿವೃದ್ಧಿ ದೇವಸ್ಥಾನಗಳ ಪುನಶ್ಚೇತನಕ್ಕೆ ಅನುದಾನ, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಅನುದಾನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಅತ್ಯುತ್ತಮ ಒಕ್ಕೂಟಗಳನ್ನು ಗುರು ತಿಸಿ ಬಹುಮಾನವನ್ನು ವಿತರಣೆ ಮಾಡಿ ದರು, ಜಿಲ್ಲಾ ಜನಜಾಗೃತಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ ರವರು ಮಾತನಾಡಿ ದರು ತಾಲೂಕು ಯೋಜನಾ ಅಧಿಕಾರಿ ಪ್ರಸಾದ್, ವಲಯ ಮೇಲ್ವಿಚಾರಕಿ ಗುಣಶ್ರೀ, ಗ್ರಾ.ಪ, ಅಧ್ಯಕ್ಷ ಕುಮಾರ್,ಪ್ರಥಮ ದರ್ಜೆ ಗುತ್ತಿಗೆದಾರರಾದ ವಿ.ಡಿ. ಮೋಹನ್, ಕುಶಾಲ್ ಪಟೇಲ್ ಕಾಳೇಗೌಡನ ಕೊಪ್ಪಲು, ಸಾವಿತ್ರಮ್ಮ ,ಸ್ವಾಮಿ ಗೌಡ, ಗ್ರಾಮ ಪಂಚಾಯಿತಿ ಸದಸ್ಯರು ರಾಧಾ ಹರೀಶ್, ನಾಗೇಶ್ ಕಾಪನಹಳ್ಳಿ, ರವಿ ಕಾಳೇಗೌಡನ ಕೊಪ್ಪಲು, ಪುಟ್ಟರಾಜು ಕಾಪನಹಳ್ಳಿ, ನಳಿನ ಉಪಾಧ್ಯಕ್ಷರು ಜಿಲ್ಲಾ ಜನ ಜಾಗೃತಿ ವೇದಿಕೆ, ಕುಮಾರ್ ಜನ ಜಾಗೃತಿ ಸದಸ್ಯರು ವಲಯ ಸೇವಾ ಪ್ರತಿನಿಧಿಗಳು

# ತಮ್ಮಲ್ಲಿರುವ ಪ್ರತಿಭೆಯನ್ನು ಹೊರ ಹಾಕಿದ ನಂತರವೇ ವಿದ್ಯಾರ್ಥಿಯ ಸಾಧನೆ ತಿಳಿಯುವುದು: ಸುರೇಂದ್ರ ಮೂರ್ತಿ

**ಕೆ.ಆರ್.ನಗರ:** ಮೈಸೂರು ದೃಶ್ಯ ಕಲಾವಿದರ ಸಂಘದಿಂದ ಸ್ಥಳದಲ್ಲೇ ಚಿತ್ರ ಬಿಡಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮ ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆಯಿತು ಕಾರ್ಯಕ್ರಮಕ್ಕೆ ತಹಸಿಲ್ದಾರ್ ಸುರೇಂದ್ರ ಮೂರ್ತಿ ಚಾಲನೆ ನೀಡಿದರು.

ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರ ಚೆಲ್ಲಲು ಶಿಕ್ಷಕರು ಮತ್ತು ಶಿಕ್ಷಣ ಇಲಾಖೆ ವಿವಿಧ ರೀತಿಯಲ್ಲಿ ಪ್ರಯತ್ನ ಪಡುತ್ತಿದೆ ಯಾವ ವಿದ್ಯಾರ್ಥಿಯಲ್ಲಿ ಯಾವ ಪ್ರತಿಭೆ ಅಡಗಿದೆ ಎಂದು ಯಾರಿಗೂ ತಿಳಿದಿಲ್ಲ ಮನಸಲ್ಲಿರುವ ಪ್ರತಿಭೆಯನ್ನು ಹೊರ ಹಾಕಿದ ನಂತರವೇ ಆ ವಿದ್ಯಾರ್ಥಿಯ ಸಾಧನೆ ಅರ್ಥ ಆಗುವುದು. ಅಂತಹ ಪ್ರಯತ್ನದ ಕಾರ್ಯಕ್ರಮವನ್ನು ಕನ್ನಡ ಕಲರವ ಎಂಬ ಕಾರ್ಯಕ್ರಮದಡಿ ಜಿಲ್ಲಾ ದೃಶ್ಯ ಕಲಾವಿದರ ಸಂಘ ಮಾಡುತ್ತಿದೆ ಎಂದರು.

ಅದೇ ರೀತಿ ಜಿಲ್ಲಾ ದೃಶ್ಯ ಕಲಾವಿದರ ಸಂಘವು ಒಂದನೇ ತರಗತಿಯಿಂದ ನಾಲ್ಕನೇ ತರಗತಿ 5 ರಿಂದ 8ನೇ ತರಗತಿ. 9 10ನೇ ತರಗತಿ ವಿದ್ಯಾರ್ಥಿಗಳಿಂದ ಮೂರು ಹಂತದಲ್ಲಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಿರುವುದು ಒಳ್ಳೆಯ ಕಾರ್ಯಕ್ರಮ ಇಂತಹ ಸಂಘ ಸಂಸ್ಥೆಗಳು ಇನ್ನಷ್ಟು ಶೈಕ್ಷಣಿಕ ಮತ್ತು ಸಾಮಾಜಿಕ ಕೆಲಸಗಳನ್ನು ಮಾಡಲಿ ಎಂದು ಶುಭ ಹಾರೈಸಿದರು.



ವಾಲ್ಮೀಕಿ ಸಂಘದ ತಾಲೂಕು ಅಧ್ಯಕ್ಷ ಮಹದೇವ್ ಸಿ ಸಿ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬ ಮನುಷ್ಯನು ತಮ್ಮದೇ ಆದ ಸಾಧನೆಯನ್ನು ಮಾಡಲು ಸಾಕಷ್ಟು ರೀತಿಯಲ್ಲಿ ಯೋಜನೆಗಳನ್ನು ರೂಪಿಸಿಕೊಳ್ಳುತ್ತಾರೆ ಆದರೆ ಅದನ್ನು ಹೊರಹಾಕಲು ವೇದಿಕೆ ಸಿಗದೇ ತಮ್ಮಲ್ಲೇ ಅಡಗಿಸಿಕೊಂಡು ಬಿಡುತ್ತಾರೆ. ಅಂತಹ ಸಾಧಕ ವಿದ್ಯಾರ್ಥಿಗಳಿಗೆ ಇಂತಹ ಕಲಾವಿದರ ಸಂಘ ಬೆನ್ನೆಲುಬಾಗಿ ನಿಂತು ಉತ್ತಮ ವೇದಿಕೆ ಸೃಷ್ಟಿಸಿಕೊಂಡಿದೆ. ಕಲಾವಿದ ವಿದ್ಯಾರ್ಥಿಗಳು ಬರೆದಂತ ಒಂದೊಂದು ಚಿತ್ರವು ಒಂದೊಂದು ರೀತಿಯಲ್ಲಿ ಎಲ್ಲರ ಗಮನ ಸೆಳೆದಂತೆ ಸುಂದರವಾಗಿದ್ದವು. ಎಲ್ಲಾ ಸಂಘ ಸಂಸ್ಥೆಗಳು ಇಂತಹ ಕಾರ್ಯಕ್ರಮಗಳನ್ನು ಮಾಡಿದರೆ ಬಾಲ್ಯದಿಂದಲೇ ವಿದ್ಯಾರ್ಥಿಗಳು ಸಾಧನೆ ಮಾಡುವ ದಾರಿಯಲ್ಲಿ ಸಾಗುತ್ತಾರೆ ಇಲ್ಲಿ ಆಯ್ಕೆಯಾದ ಕಲಾವಿದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದಲ್ಲೂ ಅವಕಾಶ ಸಿಗಲಿ ಎಂದರು.

ಪೊಲೀಸ್ ವೃತ ನಿರೀಕ್ಷಕ ಶಿವಪ್ರಸಾದ್ ವೇದಿಕೆ ಕಾರ್ಯಕ್ರಮಕ್ಕಿಂತ ಮುನ್ನ ಚಿತ್ರ ಬಿಡಿಸುವ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟು,ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ಡಿಜಿಟಲ್ ಚಿತ್ರಗಳು ದಿನನಿತ್ಯ ರಾರಾಜಿಸುತ್ತಿದ್ದರು ಕೈ ಬರವಣಿಗೆಯಲ್ಲಿ ಬಿಡಿಸುತ್ತಿರುವ ಚಿತ್ರಗಳಿಗೆ ಹೆಚ್ಚು ಬೇಡಿಕೆ ಇದೆ. ಅಂತಹ ಹಿರಿಯ ಕಲಾವಿದರನ್ನು ಪ್ರೀತಿಸಿ ಗೌರವಿಸುವ ಕೆಲಸ ನಾವೆಲ್ಲರೂ ಮಾಡೋಣ. ಜತೆಗೆ ಯುವ ಪ್ರತಿಭೆ ಇರುವ ವಿದ್ಯಾರ್ಥಿಗಳಿಗೂ ಪ್ರೋತ್ಸಾಹಿಸಿ ಇಂತಹ ವೇದಿಕೆಗಳನ್ನು ಕಲ್ಪಿಸಿ ಕೊಡೋಣ ಎಂದು ಸ್ಪರ್ಧಾರ್ಥಿಗಳಿಗೆ ಮತ್ತು ಪೋಷಕರಿಗೆ ಕಿವಿಮಾತು ಹೇಳಿದರು.

ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಜಿಲ್ಲಾ ಸಂಘದಿಂದ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಇದಲ್ಲದೇ ಅತ್ಯುತ್ತಮ ಚಿತ್ರ ಬರೆದ ಸ್ಪರ್ಧಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳಲ್ಲಿಯೂ ಸ್ಪರ್ದೆ ಏರ್ಪಡಿಸಲಾಗುವುದು ಜೊತೆಗೆ ಈ ಕಾರ್ಯಕ್ರಮ ನಡೆಸಲು ಸ್ಥಳದ ಅವಕಾಶ ಕಲ್ಪಿಸಿಕೊಟ್ಟ ತಾಲೂಕು ನಾಯಕರ ಸಂಘಕ್ಕೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇವೆ ಎಂದು ಅನಿಲ್ ತಿಳಿಸಿದರು.

ದೃಶ್ಯ ಕಲಾವಿದರ ಸಂಘದ ಜಿಲ್ಲಾಧ್ಯಕ್ಷ ಬಾಲಸ್ವಾಮಿ, ಪ್ರದಾನ ಕಾರ್ಯದರ್ಶಿ ಗಣೇಶ ಎಸ್.ಜೆ. ಸಂಘದ ನಿರ್ದೇಶಕ ಕಲಾವಿದರಾದ ಅನಿಲ್ ಕುಮಾರ್, ಸೋಮಶೇಖರ್ ಡಿ.ಪಿ, ಚಾಮರಾಜ್, ಉಲ್ಲಾಸ್ ಡಿ.ಬಿ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಂಕರಮೂರ್ತಿ, ಕೆ ಆರ್ ನಗರ ತಾಲೂಕು ವಾಲ್ಮೀಕಿ ಸಂಘದ ಅಧ್ಯಕ್ಷ ಸುಬ್ಬಕೃಷ್ಣ, ಕಾರ್ಯದರ್ಶಿ ಗಣೇಶ್, ಖಜಾಂಚಿ ಹೊಸೂರು ಸಂತೋಷ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಶ್ಯಾಮ್ ಸುಂದರ್ ಕೆ.ಆರ್, ಪತ್ರಕರ್ತ ಪಂಡಿತ್ ನಾಟಿಕರ್, ತುಳಸಿ ಕುಮಾರ್, ಮಾದೇವ್, ಅಭಿಲಾಷ್ ಚನ್ನಂಗೆರೆ ಕುಮಾರ್ ಸೇರಿದಂತೆ ಪೋಷಕರು ಇದ್ದರು.

# ಮಕ್ಕಳ ಸಂತೆ ಕಾರ್ಯಕ್ರಮಗಳು ವ್ಯವಹಾರ ಜ್ಞಾನ ವೃದ್ಧಿಗೆ ಸಹಕಾರಿ: ಡಾ.ಜೆ.ಎನ್.ರಾಮಕೃಷ್ಣೇಗೌಡ



**ಕೆ.ಆರ್.ಪೇಟೆ:** ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಪಠ್ಯಪುಸ್ತಕ ಶಿಕ್ಷಣದ ಜೊತೆಗೆ ವ್ಯಾಪಾರ–ವ್ಯವಹಾರ ಜ್ಞಾನ ಅವಶ್ಯಕವಾಗಿದೆ. ಶಾಲೆಗಳಲ್ಲಿ ಆಯೋಜಿಸುವ ಮಕ್ಕಳ ಸಂತೆ ಕಾರ್ಯಕ್ರಮಗಳು ಮಕ್ಕಳ ವ್ಯವಹಾರ ಜ್ಞಾನ ವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಆದಿಚುಂಚನಗಿರಿ ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿಗಳಾದ ಡಾ.ಜೆ.ಎನ್.ರಾಮಕೃಷ್ಣೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಹೇಮಗಿರಿ ಶ್ರೀ ಕ್ಷೇತ್ರದಲ್ಲಿರುವ ಬಿ.ಜಿ.ಎಸ್ ಪಬ್ಲಿಕ್ ಶಾಲೆಯ ವತಿಯಿಂದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಮಕ್ಕಳ ಸಂತೆ ಕಾರ್ಯಕ್ರಮಕ್ಕೆ ಮಕ್ಕಳಿಂದ ತರಕಾರಿ–ಹಣ್ಣುಗಳನ್ನು ಖರೀದಿ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಪೋಷಕರು ತಮ್ಮ ಶಕ್ತಾನುಸಾರ ತಮ್ಮ ಮನೆಗೆ ಬೇಕಾದ ವಸ್ತುಗಳನ್ನು ಸಂತೆಯಲ್ಲಿಯೇ ಖರೀದಿ ಮಾಡುವ ಮೂಲಕ ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಾ ಬರುತ್ತಿದ್ದಾರೆ. ಜೊತೆಗೆ ಸಂತೆ, ಆಹಾರ ಮೇಳೆ, ಕಡಿಲೆ ಕಾಯಿ ಪರಿಸೆ, ಅವರೆಕಾಯಿ ಪರಿಸಿ ಮಾಡಿ ಮಕ್ಕಳ ಸಂತೆ ಕಾರ್ಯಕ್ರಮವನ್ನು ನಿರೀಕ್ಷೆಗೂ ಮೀರಿ ಯಶಸ್ವಿ ಮಾಡಿಕೊಂಡು ಬರಲಾಗುತ್ತಿದೆ ಇದಕ್ಕೆ ಮಕ್ಕಳ ಪೋಷಕರ ಸಹಕಾರವೂ ಹೆಚ್ಚಿನದಾಗಿದೆ ಎಂದು ಡಾ.ಜೆ.ಎನ್.ರಾಮಕೃಷ್ಣೇಗೌಡ ತಿಳಿಸಿದರು. ಮಕ್ಕಳ ಸಂತೆಯಲ್ಲಿ ಬಗೆ ಬಗೆಯ ತರಕಾರಿಗಳು, ಹಣ್ಣುಗಳು, ತೆಂಗಿನಕಾಯಿ, ಎಳೆನೀರು, ಮಜ್ಜಿಗೆ ಪಾನಕ, ರೊಟ್ಟಿ ಉಚ್ಚೆಳ್ಳುಪುಡಿ ಚಟ್ನಿ, ಸಾವಯವ ಬೆಲ್ಲ, ಸಾವಯವ ಪದಾರ್ಥಗಳನ್ನು ವಿದ್ಯಾರ್ಥಿಗಳು ತಂದು ಮಾರಾಟ ಮಾಡುವ ಮೂಲಕ ವ್ಯವಹಾರ ಜ್ಞಾನ ಪಡೆದುಕೊಂಡರು. ಪೋಷಕರು ಹಾಗೂ ಸಾರ್ವಜನಿಕರು ತರಕಾರಿ, ಹಣ್ಣುಗಳು ಹಾಗೂ ತಿಂಡಿ ತಿನಿಸುಗಳನ್ನು ಕೊಂಡು ಮಕ್ಕಳಿಗೆ ಪ್ರೋತ್ಸಾಹ ನೀಡಿದರು. ಈ ಸಂದರ್ಭದಲ್ಲಿ ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಬಂಡಿಹೊಳೆ ಅಶೋಕ್‌ಕುಮಾರ್, ಯುವ ಪತ್ರಕರ್ತ ಮಾಕವಳ್ಳಿ ರಂಗನಾಥ್ ಹಾಗೂ ಬಿಜಿಎಸ್ ಪಬ್ಲಿಕ್ ಶಾಲೆಯ ಶಿಕ್ಷಕ ವೃಂದದವರು, ಪೋಷಕರು ಉಪಸ್ಥಿತರಿದ್ದರು.

# ಸಮಾಜಕ್ಕೆ ಮಕ್ಕಳು ಉತ್ತಮ ಕೊಡುಗೆ ನೀಡಬೇಕು: ಆನಂದ್ ಎಂ



**ಮಂಡ್ಯ:** ಮಕ್ಕಳೇ ದೇಶದ ಶಕ್ತಿ, ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆನಂದ್ ಎಂ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಬಾಲಕರ ಮತ್ತು ಬಾಲಕಿಯರ ಬಾಲಮಂದಿರ, ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ (ರಿ) ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಮಕ್ಕಳ ದಿನಾಚರಣೆ –2025 ರ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಉತ್ತಮ ಮಕ್ಕಳನ್ನು ಸಮಾಜಕ್ಕೆ ನೀಡುವಲ್ಲಿ ಷೋಷಕರ ಹಾಗೂ ಶಿಕ್ಷಕರ ಪಾತ್ರ ಬಹು ಮುಖ್ಯವಾದದ್ದು, ಭಾರತ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸಲಾಗುವುದು, ಚಾಚ ನೆಹರೂ ಅವರಿಗೆ ಮಕ್ಕಳ ಮೇಲೆ ವಿಶೇಷ ಪ್ರೀತಿ ಇತ್ತು ಎಂದು ತಿಳಿಸಿದರು.

ಮಕ್ಕಳಿರು ಮನೆಯಲ್ಲಿ ವರ್ಷವಿಡೀ ಹಬ್ಬದ ವಾತಾವರಣ ಇರುತ್ತದೆ, ಮಕ್ಕಳು ಒಳ್ಳೆಯ ಸಂಸ್ಕಾರ ಕಲಿತು ದೇಶದ ಉತ್ತಮ ಪ್ರಜೆಗಳಾಗಿ ದೇಶದ ಆಸ್ತಿಯಾಗಿ, ನಮ್ಮ ಮಕ್ಕಳನ್ನು ಮಾತ್ರವಲ್ಲ ದೇಶದ ಮಕ್ಕಳನ್ನು ಉತ್ತಮವಾಗಿ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಅವರು ಮಾತನಾಡಿ ಮಕ್ಕಳನ್ನು ದೇವರ ಸಮಾನವಾಗಿ ಕಾಣುತ್ತೇವೆ, ಪ್ರತಿಯೊಬ್ಬ ಮಕ್ಕಳು ತನ್ನದೇ ಆದ ವಿಶಿಷ್ಟ ಪ್ರತಿಭೆ ಹೊಂದಿರುತ್ತಾರೆ ಅ ಪ್ರತಿಭೆಯನ್ನು ಗುರುತಿಸಿ ಸರಿಯಾದ ವೇದಿಕೆ ಕಲ್ಪಿಸುವುದು ಅತಿ ಮುಖ್ಯ. ಎಷ್ಟೋ ಸಂದರ್ಭಗಳಲ್ಲಿ ಸಮಾಜದ ಪ್ರಭಾವದಿಂದ ಮಕ್ಕಳು ದೇಶಕ್ಕೆ ಸತ್ ಪ್ರಜೆಗಳಾಗದೆ ಉಳಿದು ಬಿಡುತ್ತಾರೆ. ಇವತ್ತೀನ ಮಕ್ಕಳನ್ನು ಸರಿಯಾಗಿ ನಡೆಸಿಕೊಂಡು ಅವರನ್ನು ಪಾಲನೆ ಪೋಷಣೆ ಮಾಡಿದ್ದ ಆದರೆ ಸಮಾಜಕ್ಕೆ ಉತ್ತಮ ನಿದರ್ಶನವಾಗುತ್ತಾರೆ ಎಂದು ಹೇಳಿದರು. ಪ್ರತಿಯೊಬ್ಬರೂ ಕೂಡ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಬೇಕು. ದೇಶದ ನಿಜವಾದ ಆಸ್ತಿ ಮಕ್ಕಳುಗಳು ದೇಶದ ಭವಿಷ್ಯ ಅವರ ಮೇಲೆ ನಿಂತಿದೆ. ಮಕ್ಕಳನ್ನು ಸರಿಯಾಗಿ ಸಂರಕ್ಷಣೆ ಮಾಡಿದೆ ಹೋದರೆ ಸಮಾಜಕ್ಕೆ ಮಾರಕವಾಗಿ ಬೆಳೆಯುತ್ತಾರೆ. ಬಹಳ ಮುಖ್ಯವಾಗಿ ಮಕ್ಕಳಿಗೆ ಸಮಾನತೆ ಮತ್ತು ಶಿಕ್ಷಣ ದೊರೆಯಬೇಕು ಎಂಬ ಹೇಳಿದರು.

ಬಾಲಭವನ ವಿವಿಧ ಪಾಲನೆ ಪೋಷಣೆ ಸಂಸ್ಥೆಗಳಲ್ಲಿ ಇರುವ ಮಕ್ಕಳು ನಿಜಕ್ಕೂ ನಿರ್ಲಕ್ಷ್ಯತನಕ್ಕೆ ಒಳಗಾಗಿರುವ ಮಕ್ಕಳು, ತಂದೆ ತಾಯಿಯರ ಪ್ರೀತಿಯಿಂದ ವಂಚಿತರಾದರು ಆದರೆ ಅವರ ಪ್ರತಿಭೆ ದೊಡ್ಡದು. ಅವರ ಪ್ರತಿಭೆಯನ್ನು ನಾವು ಗುರುತಿಸಬೇಕು ಎಂದು ಹೇಳಿದರು.

ಮಕ್ಕಳು ಬಾಲ ಮಂದಿರ ಹಾಗೂ ಮಕ್ಕಳ ಪಾಲನಾ ಪೋಷಣಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾರಿಗೂ ದೇವರು ಒಳ್ಳೆಯದನ್ನು ಮಾಡುತ್ತಾನೆ. ಮಕ್ಕಳಿಗೆ ಊಟ ನೀಡಿ ಅವರ ಪಾಲನೆ ಪೋಷಣೆ ಮಾಡುತ್ತಿದ್ದೀರಿ ನಿಮ್ಮ ಮಕ್ಕಳನ್ನು ಇದು ಕಾಪಾಡುತ್ತದೆ. ಇದೆ ರೀತಿಯಲ್ಲಿ ನಿಮ್ಮ ಕಾರ್ಯ ಮುಂದುವರೆಯಲಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯರಾದ ವೆಂಕಟೇಶ್ ಅವರು ಮಾತನಾಡಿ ಮಕ್ಕಳ ದಿನಾಚರಣೆ ಆಚರಣೆ ಮಾಡಲು ಅನೇಕರು ಶ್ರಮಿಸಿದ್ದಾರೆ. ಮಕ್ಕಳು ದೇಶದ ಆಸ್ತಿ. ಮಕ್ಕಳನ್ನು ಸೂಕ್ತ ಮಾರ್ಗದಲ್ಲಿ ಸಾಗುವಂತೆ ನೋಡಿಕೊಳ್ಳಬೇಕು. ರಾಷ್ಟ್ರಕವಿ ಕುವೆಂಪು ಅವರು ಮಕ್ಕಳನ್ನು ವಿಶ್ವಮಾನವರು ಎಂದು ಕರೆದರು ಎಂದು ಹೇಳಿದರು.

ನಂತರ ಮಕ್ಕಳ ದಿನಾಚರಣೆಯನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು ಜಿಲ್ಲಾಧಿಕಾರಿ ಡಾ.ಕುಮಾರ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ ಅವರು ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಸಭೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ ಎಸ್, ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರಗುರು, ಪ್ರೇರಣ ಟ್ರಸ್ಟ್ ವ್ಯವಸ್ಥಾಪಕ ರವಿಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ರಾಜೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ನ.26ರಂದು ಭಾರತದ ಸಂವಿಧಾನ ಬೃಹತ್ ಜಾಗೃತಿ ಮೆರವಣಿಗೆ ಕಾರ್ಯಕ್ರಮ

**ಮಂಡ್ಯ:** 76ನೇ ಭಾರತದ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಪರಿವರ್ತನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯ ವತಿಯಿಂದ ಸಂವಿಧಾನೋತ್ಸವ ಹಾಗೂ ಭಾತರದ ಸಂವಿಧಾನ ಬೃಹತ್ ಜಾಗೃತಿ ಮೆರವಣಿಗೆ ಕಾರ್ಯಕ್ರಮವನ್ನು ನ.26ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಟಿ.ಡಿ.ನಾಗರಾಜು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2 ಗಂಟೆಗೆ ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಉದ್ಯಾನವನದಿಂದ ಜಿಲ್ಲಾಧಿಕಾರಿ ಕಛೇರಿಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿಯ ವೇದಿಕೆವರೆಗೆ ಜಾಗೃತಿ ಮೆರವಣಿಗೆ ನಡೆಯಲಿದೆ. ಸಂಜೆ.50.30ಕ್ಕೆ ವೇದಿಕೆ ಕಾರ್ಯಕ್ರಮ ನೆರವೇರಲಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಡಾ.ಎಂ.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಪಿ.ರವಿಕುಮಾರ್‌ಗೌಡ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಪರಿಸರ ಮಾಲಿನ್ಯ ನಿಯಂತ್ರ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಗೌರವ ಉಪಸ್ಥಿತಿ ವಹಿಸಲಿದ್ದು, ಮೈತ್ರೇಯ ಗ್ಲೋಬಲ್ ಅಕಾಡೆಮಿಯ ನಿರ್ದೇಶಕ ಡಾ.ಜಿ.ಶ್ರೀನಿವಾಸ್ ಸಂವಿಧಾನದ ಕುರಿತು ಉಪನ್ಯಾಸ ನೀಡುವರು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ವಿಜಯಲಕ್ಷ್ಮಿ ರಘುನಂದನ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಾ.ಮೀರಾ ಶಿವಲಿಂಗಯ್ಯ, ಸುನಂದ ಜಯರಾಂ, ಡಾ.ಜಯಪ್ರಕಾಶ್‌ಗೌಡ, ಪ್ರೊ.ಹುಲ್ಕೆರೆ ಮಹದೇವು ಸೇರಿದಂತೆ ಪ್ರಗತಿಪರ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂವಿಧಾನ ಸಂಬಂಧ ಜಿಲ್ಲಾದ್ಯಂತ 8 ಕ್ಲಸ್ಟರ್ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದು, ಒಟ್ಟು 24 ಮಂದಿಗೆ ಬಹುಮಾನ ವಿತರಣೆ ಮಾಡಲಾಗುವುದು. ಪ್ರಥಮ ಬಹುಮಾನ 3000, ದ್ವಿತೀಯ 2000, ತೃತೀಯ 1000 ರೂ. ನಗದು ಹಾಗೂ ಪ್ರಮಾಣಪತ್ರ, ಸಂವಿಧಾನ ಕಿರು ಪುಸ್ತಕ ನೀಡಿ ಸನ್ಮಾನಿಸಲಾಗುವುದು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಡಾ.ಎಂ.ವೆಂಕಟೇಶ್, ಕರಾದಸಂಸ ಜಿಲಾ ಸಂಚಾಲಕ ಎಂ.ವಿ.ಕೃಷ್ಣ, ನೆಲದನಿ ಬಳಗದ ಎಂ.ಸಿ.ಲಂಕೇಶ್, ಸಂವಿಧಾನ ಸೇನೆಯ ಎಚ್.ಎನ್.ನರಸಿಂಹಮೂರ್ತಿ, ಮಹ್ಮದ್ತಾಹೀರ್, ವೈ.ಥಾಮಸ್ ಬೆಂಜಮಿನ್ ಇದ್ದರು.

# ಕಾವೇರಿಗೆ ಕೊಳಚೆ ನೀರು ಹರಿಯದಂತೆ ಕ್ರಮ ವಹಿಸಿ: ಅಧಿಕಾರಿಗಳಿಗೆ ಡಿಸಿ ಕುಮಾರ ಸೂಚನೆ

ಮಂಡ್ಯ: ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಬಳಿ ನಗರದ ತ್ಯಾಜ್ಯ ನೀರು ಕಾವೇರಿ ನದಿಗೆ ಸೇರುತ್ತಿರುವುದನ್ನು ಕಂಡು ಉಪ ಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿದ್ದಾರೆ. ಕಾವೇರಿ ನದಿಗೆ ಕೊಳಚೆ ನೀರು ಸೇರಿದಂತೆ ಸೂಕ್ತ ಕ್ರಮವಹಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.




ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವೆಲ್ಲೆಸ್ಲಿ ಸೇತುವೆ ಬಳಿ ಕಾವೇರಿ ನದಿಗೆ ಹೋಗುತ್ತಿರುವ ಕೊಳಚೆ ನೀರು ತಡೆಗಟ್ಟುವ ಸಂಬಂಧ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾವೇರಿ ನದಿಗೆ ಕೊಳಚೆ ನೀರು ಹೋಗದಂತೆ ಅಡ್ಡಲಾಗಿ ತಡೆಗೋಡೆ ನಿರ್ಮಿಸಲು ಸಮಿತಿಯನ್ನು ರಚಿಸಿ ಜವಾಬ್ದಾರಿಯನ್ನು ನೀಡಿದರು.

ಶ್ರೀರಂಗಪಟ್ಟಣ ಟೌನ್ ಕೊಳಚೆ ನೀರು ಪಟ್ಟಣದ ರಾಂಪಾಲ್ ರಸ್ತೆಯಿಂದ ಉತ್ತರ ಭಾಗದ ಚಿಕ್ಕಹೊಳೆ (ವಾಟರ್ ಗೇಟ್) ಮೂಲಕ ಹರಿದು ಕೃಷಿ ತೋಟದ ಪಕ್ಕದಲ್ಲಿ ಹರಿದು ಬಿದ್ದಕೋಟೆಯಿಂದ ವೆಲ್ಲೆಸ್ಲಿ ಸೇತುವೆ ಬಳಿಗೆ ಕೊಳಚೆ ನೀರು ಸೇರುತ್ತಿದೆ. ವೆಲ್ಲೆಸ್ಲಿ ಸೇತುವೆಯ ವಾಟರ್ ಗೇಟ್ ಬಳಿಯಲ್ಲಿ ಒಂದು ತಡೆಗೋಡೆ ನಿರ್ಮಿಸಿ ಕಾವೇರಿ ನದಿಗೆ ಕಲುಷಿತ ನೀರು ಸೇರಿದಂತೆ ತಡೆಗಟ್ಟಬಹುದು ಎಂದರು.

ನಂತರ ಬಿದ್ದಕೋಟೆ ಗಣಪತಿ ದೇವಸ್ಥಾನದ ಹತ್ತಿರ ಮತ್ತೊಂದು ತಡೆಗೋಡೆಯನ್ನು ನಿರ್ಮಿಸಿ ಪರ್ಯಾಯ ಮಾರ್ಗವಾಗಿ ಒಂದು ಸೂಕ್ತ ಸ್ಥಳದಲ್ಲಿ ವೆಟ್ ವೆಲ್ ನಿರ್ಮಿಸಿ ವೆಟ್ ವೆಲ್ ಮೂಲಕ ಕಲುಷಿತಗೊಂಡ ನೀರನ್ನು ಮೋಟಾರ್ ಪಂಪ್ ಮೂಲಕ ಪ್ರಸ್ತುತ ಬಿದ್ದಕೋಟೆ ಗಣಪತಿ ದೇವಸ್ಥಾನದ ಮೇಲ್ಭಾಗದಲ್ಲಿರುವ ವೆಟ್ ವೆಲ್ ಮುಖಾಂತರ ಸಂಗ್ರಹಿಸಿ ಎಸ್.ಟಿ.ಪಿ (ಕೊಳಚೆ ನೀರು ಶುದ್ಧೀಕರಣ ಘಟಕ) ಪ್ಲಾಂಟ್ ಗಂಜಾಂಗೆ ಸಾಗಿಸಿ ವೈಜ್ಞಾನಿಕವಾಗಿ ಸಂಸ್ಕರಿಸಿ ಎಂದು ಸೂಚಿಸಿದರು.

ಈಗಾಗಲೇ ವೆಲ್ಲೆಸ್ಲಿ ಸೇತುವೆಯ ವಾಟರ್ ಗೇಟ್ ಬಳಿ ಒಂದು ತಡೆಗೋಡೆಯನ್ನು ನಿರ್ಮಿಸಲಾಗಿದೆ, ಕಾವೇರಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಇರುವುದರಿಂದಾಗಿ ಬಿದ್ದಕೋಟೆ ಗಣಪತಿ ದೇವಸ್ಥಾನದ ಹತ್ತಿರ ಇನ್ನೊಂದು ತಡೆಗೋಡೆ ನಿರ್ಮಿಸಲು ಅಡ್ಡಿಯಾಗಿತ್ತು. ಪ್ರಸ್ತುತ ಪ್ರವಾಹದ ಪ್ರಮಾಣ ಕಡಿಮೆಯಾಗಿದ್ದು ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ ಕಲುಷಿತ ನೀರು ಕಾವೇರಿ ನದಿಗೆ ಸೇರಿದಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಶ್ರೀರಂಗಪಟ್ಟಣ ತಹಶೀಲ್ದಾರ್ ಚೇತನ ಯಾದವ್, ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರ ಪ್ರತಾಪ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಹರ್ಷ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಾಬಾ ಸಾಬ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಭಾರತದ ಐಕ್ಯತೆ–ಸಮಗ್ರತೆಗೆ ಪಣತೊಟ್ಟ ವಲ್ಲಭಬಾಯಿ ಪಟೇಲ್: ಸತ್ ಕೀರ್ತಿನಾಥ ಸ್ವಾಮೀಜಿ ಅಭಿಮತ

ಆದಿಚುಂಚನಗಿರಿ: ಭಾರತವು ಐಕ್ಯತೆ ಮತ್ತು ಸಮಗ್ರತೆಯನ್ನು ಬೆಳೆಸಿಕೊಳ್ಳುವಲ್ಲಿ, ಆದರ್ಶ ರಾಷ್ಟ್ರದ ಕನಸು ಹೊತ್ತ ಸ್ವಾತಂತ್ರ್ಯ ಸೇನಾನಿ ಹಾಗೂ ಪ್ರಥಮ ಉಪ ಪ್ರಧಾನಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರನ್ನು ಸ್ಮರಿಸುವ ಪುಣ್ಯ ದಿನವೆಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಸತ್ ಕೀರ್ತಿನಾಥ ಸ್ವಾಮೀಜಿ ಅಭಿಪ್ರಾಯ ಪಟ್ಟರು.



ಬಿಜಿ ನಗರದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಆವರಣದಲ್ಲಿ ಏರ್ಪಡಿಸಿದ್ದ "ಸರ್ದಾರ್@150" ಎಂಬ ಸರ್ದಾರ್ ವಲ್ಲಭಾಯಿ ಪಟೇಲರ 150ನೇ ಜನ್ಮದಿನೋತ್ಸವದ ಪ್ರಯುಕ್ತ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಮಂಡ್ಯ, ಮೈ ಭಾರತ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮಂಡ್ಯ, ಎನ್‌ಎಸ್‌ಎಸ್ ಘಟಕಗಳು ಆದಿಚುಂಚನಗಿರಿ ವಿಶ್ವವಿದ್ಯಾಲಯ ಇವುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಂಡ್ಯ ಜಿಲ್ಲಾ ಮಟ್ಟದ ಪಾದಯಾತ್ರೆ ಉದ್ಘಾಟನಾ ವೇದಿಕೆಯಲ್ಲಿ ಆಶೀರ್ವಚನ ನೀಡಿದರು.

ಭಾರತದ ಮಹಾನ್ ನಾಯಕ ಹಾಗೂ ರಾಷ್ಟ್ರಪ್ರೇಮಿ ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ಉಕ್ಕಿನ ಮನುಷ್ಯ, ದೂರ ದೃಷ್ಟಿ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇವರ ಸ್ಮರಣಾರ್ಥ ಭಾರತ ಸರ್ಕಾರವು ಘೋಷಿಸಿದ 'ರಾಷ್ಟ್ರೀಯ ಏಕತಾ ದಿನ'ವನ್ನು ಆಚರಿಸಲು ಉತ್ಸುಕರಾಗಿದ್ದೇವೆ. ಈ ನಿಮಿತ್ತ ಸರ್ದಾರರ ಗೌರವಾರ್ಥ "ಜಿಲ್ಲಾಮಟ್ಟದ ಏಕತಾ ನಡಿಗೆ" ಯಶಸ್ವಿಯಾಗಲಿ, ಈ ಪಾದಯಾತ್ರೆಗೆ ಸನ್ನದ್ಧರಾಗಿ ಹಾಜರಿರುವ ಎಲ್ಲಾ ಸ್ವಯಂಸೇವಕರಿಗೂ ಅಧಿಕಾರಿ ವರ್ಗದವರಿಗೂ ಶುಭ ಹಾರೈಕೆಗಳು ಎಂದರು.

ಮಂಡ್ಯ ಜಿಲ್ಲಾ ಯುವಜನಾಧಿಕಾರಿ ಶ್ರುತಿ ಎಸ್ ಮಾತನಾಡಿ ಸರದಾರ್ ವಲ್ಲಭಭಾಯಿ ಪಟೇಲರ ಕೊಡುಗೆಗಳು ಭಾರತೀಯ ಇತಿಹಾಸದಲ್ಲಿ ಸದಾ ಸ್ಮರಣೀಯ ಪಾತ್ರವನ್ನು ವಹಿಸುತ್ತವೆ. ಗುಜರಾತ್ ನಲ್ಲಿ ಇವರ ಏಕತಾ ಪ್ರತಿಮೆಯನ್ನು ಸ್ಥಾಪಿಸಿ "ಒಂದೇ ಭಾರತ ಆತ್ಮ ನಿರ್ಭರ ಭಾರತ" ಎಂದು ಅಭಿಮಾನದ ನುಡಿಗಳನ್ನು ಘೋಷಿಸಿದೆ. ಬ್ರಿಟಿಷ್ ಭಾರತದ 500ಕ್ಕೂ ಹೆಚ್ಚು ರಾಜ ಮನೆತನದ ರಾಜ್ಯಗಳನ್ನು ಭಾರತದ ಒಕ್ಕೂಟಕ್ಕೆ ವಿಲೀನಗೊಳಿಸಿದ ಕೀರ್ತಿ ವಲ್ಲಭಭಾಯಿ ಪಟೇಲ್ ಅವರಿಗೆ ಸಲ್ಲುತ್ತದೆ ಎಂದರು.

ಇಂತಹ ಮಹಾನ್ ವ್ಯಕ್ತಿಯ 150ನೇ ಜನ್ಮ ದಿನೋತ್ಸವದ ಪ್ರಯುಕ್ತ ಜಿಲ್ಲಾ ಮಟ್ಟದ ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವುದು ಹೆಮ್ಮೆಯ ವಿಷಯ. ಇಡೀ ದೇಶ ಇಂತಹ ಸಾರ್ಥಕ ಕಾರ್ಯಕ್ರಮವನ್ನು ಸಂಘಟಿಸಿ ಗೌರವ ಸಲ್ಲಿಸುತ್ತಿದೆ ಎಂದರು.

ವಿಶ್ವವಿದ್ಯಾಲಯದ ಎನ್ ಎಸ್ ಎಸ್ ಘಟಕದ ಮುಖ್ಯ ಸಂಯೋಜನಾಧಿಕಾರಿ ಡಾ. ಎ ಟಿ ಶಿವರಾಮು ರವರು ಹಾಜರಿದ್ದ ಆಹ್ವಾನಿತರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಭವ್ಯ ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ದಿಟ್ಟ ನಿರ್ಧಾರಗಳನ್ನು ಕೈಗೊಂಡು ರಾಷ್ಟ್ರವನ್ನು ಒಗ್ಗೂಡಿಸಿದ ಮಹಾನ್ ಲೋಹಪುರುಷನೆಂದೇ ಖ್ಯಾತಿ ಪಡೆದ ಭಾರತದ ಉಕ್ಕಿದ ಮನುಷ್ಯ ಎಂದರೆ ಸರ್ದಾರ್ ವಲ್ಲಭಭಾಯಿ ಪಟೇಲರು ಎಂದು ಬಣ್ಣಿಸಿದರು.

ನಾಗಮಂಗಲ ತಾಲ್ಲೂಕಿನ ತಹಸೀಲ್ದಾರರಾದ ಆದರ್ಶ ಜಿ ಇವರು ರಾಷ್ಟ್ರೀಯ ಏಕತಾ ದಿನದ ಪ್ರತಿಜ್ಞಾವಿಧಿಯನ್ನು ಬೋಧಿಸಿ ಶುಭ ಹಾರೈಸಿದರು. ಏಕತಾ ಪಾದಯಾತ್ರೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್ ಎನ್ ಶ್ರೀಧರ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಭಾರತದ ಮಹಾನ್ ನಾಯಕ, ಕ್ವಿಟ್ ಇಂಡಿಯಾ ಚಳುವಳಿಯನ್ನು ಅತ್ಯಂತ ಪರಿಣಾಮಕಾರಿಯಾಗಿಸಲು ಶ್ರಮಿಸಿದ ಸರ್ದಾರ್ ವಲ್ಲಭಭಾಯಿ ಪಟೇಲರ ದೂರದೃಷ್ಟಿ ಮತ್ತು ಕಾರ್ಯಕ್ಷಮತೆಯು ಅಂದಿನ ಸ್ವಾತಂತ್ರ್ಯ ಸೇನಾನಿಗಳಿಗೆ ಸ್ಫೂರ್ತಿಯೊಂದಿಗೆ ಶಕ್ತಿಯನ್ನು ನೀಡಿತ್ತು. ದೇಶದ ಆಂತರಿಕ ಭದ್ರತೆಯನ್ನು ಕಾಪಾಡುವಲ್ಲಿ ತಮ್ಮ ಧೈರ್ಯ ಸಾಮರ್ಥ್ಯಗಳು ಇಡೀ ರಾಷ್ಟ್ರದ ಗಮನ ಸೆಳೆದಿದ್ದವು. ಇಂದಿನ ಯುವಕರು ಈ ಮಹಾನ್ ವ್ಯಕ್ತಿಯ ಆದರ್ಶಗಳನ್ನು, ಏಕತೆಯ ಮೌಲ್ಯಗಳನ್ನು ಬೆಳೆಸಿಕೊಂಡು ಮುನ್ನಡೆದರೆ ಪ್ರಗತಿ ಹೊಂದಿದ ರಾಷ್ಟ್ರವಾಗಿ ಭಾರತ ವಿಶ್ವಗುರು ವಾಗುವ ಕಾಲ ದೂರವಿಲ್ಲ. ಇಂದು ಆಯೋಜನೆಗೊಂಡಿರುವ ಈ ಏಕತಾ ಪಾದಯಾತ್ರೆ ಯಶಸ್ವಿಯಾಗಲಿ ಎಂದು ಹಾರೈಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕ್ರೀಡಾಂಗಣದಿಂದ ಬೆಳ್ಳೂರು ಕ್ರಾಸ್ ವರೆಗಿನ ಸುಮಾರು ಐದು ಕಿ ಮೀ. ಏಕತಾ ಪಾದಯಾತ್ರೆ ಯಶಸ್ವಿಯಾಗಿ ಸಂಪನ್ನಗೊಂಡಿತು. 1200 ಕ್ಕೂ ಹೆಚ್ಚು ಸ್ವಯಂಸೇವಕರ ಜೊತೆಯಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಯುವಜನ ಇಲಾಖೆಯ ಸಹಾಯಕ ನಿರ್ದೇಶಕರಾದ ಓಂ ಪ್ರಕಾಶ್ ಜೀ, ವಿಶ್ವವಿದ್ಯಾಲಯ ರಿಜಿಸ್ಟ್ರಾರ್ ಡಾ. ಸಿ ಕೆ ಸುಬ್ಬರಾಯ, ಪರೀಕ್ಷಾಂಗ ರಿಜಿಸ್ಟ್ರಾರ್ ಡಾ. ನಾಗರಾಜು, ಪಿ ಆರ್ ಓ ಧರ್ಮೇಂದ್ರ, ಮೈ ಭಾರತ್ ಸಂಸ್ಥೆಯ ಹರ್ಷ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಿ ಎಲ್ ಶಿವಣ್ಣ, ಕಾಂತರಾಜು ಎಸ್ ಹಾಗೂ ಇತರರು ಹಾಜರಿದ್ದರು.

# ತನು, ಮನ, ಭಾವಗಳನ್ನು ಶುದ್ದಗೊಳಿಸುವ ಮಾರ್ಗವೇ ಭಕ್ತಿ ಮಾರ್ಗ: ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ಮೈಸೂರು: ತನು, ಮನ, ಭಾವಗಳನ್ನು ಶುದ್ದಗೊಳಿಸುವ ಮಾರ್ಗವೇ ಭಕ್ತಿ ಮಾರ್ಗ ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಮೈಸೂರು ತಾಲೂಕಿನ ಜಯಪುರ ಹೋಬಳಿಯ ದೂರ ಗ್ರಾಮದಲ್ಲಿ ಶ್ರೀಶಂಭುಲಿಂಗೇಶ್ವರ ದೇವಸ್ಥಾನದ ಮಹಾದ್ವಾರ, ವಿಘ್ನೇಶ್ವರ ದೇವಸ್ಥಾನ, ನವಗ್ರಹ ದೇವಸ್ಥಾನ, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಮೂಗಪ್ಪಸ್ವಾಮಿಗಳವರ ಗದ್ದಿಗೆ ಹಾಗೂ ಶಿವಭವನದ ಉದ್ಘಾಟನೆ ಸಮಾರಂಭದ ಧರ್ಮ ಸಭೆಯಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು.

ಶಿವನ ಅವತಾರಗಳಲ್ಲಿ ಶಂಭು ಅವತಾರವು ಒಂದು. ಶಂಭು ಎಂದರೆ ಒಳ್ಳೆಯದನ್ನು ಉಂಟು ಮಾಡುವವನು. ಒಳ್ಳೆಯದನ್ನು ಮಾಡುವವನೇ ದೇವರು. ಇಂತಹ ದೇವರಿಗೆ ಹುಟ್ಟು ಸಾವು ಇಲ್ಲ. ಆದಿಯೂ ಇಲ್ಲ ಅಂತ್ಯವೂ ಇಲ್ಲ. ನಾವು ದೇವರ ಬಗ್ಗೆ ನಂಬಿಕೆ ಇಟ್ಟುಕೊಳ್ಳಬೇಕು. ನಂಬಿಕೆ ಇಲ್ಲದಿದ್ದರೆ ದೇವರು ಎನ್ನಲು ಆಗುವುದಿಲ್ಲ. ನಂಬಿ ಕರೆದರೆ ಓ ಎನ್ನನೇ ಶಿವನು ಎಂದು ಬಸವಣ್ಣನವರೇ ಹೇಳಿದ್ದಾರೆ. ಭಕ್ತಿ ಮಾರ್ಗದಿಂದ ಮಾತ್ರ ದೇವರನ್ನು ತಲುಪಲು ಸಾಧ್ಯ, ಆದರೆ ಭಕ್ತಿ ಮಾರ್ಗ ಅಷ್ಟು ಸುಲಭ ಅಲ್ಲ. ಭಕ್ತರಿಗೆ ಭಗವಂತ ಹೆಚ್ಚಿನ ಕಷ್ಟ ಕೊಡುತ್ತಾನೆ. ಕಷ್ಟಅಂತ ಭಕ್ತಿ ಕಡಿಮೆ ಮಾಡಬಾರದು. ಎಷ್ಟೇ ಕಷ್ಟ ಕೊಟ್ಟರೂ ಭಕ್ತಿ ಬಿಡಲಿಲ್ಲವಲ್ಲ ಎಂದು ಭಗವಂತನೇ ಒಲಿಯುತ್ತಾನೆ, ಹಾಗಾಗಿಯೇ ಬಸವಣ್ಣನವರು ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ ಎಂದು ಹೇಳಿದ್ದಾರೆ. ಹಳ್ಳಿ ಜನರಲ್ಲಿ ಮುಗ್ಧ, ನಿಷ್ಕಲ್ಮಶ ಭಕ್ತಿ ಇದೆ. ನಮ್ಮೊಳಗಿನ ದುಃಖ ದುಮ್ಮಾನಗಳನ್ನು ಕಡಿಮೆ ಮಾಡಿಕೊಳ್ಳುವ ಸ್ಥಳ ಅಂದರೆ ಅದು ದೇವಸ್ಥಾನ ಮಾತ್ರ. ತನು, ಮನ, ಭಾವ ಶುದ್ಧಗೊಳಿಸುವ ಮಾರ್ಗವೆಂದರೆ ಅದು ಭಕ್ತಿ ಮಾರ್ಗ ಎಂದರು.

ಕುಂದೂರು ಮಠದ ಶ್ರೀ ಶರತ್ ಚಂದ್ರ ಸ್ವಾಮೀಜಿ ಮಾತನಾಡಿ ಇತ್ತೀಚೆಗೆ ದೇವಸ್ಥಾನಗಳ ಸಂಖ್ಯೆ ಹೆಚ್ಚಾಗುತ್ತಿವೆ. ಆದರೆ ನಿಜವಾದ ಭಕ್ತರ ಸಂಖ್ಯೆ ಕಡಿಮೆ ಆಗುತ್ತಿದೆ. ಆಡಂಬರದ ಭಕ್ತಿ ಇರಬಾರದು. ಬೇರೆಯವರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ನಿಜವಾದ ಭಕ್ತಿ ಇದೆ. ಮನಷ್ಯರು ನುಡಿಯಲ್ಲಿ ಜಾಣರಾಗಿದ್ದಾರೆ, ಆದರೆ ನಡೆಯಲ್ಲಿ ಜಾಣರಾಗಿಲ್ಲ. ಅಂತರಂಗವನ್ನು ಕೊಳಕು ಮಾಡಿಕೊಂಡಿದ್ದಾರೆ. ನುಡಿ ನಡೆಯಲ್ಲೂ ನಾವು ಜಾಣರಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರಲ್ಲದೇ, ಸಮಾಜದ ಮುಖಂಡರನ್ನು ಸನ್ಮಾನಿಸಿದರು. ಸಭೆಯಲ್ಲಿ ಹುಲ್ಲಹಳ್ಳಿ ವಿರಕ್ತ ಮಠದ ಶ್ರೀ ಇಮ್ಮಡಿ ಚನ್ನಮಲ್ಲದೇಶಿಕೇಂದ್ರ ಸ್ವಾಮೀಜಿ, ಕುದೇರುಮಠದ ಶ್ರೀ ಗುರುಶಾಂತಸ್ವಾಮೀಜಿ, ಬರಡನಪುರ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿಸ್ವಾಮಿಗಳು, ದಡದಹಳ್ಳಿ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ,ಡಾ.ಷಡಕ್ಷರಿ ಸ್ವಾಮಿಗಳು, ಬಿಡಗಲು ವಿರಕ್ತಮಠದ ಶ್ರೀಮಹದೇವ ಸ್ವಾಮಿಗಳು, ವಕೀಲ, ಸಮಾಜಸೇವಕ ರಾಜಶೇಖರ್ ಮೂರ್ತಿ ಸೇರಿ ಇತರರು ಭಾಗಿಯಾಗಿದ್ದರು.




# ಕನ್ನಡ ಪತ್ರಿಕಾ ಪ್ರಪಂಚದ ಮೊಹರೆ ಹನುಮಂತರಾಯರು

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಬಹು ಪೂಜ್ಯ ಭಾವನೆಯಿಂದ ತೆಗೆದುಕೊಳ್ಳುವ ಹೆಸರು ಮೊಹರೆ ಹನುಮಂತರಾಯರದ್ದು ಏಕೆಂದರೆ ಇವರು ಸುಪ್ರಸಿದ್ಧ ಪತ್ರಿಕೋದ್ಯಮಿ, ಚಾಣಾಕ್ಷ ಸಂಪಾದಕ ಮತ್ತು ಬಹು ದೊಡ್ಡ ದೇಶ ಭಕ್ತರಾಗಿದ್ದರು. ಇವರ ಹೆಸರನ್ನು ತೆಗೆದುಕೊಳ್ಳುವಾಗ ಅತ್ಯಂತ ಭಕ್ತಿ ಮತ್ತು ಪೂಜ್ಯ ಭಾವನೆಯಿಂದ ಮನದಲ್ಲಿ ಮೂಡುತ್ತದೆ.

ಮೊಹರೆ ಹನುಮಂತರಾಯರ ಜನನ ದೇವರ ಹಿಪ್ಪರಗಿಯ ರಾಘಣ್ಣ ನಾಯಕ ಮತ್ತು ಲಕ್ಷ್ಮೀ ಬಾಯಿಯವರ ಕೊನೆಯ ಪುತ್ರರಾಗಿ 1892ನೇ ಇಸವಿಯ ನವೆಂಬರ್ ತಿಂಗಳ13ನೇ ತಾರೀಖಿನಂದು ನಂದನ ನಾಮ ಸಂವತ್ಸರದ ಆಶ್ವೀಜ ಕೃಷ್ಣ ದ್ವಾದಶಿಯಂದು ಹನುಮಂತರಾಯರು ಜನಿಸಿದರು, ಇವರು ಬಹಳ ಸಣ್ಣವರು ಇದ್ದಾಗಲೇ ಇವರ ತಾಯಿ ತೀ೦ಕೊಂಡ ಕಾರಣ ಇವರ ಅಜ್ಜಿ ಮತ್ತು ತಂದೆಯವರು ಬಹಳ ಪರಿಶ್ರಮವಹಿಸಿ ಸಾಕಿದರು. ಹನುಂತ ರಾಯರು ಅತೀ ಸಣ್ಣ ವಯಸ್ಸಿನಲ್ಲೇ ಬಹಳ ಚುರುಕಿನ ಹುಡುಗನಾಗಿದ್ದರು. 6ನೇ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣ ದೇವರ ಹಿಪ್ಪರಗಿಯಲ್ಲಿಯೇ ಆಯಿತು. ಮುಂಧೆ ಹೈ ಸ್ಕೂಲ್ ವಿದ್ಯಾಭ್ಯಾಸವನ್ನು ಬಾಗಲಕೋಟೆ ಮತ್ತು ವಿಜಯಪುರಗಳಲ್ಲಿ ನಡೆಸಿ ಬೆಳಗಾವಿ ಕೇಂದ್ರಗಳಲ್ಲಿ ವಿದ್ಯಾಭ್ಯಾಸ ತಮ್ಮ ನಡೆಸಿ ಕ್ರಿ.ಶ 1013ರಲ್ಲಿ ಮೆಟ್ರಿಕ್ಯೂಲೇಷನ್ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು. ಮುಂದೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸ್ಯಎಇದಾಗ ಅನೇಕ ಹಿರಿಯ ರಾಜಕಾರಣಿಗಳು ವಿದ್ವಾಂಸರು ಲೇಖಕರ ಸಂಪರ್ಕಕ್ಕೆ ಬಂದರು. ಆಲೂರು ವೆಂಕಟರಾವ್, ಆಲಬಾಳ ರುಕ್ಮಾಂಗದ ರಾವ್ ದೇಶಪಾಂಡೆ, ಪ್ರಾಣೇಶ ಭಟ್ಟ ಸಿದ್ಧಾಂತಿ, ನರಸಿಂಹಾಚಾರ್ಯ ಜಹಗೀರದಾರ ಸಿರಗೂರ, ಕೆ.ಡಿ ಉಮರಾಣಿ, ವೆಂಕಟ ರಾವ್ ಬೆಳವಿ, ಬಳವಂತ ರಾವ್ ದಾತಾರ, ತಮ್ಮಣ್ಣಾಚಾರ್ಯ ಪುರೋಹಿತ ?ವರುಗಳ ವಿಶೇಷ ಒಡನಾಟ ದೊರೆಯಿತು. ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾತಂತ್ರ್ಯ ಹೋರಾಟದ ಬೆನ್ನು ಹತ್ತಿದ ಹನುಮಂತರಾಯರಿಗೆ 1933ರಲ್ಲಿ ಜೈಲುವಾಸದಿಂದ ಬಿಡುಗಡೆ ಹೊಂದಿ ಹೊರ ಬಂದಾಗ ಅವರ ಮಿತ್ರರಾದ ಬೆಳಗಾವಿಯ ಶ್ರೀ ದಾತಾರ ಬಳವಂತರಾಯರ ಪ್ರೇರಣೆ ಹಾಗೂ ಒತ್ತಾಸೆಗೆ ಪತ್ರಿಕೋದ್ಯಮ ಪ್ರಪಂಚಕ್ಕೆ ಪದಾರ್ಪಣೆ ಮಾಡಿದರು. ಇವರಿಗೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಗುರುತರವಾದ ಜವಾಬ್ದಾರಿಯನ್ನು ನೀಡಿದರು.

12.10.1929ರಲ್ಲಿ ಬೆಳಗಾವಿಯಲ್ಲಿ ಆರಂಭವಾಗಿದ್ದ ಸಂಯುಕ್ತ ಕರ್ನಾಟಕವು ಮುಂದೆ 1933ರ ಏಪ್ರಿಲ್ 27ರಂದು ಪರಿವರ್ತನೆಗೊಂಡಿತು.. ಈ ಪತ್ರಿಕೆಯನ್ನು ಮುನ್ನಡೆಸಲು ಅಂದಿನ ಕರ್ನಾಟಕ ವೈಭವ ಪತ್ರಿಕೆಯನ್ನು ವಿಜಯಪುರದಲ್ಲಿ ನಡೆಸುತ್ತಿದ್ದ ಮೊಹರೆ ಹನುಮಂತರಾಯರು ಸೂಕ್ತವೆನಿಸಿ ಅವರನ್ನು ಕರೆದು ಮಾತನಾಡಿದರು. ಆಗ ತಾವು ಹತ್ತು ವರ್ಷಗಳ ಕಾಲ ಕಟ್ಟಿದ ಪತ್ರಿಕೆ ಮತ್ತು ಕಾಂಗ್ರೆಸ್ ಮುಖಂಡತ್ವದ



ಜವಾಬ್ದಾರಿಯಿಂದ ಮುಕ್ತರಾಗಿ ಕ್ರಿ.ಶ 1934ರ ಜನವರಿಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಸೇರಿದರು. ಅವರು ಅಲ್ಲಿ ಸೇರಿದಾಗ ಪತ್ರಿಕೆಯ 700 ಪ್ರತಿಗಳು ಮಾತ್ರ ಹೊರಡುತ್ತಿದ್ದವು.. ಫೆಬ್ರವರಿ ತಿಂಗಳಿನಲ್ಲಿ ಪತ್ರಿಕೆಗೆ ಪೂರ್ಣ ಪ್ರಮಾಣದ ಪ್ರಧಾನ ಸಂಪಾದಕರಾಗಿ ಜವಾಬ್ದಾರಿಯನ್ನು ತೆಗೆದುಕೊಂಡರು

ಮೊಹರೆಯವರು ಸದಾಕಾಲ ಪತ್ರಿಕಾ ಸಿಬ್ಬಂದಿಗಳ ಹಿತಾಕಾಂಕ್ಷಿಯಾಗಿದ್ದರು. ಅವರ ತೊಂದರೆ ಸಮಸ್ಯೆಗಳನ್ನು ಕಿವಿಕೊಟ್ಟು ಕೇಳಿ ಅದರ ಪರಿಹಾರವನ್ನು ನೀಡುತ್ತಿದ್ದರು. ಕಾಲಕಾಲಕ್ಕೆ ಅವರ ವೇತನವನ್ನು ಅವರ ಶ್ರಮವನ್ನು ಪರಿಶೀಲಿಸಿ ಅವರ ಕೆಲಸಕ್ಕೆ ತಕ್ಕ ಆರ್ಥಿಕ ನೆರವನ್ನು ನೀಡುತ್ತಿದ್ದರು. ಕಾಳಜಿ ಮತ್ತು ಅನುಭೂತಿಯ ಜೊತೆಗೆ ಶಿಸ್ತುಬದ್ಧ ಮತ್ತು ಪ್ರಾಮಾಣಿಕತೆಗೆ ಮಾತ್ರ ಅವರ ಬೆಂಬಲವಿರುತ್ತತ್ತು ಆದರೆ ಯಾವುದೇ ಕೆಲಸಗಾರ ಅಪ್ರಮಾಣಿಕ ಮತ್ತೂ ಅಶಿಸ್ತಿನಿಂದ ವರ್ತಿಸಿದರೆ ಆ ಕೆಲಸಗಾರನ ವರ್ತನೆಯನ್ನು ಎಂದೂ ಸಹಿಸುತ್ತಿರಲಿಲ್ಲ ತಕ್ಕ ಶಿಕ್ಷೆ ವಿಧಿಸಿ ಅಂಥವರನ್ನು ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ವಜಾಗೊಳಿಸುತ್ತಿದ್ದರು. ಹೀಗೆ ಮಾಡುವುದರ ಮೂಲಕ ಪತ್ರಿಕೆಗೆ ಆಗಬಹುದಾದ ಎಲ್ಲ ಹಾನಿಗಳನ್ನೂ ತಪ್ಪಿಸುತ್ತಿದ್ದರು. ಮೊಹರೆಯವರ ಕಾಲದಲ್ಲಿ ಸಂಯುಕ್ತ ಕರ್ನಾಟಕಕ್ಕೆ ತನ್ನದೇ ಆದ ಅನೇಕ ಶಿಸ್ತುಬದ್ಧವಾದ ಅಲಿಖಿತ ನಿಬಂಧನೆಗಳಿದ್ದವು. “ ನಮ್ಮ ಪತ್ರಿಕೆಯಲ್ಲಿ ನಮ್ಮದೇ ಸುದ್ದಿ ಹಾಕುವಂತಿಲ್ಲ. ನಮ್ಮನ್ನೇ ನಾವು ಹೊಗಳಿಕೊಳ್ಳುವಂತಿಲ್ಲ? ಇದು ಮೊಹರೆಯವರು ರೂಢಿಯಲ್ಲಿ ತಂದ ನಿಬಂಧನೆಗಳಲ್ಲಿ ಒಂದಾಗಿತ್ತು.

ಮೊಹರೆಯವರು ಸ್ವಾತಂತ್ರ್ಯ ನಂತರದ ಸಮಸ್ಯೆಗಳನ್ನು ತಮ್ಮ ಪತ್ರಿಕೆಯ ಮೂಲಕ ಗಮನ ಸೇಳೆದರು. ರಾಜ್ಯಗಳ ಏಕೀಕರಣದ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿದರು. ಮೊದಲಿಗೆ ಬೆಳಗಾವಿಯಲ್ಲಿದ್ದ ಮೊದಲಿಗೆ ಹುಬ್ಬಳ್ಳಿಗೆ ಬಂದಿತು ನಂತರ ಬೆಂಗಳೂರಿಗೆ ಬದಲಾವಣೆಯಾಗಿತ್ತು. ಪರ್ಯಾಯ ವ್ಯವಸ್ಥೆಯನ್ನು ಮಾಡಲು ತಮ್ಮ ಜಾಣತನವನ್ನು ತೋರಿಸಿದರು

ದಿನಪತ್ರಿಕೆ ಸಂಯುಕ್ತ ಕರ್ನಾಟಕ ಮತ್ತು ವಾರ ಪತ್ರಿಕೆ ಕರ್ಮವೀರ ಜೊತೆ ಒಂದು ಮಾಸ ಪತ್ರಿಕೆಯೊಂದನ್ನು ಆರಂಭಿಸಬೇಕೆಂದು ಶ್ರೀ ದಿವಾಕರರ ಜೊತೆ ಮೊಹರೆಯವರೂ ಬಹಳ ದಿನಗಳಿಂದ ಯೋಜನೆ ಮಾಡಿದರು. ಅವರ ಈ ದೀರ್ಘ ವಿಚಾರ ವಿನಿಮಯದ ನಂತರ ಫಲ ಸ್ವರೂಪವಾಗಿ ಕ್ರಿ.ಶ 1956 ಸಪ್ಟೆಂಬರದಲ್ಲಿ 'ಕಸ್ತೂರಿ ಎಂಬ ಸಂಕಲನ ಮಾಸಪತ್ರಿಕೆ ಆರಂಭವಾಯಿತು. ಹೀಗೆ ಲೋಕ ಶಿಕ್ಷಣ ಟ್ರಸ್ಟ್ ನ ಅಡಿಯಲ್ಲಿ ನಿರಂತರವಾಗಿ ದಿನ, ವಾರ ಮಾಸ ಪತ್ರಿಕೆಗಳು ನಿರಂತರವಾಗಿ ಪ್ರಕಟಗೊಳ್ಳುತ್ತಿವೆ. ಇದರ ಯಶಸ್ಸು ಶ್ರೀ ಹನುಮಂತರಾಯರಿಗೇ ಸೇರಿದ್ದು. ದಿನಪತ್ರಿಕೆ, ವಾರ ಪತ್ರಿಕೆ ಮತ್ತೂ ಮಾಸ ಪತ್ರಿಕೆಗಳನ್ನು ಯಶಸ್ವಿ ಮಾಡಿದ್ದಲ್ಲದೇ ಜಾಬ್ ಮುದ್ರಣ ಭಾಗವನ್ನು ಬೆಳೆಸಲೂ ಬಹಳ ಪರಿಶ್ರಮ ಪಟ್ಟರು. ಇದು ಶ್ರೀ ಅವರ ಮತ್ತೊಂದು ಮಹತ್ತರ ಸಾಧನೆಯೆಂದರೆ ತಪ್ಪಾಗಲಾರದು.

ಕ್ರಿ.ಶ 1958ರರಲ್ಲಿ ಹನುಮಂತರಾವ ಮೊಹರೆಯವರ ಆರೋಗ್ಯ ಕ್ಷೀಣಿಸುತ್ತಲೇ ಇತ್ತು. ಇಷ್ಟು ದೊಡ್ಡ ಪತ್ರಿಕೆಯ ಜವಾಬ್ದಾರಿ ಹೊತ್ತು ನಡೆಸುವುದು ಅವರಿಗೆ ಆರೋಗ್ಯ ಚೆನ್ನಾಗಿ ಇದ್ದಾಗಿನಷ್ಟು ಸರಳವಾಗಿರಲಿಲ್ಲ. ಆದ್ದರಿಂದ ಅವರು ದೃಢನಿರ್ಧಾರಮಾಡಿ, 1958ರ ನವೆಂಬರ್ ನಲ್ಲಿ ಅವರು ಪತ್ರಿಕೆಯ ವ್ಯವಸ್ಥಾಪಕ ಸಂಪಾದಕತ್ವದ ದೊಡ್ಡ ಜವಾಬ್ದಾರಿಯನ್ನು ಬಿಟ್ಟು ಕೊಟ್ಟು ಸೇವಾ ನಿವೃತ್ತರಾದರು. ಆದರೂ ಲೋಕಶಿಕ್ಷಣ ಸಂಸ್ಥೆಗೆ ಅವರನ್ನು ಬಿಟ್ಟುಕೊಡುವ ಮನಸ್ಸಿರಲಿಲ್ಲ. ಕಾರಣ ಅವರು ಕೊನೆಯನಕವೂ ಲೋಕಶಿಕ್ಷಣ ಸಂಸ್ಥೆಯ ಸಲಹೆಗಾರ ಮಂಡಳಿಯ ಸದಸ್ಯರಾಗಿ ತಮ್ಮ ಅಮೂಲ್ಯ ಸಲಹೆಗಳನ್ನು ಧರ್ಮದರ್ಶಿಗಳಿಗೆ ಕೊಡುತ್ತಲೇ ಇದ್ದರು.

ಮೊಹರೆಯವರು ವೃತ್ತ ಪತ್ರಿಕೆಯ ಸಂಸ್ಥೆಯ ಸದಸ್ಯರಾಗಿ ಪತ್ರಿಕೆಯನ್ನು ನಡೆಸುವವರನ್ನು ಸಂಘಟಿತಗೊಳಿಸಿ ಆ ಸಂಸ್ಥೆಯನ್ನು ಕಟ್ಟುವಲ್ಲಿ ಮಹತ್ತರವಾದ ಪಾತ್ರ ವಹಿಸಿದರು. ಕೇವಲ ಪತ್ರಕರ್ತರಾಗಿ ಆಲೋಚಿಸದೇ ಸಮಗ್ರ ಕ್ಷೇತ್ರದ ಅಭಿವೃದ್ಧಿ ಕಾರ್ಯಕಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಭಾರತ ಸರಕಾರದ ಆಯಾತ ನಿರ್ಯಾತ ಸಲಹಾ ಸಮಿತಿಯ ಸದಸ್ಯರಾಗಿದ್ದು ಆ ಸಮಯದಲ್ಲಿ ಕರ್ನಾಟಕದ ಆಯಾತಗಾರರ ಸಮಸ್ಯೆಗಳು ತೊಂದರೆಗಳನ್ನು ಪರಿಹರಿಸಿದ್ದರು. ಬ್ಯಾಂಕಿಂಗ್ ಕ್ಷೇತ್ರಕ್ಕೂ ಇವರ ಕೊಡುಗೆ ಸ್ಮರಣೀಯವಾಗಿದೆ ಬ್ಯಾಂಕ್ ಆಫ್ ಕರ್ನಾಟಕ ಸ್ಥಾಪಿಸುವಲ್ಲಿ ಶ್ರಮ ವಹಿಸಿ ಮುಂದೆ ಅದು ಕರ್ನಾಟಕ ಬ್ಯಾಂಕ್‌ನಲ್ಲಿ ವಿಲೀನವಾಯಿತು.

ತಮ್ಮ ವಿದ್ಯಾಭ್ಯಾಸದ ಸಮಯದಲ್ಲಿ ಉನ್ನತ ಶಿಕ್ಷಣಕ್ಕೆ ಮಹಾರಾಷ್ಟ್ರ, ತಮಿಳುನಾಡು ಮುಂತಾದ ಕಡೆಗೆ ಹೋಗಬೇಕಾಗಿದ್ದ ಕಾರಣ ಅದರ ವಿಚಾರವಾಗಿ ಶ್ರಮವಹಿಸಿ ಧಾರವಾಡದಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯವು ಸ್ಥಾಪನೆಯಾಗಲು ಶ್ರಮವಹಿಸಿದರು.

1960 ರ ಜುಲೈ 27 ರಂದು ಹಿಂದೂ ದಿನವಹಿಯ ಪ್ರಕಾರ ಶ್ರಾವಣ ಶುದ್ಧ ಚತುರ್ಥಿಯ ದಿನ ಶ್ರೀ ಹನುಮಂತ ಮೊಹರೆಯವರು ಇಹಲೋಕ ತ್ಯಜಿಸಿದರು.



ಮಾಧುರಿ ದೇಶಪಾಂಡೆ

# ಕನ್ನಡ ಮಾಧ್ಯಮಗಳ ಶಾಲೆಯ ಪರಿಸ್ಥಿತಿ

ಮಾತೃಭಾಷೆಯು ಮನುಷ್ಯನ ಭಾವನೆಗಳ ಪ್ರತಿಭೆಯ ಅಭಿವ್ಯಕ್ತಿಗೆ ಬಹಳ ಅವಶ್ಯಕ ಮಾತ್ರ ಭಾಷೆಯಲ್ಲಿ ಕಲಿತ ವಿದ್ಯಾರ್ಥಿ ವ್ಯಕ್ತಿ ಅತ್ಯಂತ ಉನ್ನತವಾದ ಉದ್ಯೋಗ ಸ್ಥಾನವನ್ನು ಪಡೆದ ಉದಾಹರಣೆಗಳು ಬಹಳಷ್ಟಿದೆ. ಕರ್ನಾಟಕದಲ್ಲಿ ಈಗ ಮಾತೃ ಭಾಷೆಯ ಶಿಕ್ಷಣ ಸಾಕಷ್ಟು ಸಮಸ್ಯೆಯನ್ನು ಎದುರಿಸುತ್ತಿದೆ. ಮೊದಲೆಲ್ಲಾ ಕನ್ನಡ ಮಾಧ್ಯಮ ಶಾಲೆಗಳು ಉತ್ತಮವಾಗಿ ನಡೆಯುತ್ತಿದ್ದವು. ಆಂಗ್ಲ ಭಾಷೆಯ ಜೊತೆಗೆ ಕನ್ನಡ ಮಾಧ್ಯಮದಲ್ಲಿ ಕೂಡ ಒಂದು ತರಗತಿ ಇಡುತ್ತಿದ್ದರು. ಈಗ ಕೇವಲ ಸರಕಾರಿ ಶಾಲೆಗಳಲ್ಲಿ ಮಾತ್ರ ಕನ್ನಡ ಮಾಧ್ಯಮ ಎಂಬ ಹಂತಕ್ಕೆ ಬಂದು ನಿಂತಿದೆ. ಕನ್ನಡ ಮಾಧ್ಯಮವಿರಲಿ ಕನ್ನಡ ಮೊದಲ ಭಾಷೆ ಕೂಡ ಕಷ್ಟವೇನೋ ಅನ್ನುವ ಕಾಲ ಬಂದರೂ ಆಶ್ಚರ್ಯ ಪಡಬೇಕಿಲ್ಲ.

ಇದಕ್ಕೆ ಹಲವು ಕಾರಣಗಳಿವೆ. ಸ್ಪರ್ಧಾತ್ಮಕ ಈ ಯುಗದಲ್ಲಿ ಎಷ್ಟೇ ಬಡವ ಇರಲಿ, ಕನ್ನಡದ ಅಭಿಮಾನಿ ಇರಲಿ ಮಕ್ಕಳ ಭವಿಷ್ಯಕ್ಕಾಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿಯೇ ದಾಖಲಾತಿ ಮಾಡಿಸುತ್ತಾನೆ. ಇನ್ನು ಸರಕಾರವೂ ಕೂಡ ಸರಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದ ಆರಂಭಮಾಡಿ ತನ್ನತ್ತ ಸೆಳೆಯುವ ಕೆಲಸಕ್ಕೆ ಕೈ ಹಾಕಿದೆ . ಆದರೂ ಕೆಲವು ಶಾಲೆಗಳು ಉತ್ತಮವಾಗಿ ಕನ್ನಡ ಮಾಧ್ಯಮದಲ್ಲಿ ಇಂದಿಗೂ ಕಲಿಸುತ್ತಲಿರುವುದು ಭಾಷೆಯ ಉಳಿವು ಬೆಳವಣಿಗೆಗಾಗಿ ಮಹತ್ವದ ಕಾರ್ಯವನ್ನು ಮಾಡುತ್ತಲಿವೆ.

ಕೇಂದ್ರ ಸರಕಾರ ಸ್ಥಾನೀಯ ಭಾಷೆಗಳಲ್ಲಿ ಎಲ್ಲ ರೀತಿಯ ತಾಂತ್ರಿಕ ಮತ್ತು ವೃತ್ತಿಪರ ತರಬೇತಿಗಳನ್ನು ನಡೆಸಲು ಪಠ್ಯಗಳನ್ನು ಅನುವಾದ ಮಾಡಿಸಿ ಒಂದು ಹೆಜ್ಜೆ ಮುಂದೆ ಇಟ್ಟು ಕರ್ಮಗಳನ್ನು ಕೈಗೊಂಡಿದ್ದಾರೆ. ಡಿಪ್ಲೋಮಾ ಕೋರ್ಸುಗಳನ್ನು ಕೂಡ ಕನ್ನಡದಲ್ಲಿ ಪಾಠ ಮಾಡುವ ಪ್ರಯತ್ನಗಳು ನಡೆದಿವೆ. ಐಎಎಸ್ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆದಿರುವ ಉದಾಹರಣೆಗಳೂ ಇವೆ.

ಪ್ರಗತಿ ಸಾಕಷ್ಟು ಮಟ್ಟದಲ್ಲಿದ್ದರೂ ಕನ್ನಡ ಮಾಧ್ಯಮ ಶಾಲೆಗಳ ಪರಿಸ್ಥಿತಿ ಉತ್ತಮವಾಗಿ ಇಲ್ಲದೇ ಇರುವುದು ವಿಷಾದನೀಯ. ಇಂದಿನ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ ಕಷ್ಟದಲ್ಲಿರುವವರು ಮಾತ್ರ ಕನ್ನಡ ಮಾಧ್ಯಮದಲ್ಲಿ ಅದರಲ್ಲೂ ಸರಕಾರಿ ಶಾಲೆಯಲ್ಲಿ ಓದಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಓದುವವರು ಮಾತ್ರ ಕನ್ನಡ ಮಾಧ್ಯಮ ಎಂಬ ವಿಚಾರಧಾರೆಯಿಂದ ಹೊರಬರ ಬೇಕಾದ ಪರಿಸ್ಥಿತಿ ಒದಗಿ ಬಂದಿದೆ.

ಕನ್ನಡ ಭಾಷೆಯ ಶಾಲೆಗಳು ಮುಚ್ಚುತ್ತಲಿರುವುದು ಕೂಡ ವಿಷಾದನೀಯ, ಮುಖ್ಯವಾಗಿ ಕನ್ನಡ ಕಲಿಯುವ್‌ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ಪಾಠ ಮಾಡುವ ಅಧ್ಯಾಪಕರು ಸಿಗುವುದು ಕೂಡ ಕಠಿಣವಾಗಿದೆ. ಗಡಿನಾಡಿನಲ್ಲಿ ಕನ್ನಡ ಉಳಿಸಲು ಕನ್ನಡ ಶಾಲೆಯಲ್ಲಿ ಕನ್ನಡ ಕಲಿಕೆಯ ಸಲುವಾಗಿ ಸ್ಥಳೀಯ ಕನ್ನಡ ಪ್ರೇಮಿಗಳು ನಾಯಕರು ಶ್ರಮಿಸುತ್ತಾರೆ. ಆದರೆ ಯಾವುದೇ ಸ್ಥಳದಲ್ಲಿ ಸಾಮಾನ್ಯ ಜನರ ಶ್ರಮಕ್ಕಿಂತ ಅಧಿಕಾರದಲ್ಲಿರುವವರ ಆಡಳಿತ ನಡೆಸುವವರ ಸಹಕಾರ ಮಹತ್ವವನ್ನು ಪಡೆಯುತ್ತದೆ. ಸಿಬ್ಬಂದಿಗಳ ಕೊರತೆಯಿಂದ ಸರಕಾರಿ ಶಾಲೆಗಳು ಶಾಲೆಗಳನ್ನು ಮುಚ್ಚುತ್ತಿರುವುದನ್ನು ತಡೆಯಲು ಕನ್ನಡ ಕಲಿತ ಕಲಿಸುವ ಅಧ್ಯಾಪಕರಿಗೆ ಕನ್ನಡ ಪೋಷಣೆಯ ಸಲುವಾಗಿ ವಿಶೇಷ ಸೌಲಭ್ಯವನ್ನು ಕಲ್ಪಿಸಬೇಕು. ಇನ್ನು ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಉದ್ಯೋಗದಲ್ಲಿ ಇನ್ನು ಹೆಚ್ಚಿನ ಅವಶಕಾಧಶಗಳನ್ನು ನೀಡಿದರೆ ಅವರ ಕಲಿಸುವ ಆಸಕ್ತಿಯ ಜೊತೆಗೆ ಉದ್ಯೋಗ ದೊರೆಯಲು ಸಮಸ್ಯೆಗಳನ್ನು ಎದುರಿಸಬೇಕಾಗುವುದಿಲ್ಲವೆಂಬ ಭರವಸೆಯನ್ನು ಕೂಡ ಕೊಡಬಹುದಾಗಿದೆ.

ಪ್ರಜೆಗಳು ಮತ್ತು ಆಡಳಿತವರ್ಗದ ಸಹಯೋಗದಿಂದ ಕನ್ನಡ ಉಳಿಸಲು ಕನ್ನ ಭಾಷಾ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳಿಗೆ ಕಲಿಸುವ ಅಧ್ಯಾಪಕರಿಗೆ ಸಹಕಾರ ನೀಡಿ ಕನ್ನಡ ಉಳಿಸಿ ಬೆಳೆಸುವ ಪ್ರಯತ್ನ ನಡೆಸಬೇಕು.



ಕಿರಣ ಜೋಶಿ, ಬೆಂಗಳೂರು.



# ತಲಕಾಡುಗೊಂಡ ಕಲಾರಾಧಕ, ಬಿಟ್ಟಿದೇವ!?

**ಕಲ್ಲಾದರೆ ನಾನು**
**ಬೇಲೂರಿನ ಗುಡಿಯಲಿ ಇರುವೆ**
**ಮಣ್ಣಾದರೆ ನಾನು**
**ಕೋಲಾರದ ಮಣ್ಣಲಿ ಬೆರೆವೆ**
**ಮರವಾದರೆ ನಾನು**
**ಚಾಮುಂಡಿಗೆ ನೆರಳಾಗಿರುವೆ**
**ಮಗುವಾದರೆ ನಾನು**
**ಕಾವೇರಿಯ ಮಡಿಲಲಿ ನಗುವ**
**ಕಲ್ಲಾದರೆ ನಾನು**
**ಬೇಲೂರಿನ ಗುಡಿಯಲಿ ಇರುವೆ**
**ಮಣ್ಣಾದರೆ ನಾನು**
**ಕೋಲಾರದ ಮಣ್ಣಲಿ ಬೆರೆವೆ**
**ಮರವಾದರೆ ನಾನು**
**ಚಾಮುಂಡಿಗೆ ನೆರಳಾಗಿರುವೆ**
**ಮಗುವಾದರೆ ನಾನು**
**ಕಾವೇರಿಯ ಮಡಿಲಲಿ ನಗುವೆ**

ಹೊಯ್ಸಳ ಸಾಮ್ರಾಜ್ಯದ ಅತ್ಯಂತ ಪ್ರಖ್ಯಾತ ಅರಸ ಮತ್ತು ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿದ ಮಹಾರಾಜ ವಿಷ್ಣುವರ್ಧನನ (ಆಡಳಿತ: ಕ್ರಿ.ಶ. 1108?1152) ಕುರಿತು ನೀವು ಕೇಳಿದಂತೆ ಸಮಗ್ರವಾದ ಮತ್ತು ರೋಚಕವಾದ ವಿವರಗಳನ್ನು ಇಲ್ಲಿ ನೀಡಲಾಗಿದೆ. ಇವನು ಕೇವಲ ರಾಜನಾಗಿರದೆ, ಶೂರ ಸೇನಾನಿ, ಮಹಾನ್ ಕಲಾಭಿಮಾನಿ ಮತ್ತು ಧಾರ್ಮಿಕ ಪರಿವರ್ತಕನೂ ಆಗಿದ್ದನು.

### ■ ವಿಷ್ಣುವರ್ಧನನ ಪೂರ್ವಾರ್ಧ: ರಾಜಕೀಯ ಹಿನ್ನೆಲೆ ಮತ್ತು ಪರಿವರ್ತನೆ

ವಿಷ್ಣುವರ್ಧನನ ಆರಂಭಿಕ ಹೆಸರು ಬಿಟ್ಟಿದೇವ ಅಥವಾ ಬಿಟ್ಟಿಗ. ಇವನು ಸಿಂಹಾಸನ ಏರಿದಾಗ ಹೊಯ್ಸಳರು ಕಲ್ಯಾಣದ ಚಾಲುಕ್ಯರ ಪ್ರಬಲ ಸಾಮಂತರಾಗಿದ್ದರು.

ಕನ್ನಡದ ರಾಜ-ಮಾಹಾರಾಜರು

ಹೊಯ್ಸಳರ ಸ್ಥಿತಿ ಮತ್ತು ಆರಂಭಿಕ ಆಡಳಿತ:

* ಸಾಮಂತನ ಸ್ಥಾನಮಾನ: ವಿಷ್ಣುವರ್ಧನನು ಸಿಂಹಾಸನ ಏರಿದಾಗ, ಅವನ ಅರಸ ಆರನೆಯ ವಿಕ್ರಮಾದಿತ್ಯನ (ಕಲ್ಯಾಣ ಚಾಲುಕ್ಯ) ಅಧೀನನಾಗಿದ್ದನು. ಆ ಅವಧಿಯಲ್ಲಿ ಹೊಯ್ಸಳರು ಮಲೆನಾಡು (ಗಂಗವಾಡಿ) ಪ್ರದೇಶದಲ್ಲಿ ಮಾತ್ರ ಬಲ ಹೊಂದಿದ್ದರು.

* ವಿಕ್ರಮಾದಿತ್ಯನ ಸೇನಾನಿ: ಬಿಟ್ಟಿದೇವನು ಆರಂಭದಲ್ಲಿ ಚಾಲುಕ್ಯರ ಸೇನೆಯಲ್ಲಿ ಮಹಾ ದಂಡನಾಯಕನಾಗಿ ಸೇವೆ ಸಲ್ಲಿಸಿ, ತನ್ನ ಮಿಲಿಟರಿ ಸಾಮರ್ಥ್ಯವನ್ನು ಸಾಬೀತುಪಡಿಸಿದನು.

* ಸ್ವತಂತ್ರ ಸಾಮ್ರಾಜ್ಯದ ಕನಸು: ಚಾಲುಕ್ಯರ ಪ್ರಾಬಲ್ಯ ಕುಗ್ಗುತ್ತಿದ್ದಂತೆ, ಬಿಟ್ಟಿದೇವನು ಸ್ವತಂತ್ರ ರಾಜ್ಯದ ಕನಸು ಕಂಡನು.

ವೀರತ್ವದಿಂದ ವಿಜಯದೆಡೆಗೆ:

* ಚೋಳರ ವಿರುದ್ಧ ಯುದ್ಧ: ಹೊಯ್ಸಳರ ಇತಿಹಾಸದ ಮಹತ್ವದ ತಿರುವು ಸಿಕ್ಕಿದ್ದು ಚೋಳರ ವಿರುದ್ಧದ ಯುದ್ಧದಿಂದ. ಬಿಟ್ಟಿದೇವನು ಚೋಳರ ಕರಾವಳಿ ಪ್ರದೇಶಗಳಾದ ಗಂಗವಾಡಿ 96000 ಮತ್ತು ನುಗಲಿಯ ಮೇಲೆ ಸತತ ದಾಳಿಗಳನ್ನು ನಡೆಸಿದನು.


* ತಲಕಾಡು ವಿಜಯ (ಕ್ರಿ.ಶ. 1116): ಹೊಯ್ಸಳರ ಪಾಲಿಗೆ ಇದು ಐತಿಹಾಸಿಕ ವಿಜಯ. ಮೈಸೂರು ಪ್ರದೇಶವನ್ನು ಆಳುತ್ತಿದ್ದ ಚೋಳರ ರಾಜಪ್ರತಿನಿಧಿಗಳ ಮೇಲೆ ಮಹಾ ವಿಜಯ ಸಾಧಿಸಿ, ಚೋಳರನ್ನು ಈ ಪ್ರದೇಶದಿಂದ ಶಾಶ್ವತವಾಗಿ ಹೊರಹಾಕಿದನು. ಈ ವಿಜಯದ ನಂತರ, ಇವನು 'ತಲಕಾಡುಗೊಂಡ' (ತಲಕಾಡನ್ನು ಗೆದ್ದವನು) ಎಂಬ ವಿಶಿಷ್ಟ ಬಿರುದನ್ನು ಪಡೆದನು. ಈ ವಿಜಯವು ಹೊಯ್ಸಳರಿಗೆ ಕಾವೇರಿ ಕಣಿವೆ ಪ್ರದೇಶದ ಮೇಲೆ ಹಿಡಿತ ನೀಡಿತು ಮತ್ತು ಹೊಯ್ಸಳರನ್ನು ಸ್ವತಂತ್ರ ರಾಜರನ್ನಾಗಿ ಬೆಳೆಯಲು ಪ್ರೇರಣೆ ನೀಡಿತು.

### ■ ಧಾರ್ಮಿಕ ಪರಿವರ್ತನೆ ಮತ್ತು ಧಾರ್ಮಿಕ ಕೊಡುಗೆ

ವಿಷ್ಣುವರ್ಧನನ ವೈಯಕ್ತಿಕ ಜೀವನದ ಪ್ರಮುಖ ಘಟನೆ ಇವನ ಧರ್ಮ ಪರಿವರ್ತನೆ. ಈ ಘಟನೆಯು ಆತನ ಆಳ್ವಿಕೆ ಮತ್ತು ದಕ್ಷಿಣ ಭಾರತದ ಧಾರ್ಮಿಕ ಇತಿಹಾಸದ ಮೇಲೆ ಅಗಾಧ ಪರಿಣಾಮ ಬೀರಿತು.

ಧಾರ್ಮಿಕ ರೂಪಾಂತರ:

* ಜೈನ ಧರ್ಮದಿಂದ ವೈಷ್ಣವ ಧರ್ಮಕ್ಕೆ: ವಿಷ್ಣುವರ್ಧನನು ಆರಂಭದಲ್ಲಿ ಜೈನ ಧರ್ಮದ ಅನುಯಾಯಿಯಾಗಿದ್ದನು. ಆದರೆ, ಪ್ರಸಿದ್ಧ ವೈಷ್ಣವ ಸಂತ ಮತ್ತು ತಾತ್ವಿಕರಾದ ಶ್ರೀ ರಾಮಾನುಜಾಚಾರ್ಯರ ಪ್ರಭಾವದಿಂದ ಇವನು ವೈಷ್ಣವ ಧರ್ಮಕ್ಕೆ ಮತಾಂತರಗೊಂಡನು. ಈ ಮತಾಂತರದ ನಂತರವೇ ಇವನು 'ಬಿಟ್ಟಿದೇವ' ಎಂಬ ಹೆಸರನ್ನು ತ್ಯಜಿಸಿ 'ವಿಷ್ಣುವರ್ಧನ' (ವಿಷ್ಣುವನ್ನು



ಹೆಚ್ಚಿಸುವವನು) ಎಂಬ ಹೆಸರನ್ನು ಸ್ವೀಕರಿಸಿದನು.

* ಧಾರ್ಮಿಕ ಸಹಿಷ್ಣುತೆ: ಧರ್ಮ ಬದಲಾಯಿಸಿದರೂ, ವಿಷ್ಣುವರ್ಧನನು ತನ್ನ ಸಾಮ್ರಾಜ್ಯದಲ್ಲಿ ಧಾರ್ಮಿಕ ಸಹಿಷ್ಣುತೆಯನ್ನು ಕಾಯ್ದುಕೊಂಡನು. ಜೈನ ಮತ್ತು ಶೈವ ಧರ್ಮಗಳಿಗೂ ಸಮಾನವಾಗಿ ಪ್ರೋತ್ಸಾಹ ನೀಡಿದನು.

ವಿಷ್ಣುವರ್ಧನನ ಧಾರ್ಮಿಕ ನಿರ್ಮಾಣಗಳು:

ತಲಕಾಡು ವಿಜಯ ಮತ್ತು ಧರ್ಮ ಪರಿವರ್ತನೆಯ ನಂತರ, ಇವನು ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮದ ಉನ್ನತಿಗಾಗಿ ಅನೇಕ ಸ್ಮಾರಕಗಳನ್ನು ನಿರ್ಮಿಸಿದನು.

* ಬೇಲೂರು ಚೆನ್ನಕೇಶವ ದೇವಾಲಯ (ಕ್ರಿ.ಶ. 1117): ಇದು ಹೊಯ್ಸಳ ವಾಸ್ತುಶಿಲ್ಪದ ಮತ್ತು ವಿಷ್ಣುವರ್ಧನನ ಅತಿದೊಡ್ಡ ಕೊಡುಗೆಗಳಲ್ಲಿ ಒಂದಾಗಿದೆ. ಚೋಳರ ಮೇಲಿನ ವಿಜಯದ ಸಂಕೇತವಾಗಿ ಇವನು ಈ ಭವ್ಯವಾದ ದೇವಾಲಯವನ್ನು ನಿರ್ಮಿಸಿದನು. ಇದರ ಸೂಕ್ಷ್ಮ ಕೆತ್ತನೆಗಳು, ಶಿಲ್ಪಕಲೆ ಮತ್ತು ವಾಸ್ತುಶಿಲ್ಪವು ಇಂದಿಗೂ ವಿಶ್ವ ವಿಖ್ಯಾತವಾಗಿದೆ.

* ಇತರ ದೇವಾಲಯಗಳು:
* ಹಾಸನದ ಕೇಶವ ದೇವಾಲಯ.
* ತಲಕಾಡಿನ ಕೇಶವ ದೇವಾಲಯ.
* ಮೈಸೂರಿನ ನಾರಾಯಣ ದೇವಾಲಯ.
* ಮಂಡ್ಯದ ಕೀರ್ತಿನಾರಾಯಣ ದೇವಾಲಯ (ತಲಕಾಡು ವಿಜಯದ ಸ್ಮಾರಕ).

### ■ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕೊಡುಗೆ (ಹೊಯ್ಸಳ ಶೈಲಿಯ ಪೋಷಕ)

ವಿಷ್ಣುವರ್ಧನನ ಕಾಲದ ಹೊಯ್ಸಳ ದೇವಾಲಯಗಳ ಸರಣಿಯು ಕನ್ನಡ ನಾಡಿನ ಕಲಾ ಇತಿಹಾಸದಲ್ಲಿ ಒಂದು ವಿಶಿಷ್ಟ ಶೈಲಿಗೆ ಜನ್ಮ ನೀಡಿತು.

ಹೊಯ್ಸಳ ವಾಸ್ತುಶಿಲ್ಪದ ಉನ್ನತಿ:

* ಬೇಲೂರು ಮತ್ತು ಹಳೇಬೀಡು: ವಿಷ್ಣುವರ್ಧನನು ತನ್ನ ರಾಜಧಾನಿಯನ್ನು ಬೇಲೂರುಗೆ ಸ್ಥಳಾಂತರಿಸಿ, ಅಲ್ಲಿ ಚೆನ್ನಕೇಶವ ದೇವಾಲಯವನ್ನು ನಿರ್ಮಿಸಿದನು. ಇವನ ನಂತರ ಹಳೇಬೀಡು ಅಭಿವೃದ್ಧಿ ಹೊಂದಿತು. ಈ ಎರಡೂ ಸ್ಥಳಗಳು ಹೊಯ್ಸಳ ಕಲೆಯ ಪ್ರಮುಖ ಕೇಂದ್ರಗಳಾದವು.

* ಶಿಲ್ಪಕಲೆಯ ಉತ್ಕೃಷ್ಟತೆ: ಹೊಯ್ಸಳ ದೇವಾಲಯಗಳ ತಳಹದಿ ನಕ್ಷತ್ರಾಕಾರದಲ್ಲಿರುವುದು, ಅವುಗಳ ಮೇಲಿನ ಮಹಾ ಶಿಲ್ಪಕಲೆಗಳು (ಮದನಿಕೆ, ನೃತ್ಯ ಭಂಗಿಗಳು, ಪುರಾಣದ ಕಥೆಗಳು) ಮತ್ತು ಸೂಕ್ಷ್ಮ ಕೆತ್ತನೆಗಳು ಇವನ ಕಲಾಭಿಮಾನಕ್ಕೆ ಸಾಕ್ಷಿಯಾಗಿವೆ.

ಕನ್ನಡ ಸಾಹಿತ್ಯಕ್ಕೆ ಆಶ್ರಯ:

* ವಿಷ್ಣುವರ್ಧನನು ಸ್ವತಃ ಸಾಹಿತ್ಯ ಪೋಷಕನಾಗಿದ್ದನು. ಇವನ ಆಸ್ಥಾನದಲ್ಲಿ ಪ್ರಖ್ಯಾತ ಕನ್ನಡ ಕವಿಗಳಾದ ರಾಜಾದಿತ್ಯನಿಗೆ ಆಶ್ರಯವಿತ್ತು. ರಾಜಾದಿತ್ಯನು ಗಣಿತಶಾಸ್ತ್ರ ಮತ್ತು ಜ್ಯೋತಿಷ್ಯದ ಬಗ್ಗೆ ಕನ್ನಡದಲ್ಲಿ ಮಹತ್ವದ ಕೃತಿಗಳನ್ನು ಬರೆದನು.

4. ಅಂತಿಮ ವರ್ಷಗಳು ಮತ್ತು ಸಾಮ್ರಾಜ್ಯ ವಿಸ್ತರಣೆ

ತನ್ನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ, ವಿಕ್ರಮಾದಿತ್ಯನು ಚಾಲುಕ್ಯರ ದುರ್ಬಲತೆಯನ್ನು ಸಂಪೂರ್ಣವಾಗಿ ಬಳಸಿಕೊಂಡು, ಹೊಯ್ಸಳ ಸಾಮ್ರಾಜ್ಯವನ್ನು ಡೆಕನ್ ಪ್ರದೇಶದ ಪ್ರಮುಖ ಶಕ್ತಿಯನ್ನಾಗಿ ಮಾಡಿದನು.

ಚಾಲುಕ್ಯರ ಮೇಲಿನ ವಿಜಯಗಳು:

* ಸ್ವಾತಂತ್ರ್ಯದ ಘೋಷಣೆ: ಆರನೆಯ ವಿಕ್ರಮಾದಿತ್ಯನ ಮರಣದ ನಂತರ ಚಾಲುಕ್ಯರ ಆಡಳಿತದಲ್ಲಿ ಅರಾಜಕತೆ ಉಂಟಾದಾಗ, ವಿಷ್ಣುವರ್ಧನನು ಚಾಲುಕ್ಯರ ಮೇಲೆ ಸತತ ದಾಳಿ ಮಾಡಿ ಹಲವು ಪ್ರಮುಖ ಕೋಟೆಗಳನ್ನು ಗೆದ್ದನು. ಈ ವಿಜಯಗಳ ಮೂಲಕ ಹೊಯ್ಸಳರು ಸಾರ್ವಭೌಮರಾಗಿ ಪರಿವರ್ತನೆಗೊಂಡರು.





ರೂಪ ಮಂಜುನಾಥ
ಹೊಳೆನರಸೀಪುರ

* ಗಡಿ ವಿಸ್ತರಣೆ: ವಿಷ್ಣುವರ್ಧನನ ಆಳ್ವಿಕೆಯ ಕೊನೆಯ ಹೊತ್ತಿಗೆ, ಹೊಯ್ಸಳರ ಸಾಮ್ರಾಜ್ಯವು ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳಿಂದ ಉತ್ತರದಲ್ಲಿ ಕೃಷ್ಣಾ ನದಿಯವರೆಗೆ ಮತ್ತು ಪೂರ್ವದಲ್ಲಿ ರಾಯಚೂರಿನಿಂದ ಪಶ್ಚಿಮದಲ್ಲಿ ಕರಾವಳಿಯವರೆಗೂ ವಿಸ್ತರಿಸಿತು.

* ಪರಂಪರೆ: ವಿಷ್ಣುವರ್ಧನನು ತನ್ನ ಸಾಮ್ರಾಜ್ಯದ ಬುನಾದಿಯನ್ನು ಭದ್ರಪಡಿಸಿ, ತನ್ನ ನಂತರ ಬಂದ ದೊರೆಗಳಿಗೆ ಒಂದು ಬೃಹತ್ ಮತ್ತು ಸ್ಥಿರವಾದ ರಾಜ್ಯವನ್ನು ಬಿಟ್ಟುಹೋದನು. ಆತನ ಮಗ ಮೊದಲನೆಯ ನರಸಿಂಹ ಮತ್ತು ಮೊಮ್ಮಗ ಎರಡನೆಯ ಬಲ್ಲಾಳನ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯವು ಸಂಪೂರ್ಣ ಭಾರತದಲ್ಲಿ ಪ್ರಬಲ ಶಕ್ತಿಯಾಗಿ ಮೆರೆಯಿತು. ವಿಷ್ಣುವರ್ಧನನು ಕನ್ನಡ ನಾಡಿನ ಇತಿಹಾಸದಲ್ಲಿ ಕೇವಲ ಒಬ್ಬ ರಾಜನಾಗಿ ಉಳಿಯದೆ, ತನ್ನ ತಲಕಾಡು ವಿಜಯದ ಮೂಲಕ ಹೊಯ್ಸಳರಿಗೆ ಸ್ವಾತಂತ್ರ್ಯ ತಂದುಕೊಟ್ಟ, ತನ್ನ ಧಾರ್ಮಿಕ ಪರಿವರ್ತನೆಯ ಮೂಲಕ ವೈಷ್ಣವ ಸಂಸ್ಕೃತಿಯನ್ನು ಪೋಷಿಸಿದ ಮತ್ತು ಬೇಲೂರಿನ ಚೆನ್ನಕೇಶವ ದೇವಾಲಯದಂತಹ ಅಮರ ವಾಸ್ತುಶಿಲ್ಪದ ಮೂಲಕ ಕನ್ನಡ ಕಲೆಗೆ ಹೊಸ ಆಯಾಮ ನೀಡಿದ ಮಹಾ ಚಕ್ರವರ್ತಿಯಾಗಿದ್ದಾನೆ. ತಾಯ್ನುಡಿಗೆ ದುಡಿದು ಮಡಿದ ಇಂಥ ವೀರರಿಗೆ ನಮ್ಮ ಹೃನ್ಮನದಿಂದ ವಂದಿಸೋಣ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,